ಬಸವರಾಜ ಬಳಿಗಾರ ಸಂಪಾದಕತ್ವದಲ್ಲಿ

KARKAN/2021/27600

# ಕರುನಾಡ ಕಂದ

ಪಾಕ್ಷಿಕ

ಸಂಪುಟ-1 । ಸಂಚಿಕೆ-5 । ದಿನಾಂಕ: 01-01-2022 ಪುಟಗಳು: 20


ಬೆಲೆ: 20/-



## ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಸಂವಿಧಾನ ಮತ್ತು ವಾಸ್ತವ !

## ದೂರದೃಷ್ಟಿಯ ಮಹಾನಾಯಕ ಅಟಲ್ ಬಿಹಾರಿ ವಾಜಪೇಯಿ






## ಕೆಸರಿನಿಂದ ಅಮೃತಕಳಸವನೆತ್ತಿ ಕೊಡುತ್ತಿರುವ ರೈತ ನಿನಗೊಂದು ನನ್ನ ಸಲಾಮ್....

## ಸಗರ ನಾಡಿನವರು ಎಂದು ಹೇಳಿಕೊಳ್ಳಲು ಇವರಿಗೆ ಹೆಮ್ಮೆ..

## ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಬೀಳದಿದ್ದರೆ ಹೋರಾಟ ಅನಿವಾರ್ಯ: ಶ್ರೀದೇವಿ ಆರ್ ನಾಯಕ






## ಮಲೆನಾಡಿನಲ್ಲಿ ಹೆಚ್ಚಿದ ಶ್ರೀಗಂಧದ ದಂಧೆ

## ನಾಡ ದ್ರೋಹಿಗಳಿಗೆ ಕಠಿಣ ಶಿಕ್ಷೆಯಾಗಲಿ

## ಮುದಗಲ್ ಕೋಟೆಯ ಮಾನ ಹರಾಜು ಹಾಕಿದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು



ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

### ಮೇರುನಟ ಪುನಿತ್ ರಾಜಕುಮಾರ್‌ಗೆ ನುಡಿನಮನ

## ಉದ್ಯಮಿ ಎಂ.ಐ. ಇಬ್ರಾಹಿಂ ಅಲಿ ಇವರಿಗೆ ರಕ್ತರಾತ್ರಿ ಚಾಲನಾ ಕಾರ್ಯಕ್ರಮದಲ್ಲಿ ಆತ್ಮೀಯ ಸನ್ಮಾನ





ಗಂಗಾವತಿ: ಇಲ್ಲಿನ ಪಬ್ಲಿಕ್ ಕ್ಲಬ್ ಆವರಣದಲ್ಲಿ ದಿ.ನಾಗರಾಜ್ ನಾಗಪ್ಪ ಶಿರವಾರ ನಗರ ಮತ್ತು ಗ್ರಾಮೀಣಾಭಿವೃದ್ಧಿ ಕಲಾ ಸಂಸ್ಥೆಯಿಂದ ಪ್ರದರ್ಶಿಸಲ್ಪಟ್ಟ ರಕ್ತರಾತ್ರಿ ನಾಟಕ ಚಾಲನಾ ಕಾರ್ಯಕ್ರಮದಲ್ಲಿ ಉದ್ಯಮಿ ಎಂ.ಐ.ಇಬ್ರಾಹಿಂಅಲಿ ಬೆಂಗಳೂರ ಇವರು ಸೇರಿದಂತೆ ಅನೇಕ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಮಿಡಿಯಕ್ಲಬ್ ಅಧ್ಯಕ್ಷ ರಾಮಮೂರ್ತಿ ನವಲಿ, ಕೊಪ್ಪಳ ಜಿಲ್ಲಾ ಕಸಾಪ ಅಧ್ಯಕ್ಷ ಶರಣೇಗೌಡ ಮಾಲಿಪಾಟೀಲ್, ಹಿರಿಯ ಇತಿಹಾಸ ಸಂಶೋಧಕ ಡಾ.ಶರಣಬಸಪ್ಪ ಕೋಲ್ಕಾರ್, ಸಾಹಿತಿಗಳಾದ ಎಸ್.ವಿ.ಪಾಟೀಲ್ ಗುಂಡೂರು, ಕರುಣಾವಾಣಿ ಪತ್ರಿಕೆ ಸಂಪಾದಕರಾದ ಡಾ.ಸಿ.ಮಹಾಲಕ್ಷ್ಮೀ ಕೇಸರಹಟ್ಟಿ, ಕಾರ್ಯಕ್ರಮದ ರೂವಾರಿ ವಿರುಪಾಕ್ಷಪ್ಪ ಶಿರವಾರ ಸಿನಿ ಕಲಾವಿದ ವಿಷ್ಣುತೀರ್ಥ ಜೋಷಿ ಇವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗಂಗಾವತಿ ತಾಲೂಕಾ ಅಧ್ಯಕ್ಷ ನಾಗರಾಜ್ ಹೆಚ್.ಇಂಗಳಗಿ, ಹಾರ್ಮೋನಿಯಂ ಮೇಷ್ಟ್ರು ಕುರುಗೋಡು ಚನ್ನಪ್ಪ, ಪ್ರಾಚಾರ್ಯ ಬಸಪ್ಪ ನಾಗೋಲಿ, ಹೊಮ್ಮಿನಾಳ್ ಮಹಂತಯ್ಯ, ಯಂಕಪ್ಪ ಸಿ.ವಕೀಲರು, ಬಂಡ ಆದೇಪ್ಪ, ಪಂಪಯ್ಯಸ್ವಾಮಿ, ಜಂಬುನಾಥ ಐಲಿ, ಸಿದ್ದಪ್ಪ ನಾಯಕ ಸೇರಿದಂತೆ ಇತರರಿದ್ದರು.

ಇದಕ್ಕೂ ಮುನ್ನಾ ಇತ್ತೀಚಿಗೆ ಅಗಲಿದ ಮೇರುನಟ ಪುನೀತ್ ರಾಜುಕುಮಾರ್ ಅವರಿಗೆ ಗಾಯಕ ಪಂಪಾಪತಿ ಇಂಗಳಗಿ ನುಡಿನಮನ ಸಲ್ಲಿಸಿದರು.

## ಗಣಿತಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್




ಶ್ರೀನಿವಾಸ ರಾಮಾನುಜನ್ ಸಾಮಾನ್ಯರಿಗೆ ಅರ್ಥ–ವಾಗುವುದಿರಲಿ, ಆ ಕಾಲದ ಸರ್ವ ಶ್ರೇಷ್ಠ ಶಿಕ್ಷಣ ಕ್ಷೇತ್ರವಾದ ಕೇಂಬ್ರಿಜ್ ನಲ್ಲಿಯೇ ಆತನ ಬಗ್ಗೆ ವಿವ–ರಿಸಲು ಮಹಾನ್ ಗಣಿತಜ್ಞರಾದ ಜಿ.ಎಚ್. ಹಾರ್ಡಿ, ಬರ್ಟಂಡ್ ರಸೆಲ್, ಮೇಜರ್ ಮೆಕ್ ಮಹಾನ್ ಹಾಗೂ ಜಾನ್ ಲಿಟಲ್‌ವುಡ್ ಅಂತಹವರು ಬೇಕಾಯಿತು. ಲಿಟಲ್‌ವುಡ್ ಅಂತೂ ರಾಮಾನುಜನ್ ಅವರನ್ನು ನ್ಯೂಟನ್ನನಿಗೆ ಹೋಲಿಸಿದ್ದೂ ದಾಖಲೆಗಳಲ್ಲಿ ಇದೆ. ಅಷ್ಟೊಂದು ಅಂಕೆ ಸಂಖ್ಯೆಗಳ ಲೋಕದಲ್ಲಿ ವಿಹರಿಸುತ್ತಿದ್ದ ವಿಚಿತ್ರ ಪ್ರತಿಭೆ. ಕೇವಲ ತನ್ನ ಅಂತಃಪ್ರಜ್ಞೆಯಿಂದಲೇ –ಸಾಮಾನ್ಯವಾಗಿ ಗಣಿತ ಬಯಸುವ ಯಾವುದೇ ತರ್ಕಗಳನ್ನೂ ನೀಡದೆ– ಮನಸ್ಸಿನ ಗ್ರಹಿಕೆಯಿಂದ ಸೂತ್ರಗಳನ್ನು ನೀಡಬಲ್ಲ ಏಕ ಮಾತ್ರವ್ಯಕ್ತಿಯಾಗಿದ್ದಾತ. ಆ ಕಾಲಕ್ಕಾಗಲೇ ಪ್ರಮಾಣೀಕರಿಸದ ಪುರಾವೆಗಳಿಲ್ಲದೆ ಸತ್ಯವನ್ನು ನಂಬದಿದ್ದ ವಿಜ್ಞಾನದ ಅರಿವಿಗೆ ಈತನ ಸಾಕ್ಷಿ ಪ್ರಜ್ಞೆ ನಿಗೂಢವಾಗಿ ಕಂಡದ್ದು ನಿಜ. ಅದಕ್ಕೇ ಆಧುನಿಕ ವಿಜ್ಞಾನದ ರೀತಿ ರಿವಾಜುಗಳ ನಡೆಯಲ್ಲೊಂದಿಷ್ಟು ಕಲಿಕೆಯನ್ನು ರೂಡಿಸಿಕೊಳ್ಳಲು ಆತನ ಮಾರ್ಗದರ್ಶಕರಾದ ಹಾರ್ಡಿಯು ಬಯಸಿದ್ದರು. ಹಾರ್ಡಿಯು ಮಾರ್ಗದರ್ಶಕ–ಗುರು ಮಾತ್ರವಲ್ಲ! ರಾಮಾನುಜನ್‌ಗೆ ಎಲ್ಲವೂ ಆಗಿದ್ದಾತ. ಉಪಾಧ್ಯಾಯರು ಹೀಗೂ ಇರಬಹುದಾ ಎನ್ನುವಷ್ಟರ ಮಟ್ಟಿಗೆ ಹಾರ್ಡಿಯವರ ವ್ಯಕ್ತಿತ್ವವಾಗಿತ್ತು.

ಸ್ವತಃ ರಾಮಾನುಜನ್ ಅವರೇ ತನಗೆ ಈ ಗಣಿತ ಸೂತ್ರಗಳೆಲ್ಲ ಹೇಗೆ ಹೊಳೆಯುತ್ತಿದ್ದವು ಎಂದು ಹೇಳಿದ್ದಾರೆ.

ಅವರ ಮಾತಿನ ಪ್ರಕಾರ "ದೈವತ್ವದ ವಿಚಾರವಿಲ್ಲದ ದೈವತ್ವದ ಪ್ರೇರಣೆಯಿಲ್ಲದ ಯಾವುದೇ ಗಣಿತ ಸೂತ್ರವೂ ನನ್ನ ಪಾಲಿಗೆ ಅರ್ಥಹೀನ..." ಮಹಾ ದೈವಭಕ್ತನಾಗಿದ್ದ ರಾಮಾನುಜನ್ ಗೆ ತನ್ನ ಕುಲದೇವತೆ ಮಹಾಲಕ್ಷ್ಮಿಯ ಮೇಲೆ ಅಪರಿಮಿತ ವಿಶ್ವಾಸ... ನಾಮಕ್ಕಲ್ ನ ಮಹಾಲಕ್ಷ್ಮಿ ದೇವಿಯ ಜೊತೆಗೆ ಆತ ಆರಾಧಿಸುತ್ತಿದ್ದುದು ನರಸಿಂಹ ಸ್ವಾಮಿಯನ್ನು ... ತನಗಾಗುತ್ತಿದ್ದ ವಿಶೇಷ ಅನುಭವಗಳನ್ನು ಸ್ವತಹ ರಾಮಾನುಜನ್ ಹೀಗೆ ಹೇಳಿಕೊಂಡಿದ್ದರು...."ನಿದ್ರೆಯಲ್ಲಿದ್ದಾಗ ನನಗೆ ವಿಲಕ್ಷಣ ಅನುಭವಗಳಾಗುತ್ತಿದ್ದವು... ಕಣ್ಣ ಮುಂದೆ ಕೆಂಪು ತೆರೆ– ಹರಿಯುವ ರಕ್ತದ ತೆರೆಯೊಂದು ಮೂಡುತ್ತಿತ್ತು... ಅದನ್ನು ನಾನು ಹಾಗೆಯೆ ಗಮನಿಸುತ್ತಿದ್ದೆ. ತತ್ ಕ್ಷಣವೇ ಒಂದು ಕೈ ಅದರಲ್ಲಿ ಬರೆಯಲು ಪ್ರಾರಂಭಿಸುತಿತ್ತು... ನಾನು ಸಂಪೂರ್ಣ ಜಾಗೃತನಾಗುತ್ತಿದ್ದೆ... ಆ ಕೈ ಅಸಂಖ್ಯಾತ ಧೀರ್ಘ ವೃತ್ತಗಳ ಸಮಗ್ರ ಸಂಖ್ಯೆಗಳನ್ನು ಬರೆಯುತ್ತ ಹೋಗುತ್ತಿತ್ತು... ಅದು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ದಾಖಲಾಗುತ್ತಿದ್ದವು.... ಅದನ್ನೇ ಮರುದಿನ ನಾನು ಬರೆದಿಟ್ಟುಕೊಳ್ಳುತ್ತಿದ್ದೆ... " ಎಂದು ಹೇಳಿದ್ದಾರೆ.

ಅಂತಹ ರಾಮಾನುಜನ್ ಜನಿಸಿ ಇಂದಿಗೆ 134 ವರ್ಷಗಳೇ ಕಳೆದಿವೆ. ಅವರ ನೆನಪಿಗಾಗಿ ರಾಷ್ಟ್ರೀಯ ಗಣಿತ ದಿನವನ್ನಾಗಿ ಆಚರಣೆ ಮಾಡುತ್ತೇವೆ.

––ಶಿವರಾಜ್ ಅರಸು

## ಮುಂಬೈ ಯುವ ಪ್ರತಿಭೆ ದುರ್ಗಪ್ಪ




ಮಹಾರಾಷ್ಟ್ರ ರಾಜ್ಯದ ಸೋಲಾಪುರ ಜಿಲ್ಲೆಯ ತಂದೆ ಯಲ್ಲಪ್ಪ ತಾಯಿ ಭೀಮವ್ವ ದಂಪತಿಗಳ ಮುದ್ದಿನ ಮಗ ದುರ್ಗಪ್ಪ ಕೋಟಿ ಯವರ ತಮ್ಮ ಶಿಕ್ಷಣವನ್ನು ಎಸ್ ಎಸ್ ಸಿ 2000 ರಲ್ಲಿ ಸಿದ್ದೇಶ್ವರ ಕನ್ನಡ ಶಾಲೆ ಸೋಲಾಪುರ ಪಿಯುಸಿ 2002 ಮಂಗರೊಳೆ ಪದವಿ ಪೂರ್ವ ವಿದ್ಯಾಲಯ ಅಕ್ಕಲಕೋಟ ಕಾಶಿ ವಿಶ್ವೇಶ್ವರ ಶಿಕ್ಷಕ ವಿದ್ಯಾಲಯ ಅಕ್ಕಲಕೋಟ ಡಿ, ಎಡ್ ಪದವಿ ಉತ್ತೀರ್ಣ2006 ರಲ್ಲಿ ಬಿಎ2010 ರಲ್ಲಿ ಎಂಎ2012 ರಲ್ಲಿ ಪದವಿಯನ್ನು ಸಂಗಮೇಶ್ವರ ಕಾಲೇಜು ಸೋಲಾಪುರದಲ್ಲಿ ಉತ್ತೀರ್ಣ ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಸಾಧನೆ ಈ ವಿಷಯ ಕುರಿತು 2014 ರಲ್ಲಿ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಮುಂಬೈ ಕನ್ನಡ ಗದ್ಯ ಸಾಹಿತ್ಯ ಕುರಿತು ಪಿ ಎಚ್ ಡಿ ಪದವಿ ಪಡೆದಿದ್ದಾರೆ.

ಶಿಕ್ಷಕ ಸೇವೆ.

ಮುಂಬೈ ಸಂತ ಕಕ್ಕಯ್ಯ ಮಹಾನಗರ ಪಾಲಿಕೆ ಕನ್ನಡ ಶಾಲೆಯಲ್ಲಿ2008 ರಿಂದ2017 ವರೆಗೆ ಶಿಕ್ಷಕರಾಗಿ ಸೇವೆ2017 ರಿಂದ ಶಿವ ಡಿ ಮಹಾನಗರ ಪಾಲಿಕೆ ಕನ್ನಡ ಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿ ಸೇವೆ ಮಾಡುತ್ತಿದ್ದಾರೆ . ಮುಂಬೈ ಇತರ ಎಲ್ಲಾ ಭಾಷಿಕರ ಶಾಲೆಗಳಲ್ಲಿ 2017 18ರ ಶಿವ ಡಿ ಮಹಾನಗರ ಪಾಲಿಕೆ ಕನ್ನಡ ಶಾಲೆಯ ಆರನೆಯ ತರಗತಿಯ ಶಿಕ್ಷಣಿಕ ಗುಣಮಟ್ಟವನ್ನು ಪರಿಗಣಿಸಿ ಪ್ರಗತ ಶಿಕ್ಷಣಿಕ ಮಹಾರಾಷ್ಟ್ರ ಕಾರ್ಯಕ್ರಮದ ಅಂತರ್ಗತ ಪ್ರಶಸ್ತಿ ಪತ್ರ ಮುಂಬೈ ಮಹಾನಗರ ಪಾಲಿಕೆ ಶಿಕ್ಷಣ ವಿಭಾಗದ ವತಿಯಿಂದ ನೀಡುವ ವ್ಯಕ್ತಿ ಮಹತ್ವ ವಿಕಾಸ ಪ್ರ ಶಿಕ್ಷಣದಲ್ಲಿ ಮುಖ್ಯೋಪಾಧ್ಯಾಪಕ ನಾಗಿ ಶಾಲೆಯ ಸುಧಾರಣೆ ಕುರಿತು ಕಾರ್ಯಕುಶಲತೆಯ ಕುರಿತು ಪ್ರಶಸ್ತಿ ಪತ್ರ 2019 ರಲ್ಲಿ ಮಹಾನಗರ ಪಾಲಿಕೆ ಶಿಕ್ಷಣ ವಿಭಾಗದಿಂದ ಆಯೋಜಿಸಿದ ವ್ಯಕ್ತಿ ಮಹತ್ವ ವಿಕಾಸ ಮತ್ತು ಜೀವನಶೈಲಿ ಕು–ರಿತ ಕಾರ್ಯಕ್ರಮದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿ ಪತ್ರ ಮಹಾರಾಷ್ಟ್ರ ರಾಜ್ಯ ಮಹಿಳಾ ಮತ್ತು ಬಾಲ ವಿಕಾಸ ಮಂತ್ರಿ ವರ್ಷ ಗಾಯಕ್ವಾಡ್ ಇವರಿಂದ ಅಭಿನಂದನ ಪತ್ರ ಪಡೆದಿದ್ದಾರೆ ದುರ್ಗಪ್ಪ ಅವರಿಗೆ ಭಾರತೀಯ ನೀತಿ ಆಯೋಗ ಭಾರತೀಯ ಸಾಮಾಜಿಕ ನ್ಯಾಯ ಸಮಿತಿ ಹಾಗೂ ಅಂತರಾಷ್ಟ್ರೀಯ ಯುನೈಟೆಡ್ ಸ್ಟೇಟ್ ಸಂಘಟನೆ ಜಿನಿವಾ ಇವುಗಳ ಸಹಭಾಗಿತ್ವದ ಯಶ್ ಟ್ರಸ್ಟ್ ನೀಡುವ 2020 ಕರ್ನಾಟಕ ಶಿಕ್ಷಣ ಗೌರವ ಉತ್ತಮ ಶಿಕ್ಷಕ ಪ್ರಶಸ್ತಿ ದೊರಕಿದೆ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆಗಾಗಿ ಬೆಳಗಾವಿ ಕಸ್ತೂರಿ ಸಿರಿಗನ್ನಡ ವೇದಿಕೆ ವಿದ್ಯಾಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

ಸಾಹಿತ್ಯ ಸೇವೆ.

ಮುಂಬೈಯಲ್ಲಿ ಕನ್ನಡ ಡಿಔಡಿ ಮ ಸಂಕಲನ ಅದೇ ರೀತಿ ಒಳನಾಡು ಹಾಗೂ ಹೊರನಾಡು ಪತ್ರಿಕೆಗಳಲ್ಲಿ ಬಿಡಿ ಲೇಖನಗಳು ಪ್ರಕಟಗೊಂಡಿದೆ ಮುಂಬೈ ಜನಪ್ರಿಯ ಸಂಸ್ಥೆಯಾದ ಕರ್ನಾಟಕ ಸಂಘ ಮಾತುಂಗ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕಳೆದ ಆರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ಡೊಂಬಿವಲಿ ಕರ್ನಾಟಕ ಸಂಘ ಸಾಹಿತ್ಯ ಕಮ್ಮಟದಲ್ಲಿ ಮುಂಬೈ ಕನ್ನಡ ಸಾಹಿತ್ಯ ಕು–ರಿತು ಉಪನ್ಯಾಸ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗ ಶ್ರೀನಿವಾಸ ಜೋಕಟ್ಟೆ ಅವರ ಗದ್ಯ ಸಾಹಿತ್ಯದ



ಅನನ್ಯತೆ ಕುರಿತು ಉಪನ್ಯಾಸ ಮುಂಬೈಯಲ್ಲಿ ಮುಂಬೈ ಲೇಖಕರ ಗ್ರಂಥ ಬಿಡುಗಡೆ ಸಂದರ್ಭದಲ್ಲಿ ಲೇಖಕರ ಗ್ರಂಥ ಪರಿಚಯದ ಭಾಷಣ ಮುಂಬೈ ಕನ್ನಡ ದಿನಪತ್ರಿಕೆಗಳಾದ ಕರ್ನಾಟಕ ಮಲ್ಲ ಹಾಗೂ ಉದಯವಾಣಿ ಪತ್ರಿಕೆಯ ವರದಿಗಾರನಾಗಿ ಸೇವೆ.

ಮುಂಬೈ ಕರ್ನಾಟಕ ಸಂಘದ ಮುಖವಾಣಿಯಾದ ಸ್ನೇಹ ಸಂಬಂಧ ಮಾಸ ಪತ್ರಿಕೆಯ ಸಂಪಾದಕೀಯ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಮುಂಬೈ ವಿದ್ಯಾನಿಲಯ ಕನ್ನಡ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ ಜೆ.ಎನ್ ಉಪಾಧ್ಯ ಅವರ ಮಾರ್ಗದರ್ಶನದಲ್ಲಿ ಎಂಫಿಲ್ ಪದವಿ ಪಡೆದು ಪ್ರಬಂಧವನ್ನು ಅಭಿಜಿತ್ ಪ್ರಕಾಶನ ಮೂಲಕ ಪ್ರಕಟಿಸಿದ್ದಾರೆ.

ಸಾಹಿತ್ಯವಲಯದಲ್ಲಿ ಕಳೆದ 150 ವರ್ಷಗಳಲ್ಲಿ ರಚನೆಯಾದ ಗದ್ಯ ಕೃತಿಗಳ ಮೇಲೆ ಬೆಳಕು ಚೆಲ್ಲಿರುವುದು ಮಹಾಪ್ರಬಂಧ ವಿದ್ವಾಂಸರ ಮನಗೆದ್ದಿದೆ ಈ ಸಾಧನೆಗೆ ಪ್ರೋತ್ಸಾಹಿಸುತ್ತಿರುವ ಮುಂಬೈ ಸಾಹಿತಿಗಳಾದ ಮಲ್ಲಿಕಾರ್ಜುನ್ ಬಡಿಗೇರ್ ವಿಶ್ವೇಶ್ವರ ಮೇಟಿ ಸೋಮಶೇಖರ್ ಮಸಳಿ ಹಾಗೂ ಭಾರತೀಯ ಕನ್ನಡ ಸಾಹಿತ್ಯ ಬಳಗ ರಾಜ್ಯ ಘಟಕದ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ಲೇಖಕರು– ದಯಾನಂದ ಪಾಟೀಲ ಅಧ್ಯಕ್ಷರು ಭಾರತೀಯ ಕನ್ನಡ ಸಾಹಿತ್ಯ ಬಳಗ ಮಹಾರಾಷ್ಟ್ರ

ಕರ್ನಾಟಕದ ಪ್ರತಿ ತಾಲೂಕಿನಲ್ಲಿ ಪಾರ್ಟ್ ಟೈಮ್ (ಗೌರವ ಧನ)

ಫುಲ್ ಟೈಮ್‌ಗೆ (ಸಂಬಳ) ಸ್ಥಳೀಯ ವರದಿಗಾರರಾಗಿ ಕಾರ್ಯ ನಿರ್ವಹಿಸಲು ಆಸಕ್ತ ಯುವಕ–ಯುವತಿಯರು ತಮ್ಮ ಹೆಸರು ಹಾಗೂ ತಾಲ್ಲೂಕು ವಾಟ್ಸ್ ಆಪ್ ಅಥವಾ ಕರೆ ಮಾಡಿ

ಬಸವರಾಜ ಬಳಿಗಾರ ಸಂಪಾದಕರು,
'ಕರುನಾಡ ಕಂದ' ಮೊ : 9986366909

ಈಗಾಗಲೇ ಮಾಧ್ಯಮದ ಅನುಭವ ಇದ್ದವರು ಹಾಗೂ ಹೊಸದಾಗಿ ಸೇರಬಯಸುವವರು ಸಂಪರ್ಕಿಸಬಹುದು.

ನಿಮ್ಮ ಸ್ಥಳೀಯ ಸುದ್ದಿ ಹಾಗೂ ಎಲ್ಲಾ ರೀತಿಯ ಜಾಹೀರಾತುಗಳಿಗಾಗಿ ಕರೆ ಮಾಡಿ 9986366909

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

### ಜಾತಿ ಭೂತ

ಜಾತಿಯೊಳಗೆ ಏನಿದೆ ಮನುಜ? ನೀತಿ ಮುಖ್ಯ,
ಜಾತಿ ತ್ಯಜಿಸಿದರೆ ಈ ಸಮಾಜ, ದೇಶ ಸೌಖ್ಯ!
ಜಾತಿ ತರದು ಎಂದು ನಿನಗೆ ಸ್ವಯಂ ಕೀರ್ತಿ,
ಜಾತಿ ಆರಾಧನೆ ಬಿಟ್ಟು ನಾವಾಗೋಣ ಸ್ಪೂರ್ತಿ!

ಜಾತಿ ತುಂಬಲಾರದು ಬಡವರ ಹೊಟ್ಟೆ,
ಜಾತಿ ಕಾಪಾಡುವುದಿಲ್ಲ ಮಾನ, ಕೊಟ್ಟು ಬಟ್ಟೆ,
ಜಾತಿಯನ್ನು ನಿಂದಿಸಿದರೆ ನಿನಗೆ ಅಷ್ಟು ಸಿಟ್ಟೆ?
ಜಾತಿ ಭೂತವನ್ನು ನಂಬಿದರೆ,ನೀನು ಕೆಟ್ಟೆ!

ಹೊಲದಲ್ಲಿ ದಣಿಯುವ ರೈತನಿಗೆ ಇಲ್ಲದ ಜಾತಿ,
ಗಡಿಯಲ್ಲಿ ಕಾಯುವ ಸೈನಿಕನಿಗೆ ಇಲ್ಲದ ಜಾತಿ,
ಗುಡಿಯಲ್ಲಿ ನೆಲೆಸಿರುವ ದೇವರಿಗೆ ಇಲ್ಲದ ಜಾತಿ,
ಕಾರ್ಮಿಕನಿಗೆ ಇಲ್ಲದ ಜಾತಿ, ಕಾಯಕ ಕ್ಕಿಲ್ಲದ ಜಾತಿ,
ನಿನಗೇಕೆ ಗೆಳೆಯ,ಜಾತಿಯೆಂಬ ಭೂತ? ನಿನಗೇಕೆ?

–ವೀರಗಂಟೆಪ್ಪ

## ಹದೆಗೆಟ್ಟಿರುವ ಬಸ್ಸ ನಿಲ್ದಾಣ



ಕಲ್ಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಕರಜಗಿ ಬಸ್ಸ ನಿಲ್ದಾಣ ಸಂಪೂರ್ಣವಾಗಿ ಹದೆಗೆಟ್ಟು ಹೋಗಿದ್ದರೂ ಅಧಿಕಾ–ರಿಗಳು ಮತ್ತು ತಾಲೂಕಿನ ಶಾಸಕರು ಗಮನ ಹ–ರಿಸುತ್ತಿಲ್ಲ ಮಳೆ ಬಂದ್ರೆ ಸಾಕು ಪ್ರಯಾಣಿಕರಿಗೆ ನಿಲ್ದಾಣದಲ್ಲಿ ನಿಲ್ಲಲೂ ಸಹ ಆಗುವುದಿಲ್ಲ.ಅಧಿಕಾ–ರಿಗಳಿಗೆ ಮತ್ತು ಶಾಸಕರಿಗೆ ಕರಜಗಿ ಬಸ್ಸ ನಿಲ್ದಾಣದ ಬಗ್ಗೆ ಕಾಳಜಿ ಇಲ್ಲವೇ? ಎಂದು ಜನ ಸಾಮಾನ್ಯರು ಅನುಮಾನಿಸುತ್ತಿದ್ದಾರೆ.ಒಂದು ಹೋಬಳಿ ಬಸ್ ನಿಲ್ದಾಣ ಸರಿಪಡಿಸಲು ಶಾಸಕರಿಗೆ ಮತ್ತು ಅಧಿಕಾ–ರಿಗಳಿಗೆ ಸಮಯ ಸಿಗುತ್ತಿಲ್ಲವೋ ಮುಂದಿನ ದಿನಗಳಲ್ಲಿ ಈ ಸಮಸ್ಯೆಗೆ ಸೂಕ್ತ ಪರಿಹಾರ ನೀಡದಿದ್ದರೆ ರಾಷ್ಟ್ರ ಹೆದ್ದಾರಿ ತಡೆದು ಹೋರಾಟ ಮಾಡಲಾಗುತ್ತದೆ ಎಂದು ಕರ್ನಾಟಕ ಜನ ಬೆಂಬಲ ವೇದಿಕೆಯ ಕರಜಗಿ ವಲಯ ಅಧ್ಯಕ್ಷರಾದ ಉಮೇಶ ಗೋಪಗೌಡ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

–ಸುನಿಲ್ ಕುಮಾರ್.

## ತಾಲೂಕು ಉಪಾಧ್ಯಕ್ಷರಾಗಿ ಮತ್ತು ತಾಲೂಕ ಪ್ರದಾನ ಕಾರ್ಯದರ್ಶಿಗಳಾದ ಆಯ್ಕೆ



ಕರ್ನಾಟಕ ಜನ ಬೆಂಬಲ ವೇದಿಕೆಯ ಬಡದಾಳ ವಲಯ ಅಧ್ಯಕ್ಷರಾಗಿ ವಿಲಾಸ ನಾಗರೋಳ್ಳಿ ಇವರನ್ನು ತಾಲೂಕು ಉಪಾಧ್ಯಕ್ಷರಾದ ಸಾಗರ್ ಸಂಗೋಳ್ಗಿ ಮತ್ತು ತಾಲೂಕ ಪ್ರದಾನ ಕಾರ್ಯದರ್ಶಿಗಳಾದ ಮಲ್ಲಿಕ್ ಕೊಳ್ಳಿ ಅವರ ಒಪ್ಪಿಗೆ ಮೇರೆಗೆ ಆಯ್ಕೆ ಮಾಡಲಾಯಿತು ಎಂದು ಕರ್ನಾಟಕ ಜನ ಬೆಂಬಲ ವೇದಿಕೆಯ ತಾಲೂಕ ಅಧ್ಯಕ್ಷರಾದ ಉಮೇಶ ಅಂ–ದೋಡಗಿ ಅವರು ತಿಳಿಸಿದ್ದಾರೆ ತಾಲೂಕಿನಲ್ಲಿ ತಳಹದಿಯಿಂದ ಸಂಘಟನೆ ಬಲಿಷ್ಠಗೊಳಿಸುತ್ತಿದ್ದೇವೆ. ತಾಲೂಕಿನ ಅಭಿವೃದ್ಧಿಯೆ ನಮ್ಮ ಹೋರಾಟದ ಫಲ. ಕನ್ನಡ ಎಂಬುದು ಮರೆಯಾಗುತ್ತಿದೆ ಕನ್ನಡಪರ ಹೋರಾಟಗಾರರಿಗೆ ಸರ್ಕಾರ ಮಾನ್ಯತೆ ನೀಡಬೇಕು ಕರ್ನಾಟಕದಲ್ಲಿ ಕನ್ನಡಕ್ಕಾಗಿ ಹೋರಾಡುವ ಹೋರಾಟಗಾರರಿಗೆ ಸರ್ಕಾರ ಅಲ್ಪ ಸ್ವಲ್ಪ ಮಾನ್ಯತೆ ನೀಡಬೇಕು ಎಂದು ಹೇಳಿದರು

–ಸುನಿಲ್ ಕುಮಾರ್

# ಅಪ್ಪಟ ವಜ್ರ

**ಒಂದಾನೊಂದು ಕಾಲದಲ್ಲಿ ಒಬ್ಬ ತಂದೆ ಕಡೆಗಾಲದಲ್ಲಿ, ಮಗನನ್ನು ಕರೆದು** ಪುಟ್ಟದಾದ ಗಂಧದ ಪೆಟ್ಟಿಗೆ ಕೊಟ್ಟು, ನೋಡು ಇದರಲ್ಲಿ ಎರಡು ವಜ್ರ ಗಳಿವೆ. ಎರಡರಲ್ಲೂ ಏನೂ ವ್ಯತ್ಯಾಸ ಕಾಣುವುದಿಲ್ಲ. ಆದರೆ ಇದರಲ್ಲಿ ಒಂದು ಅಪ್ಪಟ ವಜ್ರ, ಇನ್ನೊಂದು ಗಾಜಿನದು. ಇದರಲ್ಲಿ ಅಸಲಿ ವಜ್ರ ಯಾವುದು? ಗಾಜಿನದು ಯಾವುದು ಅಂತ ಇದುವರೆಗೂ ಕಂಡು ಹಿಡಿಯಲಾಗಿಲ್ಲ. ನನ್ನ ತಂದೆ ಇದನ್ನು ನನಗೆ ಕೊಟ್ಟಿದ್ದರು. ನಾನು ಪ್ರಯತ್ನಿಸಿದೆ ಆದರೆ ಆಗಲಿಲ್ಲ. ಈಗ ನಿನಗೆ ಕೊಡುತ್ತಿದ್ದೇನೆ. ನೀನು ಇದನ್ನ, ಅಂತ ಇಷ್ಟು ಹೇಳುತ್ತಿದ್ದಂತೆ ಕಣ್ಣುಮುಚ್ಚಿದನು. ತಂದೆಯನ್ನು ಕಳೆದುಕೊಂಡ ದುಃಖದಲ್ಲಿ ಮಗನು ಸ್ವಲ್ಪ ದಿನ ಹಾಗೆ ಇದ್ದನು.

ಸ್ವಲ್ಪ ದಿನಗಳು ಕಳೆದ ನಂತರ, ಆತನು ವಜ್ರಗಳನ್ನು ಸರಿಯಾಗಿ ಪರಿಶೀಲಿಸಿ, ಅಸಲಿ ವಜ್ರ ಯಾವುದು ಎಂದು ತಿಳಿದುಕೊಂಡು, ಪೆಟ್ಟಿಗೆಯ ಸಮೇತ ರಾಜ್ಯದ ರಾಜನ ಹತ್ತಿರ ಹೋದನು.

ರಾಜನ ಆಸ್ಥಾನಕ್ಕೆ ಬಂದ ಆತನು, ಪೆಟ್ಟಿಗೆಯ ಮುಚ್ಚಳ ತೆಗೆದು ಎರಡು ವಜ್ರಗಳನ್ನು ರಾಜನಿಗೆ ತೋರಿಸಿ, ಪ್ರಭು ಇದು ನಮ್ಮ ತಂದೆ ಸಾಯುವ ಕಡೆಗಳಿಗೆಯಲ್ಲಿ ಕೊಟ್ಟ ವಜ್ರಗಳು. ಇಲ್ಲಿರುವ ಎರಡು ವಜ್ರಗಳಲ್ಲಿ ಒಂದು

ಅಸಲಿ ವಜ್ರ, ಇನ್ನೊಂದು ಗಾಜು, ಆದರೆ ಅಂದಿನಿಂದ ಇಂದಿನವರೆಗೂ ಈ ಎರಡು ವಜ್ರಗಳಲ್ಲಿ ಅಸಲಿ ವಜ್ರ ಯಾವುದೆಂದು ಕಂಡುಹಿಡಿಯಲು ಯಾರಿಂದಲೂ ಸಾಧ್ಯವಾಗಿಲ್ಲ. ಆದ್ದರಿಂದ ಪ್ರಭು ನೀವು ಯಾರಾದರೂ ವಜ್ರ ಪರಿಣ–ತರನ್ನು ಕರೆಸಿ ಇದರಲ್ಲಿ ಅಪ್ಪಟ ವಜ್ರ ಯಾವುದು ಎಂದು ಕಂಡುಹಿಡಿದರೆ ಈ ವಜ್ರವನ್ನು ನಿಮ್ಮ ಕೋಶಾಗಾರಕ್ಕೆ ಕೊಡುತ್ತೇನೆ. ಆದರೆ ಹಾಗೆ ಯಾ–ರಿಂದಲೂ ಕಂಡುಹಿಡಿಯಲಾಗದಿದ್ದರೆ, ವಜ್ರದ ಬೆಲೆಯನ್ನು ನೀವು ನನಗೆ ಕೊಡಬೇಕಾಗುತ್ತದೆ ಎಂದು ಶರತ್ತು ಹಾಕಿದನು.

ರಾಜನು ಅವನ ಷರತ್ತಿಗೆ ಒಪ್ಪಿಕೊಂಡು, ಅಸಲಿ ವಜ್ರ ಯಾವುದೆಂದು ಕಂಡುಹಿಡಿಯಲು ಆಭರಣ ತಯಾರಿಕೆಯ ಪರಿಣತರನ್ನೆಲ್ಲ ಕರೆಸಿದನು. ಆದರೆ ಯಾರಿಂದಲೂ ಅಸಲಿ ವಜ್ರ ಯಾವುದು? ಗಾಜು ಯಾವುದೆಂದು ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಆಗ ರಾಜನೇ ಒಪ್ಪಿಕೊಂಡ ಮಾತಿನಂತೆ ಅವನಿಗೆ ವಜ್ರಕ್ಕೆ ಸಮನಾದ ಬೆಲೆಯನ್ನು ಕೊಟ್ಟನು.

ಪುನಃ ಆತನು ವಜ್ರದ ಪೆಟ್ಟಿಗೆಯನ್ನು ತೆಗೆದುಕೊಂಡು ಹಲವಾರು ರಾಜ್ಯಗಳಿಗೆ ಹೋಗಿ, ಅಲ್ಲೂ ಎಲ್ಲಾ ಕಡೆ ನಿಬಂಧನೆಯನ್ನು ಹಾಕಿ, ಅದು ಎಲ್ಲಿಯೂ ಸಾಧ್ಯವಾಗದೆ ಅವರೆಲ್ಲರೂ ಹಣವನ್ನು, ವಜ್ರದ ಬೆಲೆಯ ಆಭರಣಗಳನ್ನು ಆತನಿಗೆ ಕೊಡುತ್ತಿದ್ದರು. ಅವನು ರಾಜ್ಯದಿಂದ ರಾಜ್ಯಕ್ಕೆ ಹೋಗಿ ಬೇಕಾದಷ್ಟು ಧನ–ಕನಕಗಳು ಮಾಡಿಕೊಂಡನು ಇದು ಆತನಿಗೆ ಅಭ್ಯಾಸವಾಗಿ ಹೋಯಿತು ಗೆದ್ದ ರಾಜ್ಯಗಳಿಂದ ಬಂದ ಸಂಪತ್ತನ್ನು ತಂದು ಸಂಗ್ರಹಿಸುತ್ತಿದ್ದನು. ಹೀಗೆ ಸಂಪತ್ತನ್ನು ಕುದುರೆ ಗಾಡಿಗಳಲ್ಲಿ ಹೊತ್ತು ತರುತ್ತಿರುವಾಗ ಅವನ ಕಣ್ಣಿಗೆ ಒಂದು ಚಿಕ್ಕ ರಾಜ್ಯ ಕಣ್ಣಿಗೆ ಬಿತ್ತು. ಈತನು ತಡಮಾಡದೆ ಆ ರಾಜ್ಯಕ್ಕೂ ಹೋಗಿ ರಾಜನಿಗೆ ಇದೇ ಸವಾಲನ್ನು ಹಾಕಬೇಕೆಂದು ರಾಜ್ಯಸಭೆಗೆ ಹೊರಟನು. ಆದರೆ ಅಲ್ಲಿ ಕೆಲವು ದಿನಗಳಿಂದ ಅರಮನೆಯ ಸಭೆಯ ಆವರಣವನ್ನು ವಿಸ್ತರಿಸಿ, ಆಧುನೀಕರಿಸಬೇಕೆಂದು ಸಭಾಂಗಣದಲ್ಲಿ ಕೆಲಸ ಕಾರ್ಯಗಳು ಭರದಿಂದ ಸಾಗುತ್ತಿತ್ತು, ಹೀಗಾಗಿ ರಾಜ್ಯ ಕಲಾಪಗಳನ್ನು ಕೆಲತಿಂಗಳಗಳ ಮಟ್ಟಿಗೆ ಅರಮನೆಯ ಬಯಲಿನ ಆವರಣದಲ್ಲಿ ನಡೆಸಲಾಗುತ್ತಿತ್ತು. ನೆರಳು ,ಬಿಸಿಲು ಗಳನ್ನು ಲೆಕ್ಕಿಸದೆ ರಾಜ ಪರಿವಾರವೆಲ್ಲ ಹೊರಗೆ ನಡೆಯುವ ರಾಜಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದರು.

ಆತ ವಜ್ರ ಪರೀಕ್ಷೆಗೆ ಒಳಪಡಿಸಲು ತಂದ ಈ ದಿನವೂ ಸಹ ರಾಜ ಪರಿವಾರದವರು ಹೊರಗೆ ಬಯಲಿನಲ್ಲಿ ಸಭೆಯನ್ನು ನಡೆಸುತ್ತಿದ್ದರು. ಬಯಲಿನಲ್ಲಿ ನಡೆಸುತ್ತಿದ್ದ ಸಭೆಗೆ ಬಂದು ಕೈಮುಗಿದು ಪ್ರಭು ನನ್ನ ಹತ್ತಿರ ಎರಡು ವಜ್ರಗಳಿವೆ. ಒಂದು ನಿಜವಾದ ವಜ್ರ ಇನ್ನೊಂದು ಗಾಜಿನದು, ಆದರೆ ಇದುವರೆಗೂ ಅಸಲಿ ವಜ್ರ ಯಾವುದೆಂದು ಕಂಡುಹಿಡಿಯಲು ಯಾರಿಂದಲೂ ಸಾಧ್ಯವಾಗಿಲ್ಲ. ಎಲ್ಲಾ ರಾಜ್ಯಗಳಲ್ಲಿ ಸುತ್ತಿ ಬಂದಿದ್ದೇನೆ. ಈಗ ನಿಮ್ಮ ರಾಜ್ಯದಲ್ಲಿ ಯಾರಾದರೂ ಇದರಲ್ಲಿ ವಜ್ರ ಯಾವುದೆಂದು ಕಂಡುಹಿಡಿದರೆ, ಈ ವಜ್ರವನ್ನು ನಿಮ್ಮ ಖಜಾನೆಗೆ ಕೊಡುತ್ತೇನೆ. ಅದು ಆಗದಿದ್ದರೆ ಇದರ ತೂಕದ ಹಣವನ್ನು ಕೊಡಬೇಕಾಗುತ್ತದೆ. ಇದು ನನ್ನ ನಿಬಂಧನೆ ಎಂದನು.

ರಾಜನು ಇದಕ್ಕೆ ಒಪ್ಪಿದನು. ವಜ್ರದ ಅಸಲಿ ಪರೀಕ್ಷೆ ನಡೆಯುವುದು ಶುರುವಾಗುತ್ತಿದ್ದಂತೆ, ರಾಜ್ಯದ ಎಲ್ಲಾ ಪರಿಣತರು ವಜ್ರದ ಪರೀಕ್ಷೆಯಲ್ಲಿ ಪಾಲ್ಗೊಂಡರು. ಬಹಳ ಸೂಕ್ಷ್ಮವಾಗಿ ಪರಿಶೀಲಿಸಿದರು ಆದರೆ ಯಾರಿಂದಲೂ ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಆತ ಇನ್ನೇನು ರಾಜನು ಕೊಡುವ ಎಲ್ಲಾ ಸಂಪತ್ತನ್ನು ತೆಗೆದುಕೊಂಡು ಹೊರಡುವುದೆಂದು ನಿರ್ಧಾರ ಮಾಡಿ ಹೆಜ್ಜೆ ಮುಂದಿಟ್ಟನು ಇಲ್ಲವೂ ಆ ಸಮಯಕ್ಕೆ ಗುಂಪಿನೊಳಗಿಂದ ಕಣ್ಣು ಕಾಣದ ಕುರುಡನು, ವೃದ್ಧನು, ಆಗಿದ್ದ ಒಬ್ಬ ವ್ಯಕ್ತಿ ಗುಂಪಿನಿಂದ ಮುಂದೆ ಬಂದು, ಸಭೆಯನ್ನು ಉದ್ದೇಶಿಸಿ ನಾನು ಈ ಎರಡು ವಜ್ರಗಳಲ್ಲಿ ಅಸಲಿ ಯಾವುದು? ನಕಲಿ ಯಾವುದು ಎಂದು ಕಂಡುಹಿಡಿಯಬಹುದೇ, ಕೇಳಿದನು.ರಾಜನು ಉದಾರಮನಸ್ಸಿನವನು, ಶಾಂತ ಸ್ವಭಾವದವನು ಆಗಿದ್ದನು. ಮುಂದೆ ಬಂದ ವೃದ್ಧನಿಗೆ ಆಯಿತು ಪರೀಕ್ಷೆಮಾಡು ಎಂದನು. ವೃದ್ಧನು ವಜ್ರಗಳಿಟ್ಟ ಪೆಟ್ಟಿಗೆ ಹತ್ತಿರ ಬಂದು ಎರಡು ವಜ್ರಗಳನ್ನು ಕೈಯಲ್ಲಿ ಮುಟ್ಟಿ ನೋಡಿ, ಇದು ಅಪ್ಪಟ ವಜ್ರ ಎಂದು ಒಂದನ್ನು ತೋರಿಸಿದನು, ಇನ್ನೊಂದನ್ನು ಮುಟ್ಟಿ ಇದು ಗಾಜಿನದು ಎಂದನು.

ಎರಡೂ ಕಣ್ಣು ಕಾಣದಿದ್ದರೂ, ವಜ್ರಗಳ ಪರೀಕ್ಷೆ ಮಾಡಿದ್ದು ಸರಿಯಾಗಿಯೇ ಇತ್ತು, ವಜ್ರಗಳನ್ನು ತಂದಿದ್ದ ಆತನಿಗೆ ಆಶ್ಚರ್ಯವಾಗಿ ಮುಂದೆ ಬಂದು, ಸ್ವಾಮಿ ನೀವು ಹೇಳಿದ್ದು ಸರಿಯಾಗಿದೆ. ನಾನು ಸೋಲನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇದು ಹೇಗೆ ತಿಳಿಯಿತು ಎಂಬುದನ್ನು ಸಾಬೀತುಮಾಡಿರಿ ಎಂದನು. ಆಗ ಕುರುಡ ವೃದ್ಧನು," ನಾವೆಲ್ಲರೂ ಬಿಸಿಲಲ್ಲಿ ಕುಳಿತಿದ್ದೇವೆ. ಇಲ್ಲಿರುವ ಎರಡು ವಜ್ರಗಳನ್ನು ಮುಟ್ಟಿದರೆ, ಒಂದು ಸೂರ್ಯನ ಶಾಖಕ್ಕೆ ಬಿಸಿಯಾಗಿದೆ,

ಇನ್ನೊಂದು ತಂಪಾಗಿ ಇದೆ. ತಂಪಾಗಿರುವುದು 'ಅಪ್ಪಟ ವಜ್ರ' ಸೂರ್ಯನ ಶಾಖ ವಜ್ರದ ಮೇಲೆ ಬಿದ್ದರೂ ಅದು ತಣ್ಣಗೆ ಇರುತ್ತದೆ. ಆದರೆ ಗಾಜು ಕಾದು ಬಿಸಿಯಾಗುತ್ತದೆ. ಇದು ಮುಟ್ಟಿ ನೋಡಿ 'ಗಾಜಿನದು' ಎಂದನು. ಉತ್ತರ ಸರಿಯಾಗಿ–ತ್ತು ಅಪ್ಪಟ ವಜ್ರ, ಮತ್ತು ಗಾಜಿನದು, ಎರಡು ಗೊತ್ತಾಯಿತು.

ವಜ್ರ ತಂದ ಮಾಲಿಕನು ಅವನ ಮಾತಿನಂತೆ ರಾಜ್ಯದ ಕೋಶಾಗಾರಕ್ಕೆ ಆ ವಜ್ರವನ್ನು ರಾಜನಿಗೆ ಕೊಟ್ಟನು. ರಾಜನು ಕೊಡುಗೆಗಳನ್ನು ಕೊಟ್ಟು ಗೌರವದಿಂದ ಕಳಿಸಿದನು. ಕಣ್ಣು ಕಾಣದ ಮುದುಕ ಅಪ್ಪಟ ವಜ್ರದ ಕುರಿತು ತಿಳಿಸಿ, ರಾಜ್ಯದ ಘನತೆ ಗೌರವ ಹೆಚ್ಚಿಸಿದ ಕಾರಣ ಅವನಿಗೆ ಸನ್ಮಾನ ಮಾಡಿ ಸುಖವಾಗಿ ಜೀವನ ಮಾಡಲು ಅನುಕೂಲವಾಗುವಂತೆ ರಾಜ್ಯದಿಂದಲೇ ವ್ಯವಸ್ಥೆ ಮಾಡಿಕೊಟ್ಟನು.

ಯಾರು ಯಾವಾಗಲೂ ಸಂತೋಷವಾಗಿದ್ದು ಮತ್ತೊಬ್ಬರ ಬಳಿಯೂ ಸಮಾಧಾನದಿಂದ, ಶಾಂತಚಿತ್ತರಾಗಿ ಮಾತನಾಡುತ್ತಾರೋ ಅವರು ಅಪ್ಪಟ ವಜ್ರದಂತೆ.

ಯಾರು ಯಾವಾಗಲೂ ಸಿಡಿಮಿಡಿಗುಟ್ಟುತ್ತಾ, ಅಸಮಾಧಾನದಿಂದ ಮಾತನಾಡಿ, ಬೇರೆಯವರ ಮನಸ್ಸಿಗೆ ನೋವು ಮಾಡುತ್ತಾರೋ ಅವರು ಗಾಜಿನಂತೆ,

" ಪ್ರಶಾಂತ ಮನಸಂ ಹ್ಯೇನಮ್ ಯೋಗಿನಮ್ ಸುಖಮುತ್ತಮಮ್!

ಉಪಯುಕ್ತ ಶಾಂತರಾಜ ಸನ್ ಬ್ರಹ್ಮ ಭೂತ ಮಕಲ್ಮಷಮ್."

**ಬರಹ:– ಆಶಾ ನಾಗಭೂಷಣ, ಸಂಗ್ರಹ:ಶ್ರೀಮತಿ ಶಾರದಾ ನಾಗೇಶ್, ಶಿಕ್ಷಕರು ಹಾಗೂ ಗಾಯಕರು ಚನ್ನಪಟ್ಟಣ**

## ಅಪಘಾತಗಳಿಗೆ ಹೆದರಿ ಶಾಲೆ ಬಿಟ್ಟ ಮಕ್ಕಳು ಅಧಿಕಾರಿಗಳ ನಿರ್ಲಕ್ಷ್ಯ ಗ್ರಾಮಸ್ಥರ ಆಕ್ರೋಶ




ಬಂಕಲಗಾ ಗ್ರಾಮವು ಭೀಮಾ ಏತ ನೀರಾವರಿ ಯೋಜನೆ ಅಡಿಯಲ್ಲಿ ಸಂಪೂರ್ಣ ಮುಳುಗಡೆ ಆಗದೆ ಅರ್ಧ ಊರು ಮಾತ್ರ ಮುಳುಗಡೆ ಆಗಿದೆ . ಈ ಹಿನ್ನಲೆಯಲ್ಲಿ ಮುಳುಗಡೆ ಆದ ಗ್ರಾಮಸ್ಥ–ರಿಗೆ ನಿವೇಶನಗಳು ಕೂಡಾ ಹಂಚಿಕೆ ಮಾಡಲಾಗಿದೆ. ಇದು ಒಳ್ಳೆಯ ವಿಚಾರ ಆದರೆ ಹೊಸ ಬಂಕಲಗಾ ಗ್ರಾಮದಿಂದ ಹಳೇ ಬಂಕಲಗಾ ಗ್ರಾಮಕ್ಕೆ 3 ಕೀ ಮಿ ದೂರದ ರಾಜ್ಯ ಹೆದ್ದಾರಿ ಆಗಿದ್ದು ರಸ್ತೆ ಮಧ್ಯದಲ್ಲಿ ಆದ ಅಪಘಾತಕ್ಕೆ ಯಾರು ಹೊಣೆ ಎಂಬ ಪ್ರಶ್ನೆಗೆ ಉತ್ತರ ಬೇಕಾಗಿದೆ. ಅದರಲ್ಲೂ ಚಿಕ್ಕ ಮಕ್ಕಳಾದ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು ಅದರಲ್ಲೂ ಹೆಚ್ಚಿನ ಮಕ್ಕಳು ಹೊಸ ಬಂಕಲಗಾ ಗ್ರಾಮದಲ್ಲಿ ಇದ್ದಾರೆ ಆದರೆ ಪ್ರಾಥಮಿಕ ಶಾಲೆಯು ಹಳೇ ಬಂಕಲಗಾ ಗ್ರಾಮದಲ್ಲಿ ಮಾತ್ರ ಶಾಲೆ ಪ್ರಾರಂಭಿಸಿದ್ದಾರೆ ಆದರೆ ಹೊಸ ಬಂಕಲಗಾ ಗ್ರಾಮದಲ್ಲಿ ನಿರ್ಮಿಸಿದ ಸರಕಾರಿ ಶಾಲಾ ಕಟ್ಟಡಗಳು ಹಾಳು ಬಿದ್ದಿವೆ ಅವುಗಳ ದುರಸ್ತಿ ಕಾರ್ಯ ಮಾಡಿ ಮಕ್ಕಳು ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವ ವ್ಯವಸ್ಥೆ ಮಾಡಿದರೆ ಸಾಕು ಎಂದು ಹೊಸ ಬಂಕಲಗಾ ಗ್ರಾಮದ ತಾಯಂದಿರ ಆಶಯ ಆಗಿದೆ. ಆದರೆ ದುರಾದೃಷ್ಟಕರ ಸಂಗತಿ ಏನೆಂದರೆ ಗ್ರಾಮ ಪಂಚಾಯತಿ ಕೂಡ ಹೊಸ ಬಂಕಲಗಾ ಗ್ರಾಮದಲ್ಲೇ ಇದ್ದು ಈಗಾಗಲೇ ಮನವಿ ಪತ್ರ ನೀಡಲಾಗಿದೆ ಆದರೆ ಇಲ್ಲಿಯವರೆಗೂ ಯಾವುದೇ ಸೂಕ್ತ ಕ್ರಮ ಕೈಗೊಂಡಿಲ್ಲ ಇದು ವಿಪರ್ಯಾಸದ ಸಂಗತಿ ಎಂದರೆ ತಪ್ಪಾಗಲಾರದು. ಇತ್ತೀಚೆಗೆ ವಾಹನ ದಟ್ಟಣೆ ಹೆಚ್ಚಾಗಿರುವ ಹಿನ್ನಲೆಯಲ್ಲಿ ಅಪಘಾತಗಳು ಹೆಚ್ಚಾಗುತ್ತಿವೆ.ಹೀಗಾಗಿ ಪೋಷಕರು ಅಪಘಾತಗಳಿಗೆ ಹೆದರಿ ಮಕ್ಕಳನ್ನೇ ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ. ಈಗಾದರೂ ಗ್ರಾಮ ಪಂಚಾಯಿತಿಯ ಮೇಲಾಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಂಡರೆ ಮಾತ್ರ ಮಕ್ಕಳನ್ನು ಶಾಲೆಗೆ ಕಳಿಸುತ್ತೇವೆ ಎಂದು ಗ್ರಾಮಸ್ಥರು ಹಠ ಹಿಡಿದಿದ್ದಾರೆ.

–ಸುನಿಲ್ ಕುಮಾರ್

ಈಗಾಗಲೇ ಬೇರೆ ಬೇರೆ ಪತ್ರಿಕೆಗಳ ಏಜೆನ್ಸಿ ಡಿಸ್ಟ್ರಿಬ್ಯೂಟರ್ ಆಗಿದ್ದೀರಾ?
ಅಥವಾ ಹೊಸದಾಗಿ ಯಾವುದೇ ಮುಂಗಡ ಪಾವತಿ ಇಲ್ಲದೆ ಪತ್ರಿಕೆಯ ಏಜನ್ಸಿ ಹುಡುಕುತ್ತಿದ್ದೀರಾ? ಈಗಲೇ ಕರೆ ಮಾಡಿ ಕರ್ನಾಟಕದ ಮೂಲೆಮೂಲೆಗಳಲ್ಲಿ ಪ್ರಸಿದ್ಧಿ ಪಡೆಯುತ್ತಿರುವ ನಮ್ಮ ನಿಮ್ಮೆಲ್ಲರ **ಕರುನಾಡ ಕಂದ** ಪತ್ರಿಕೆಯ ಏಜೆನ್ಸಿ ಪಡೆದು ಪತ್ರಿಕೆಯ ಜೊತೆಗೆ ನೀವೂ ಬೆಳೆಯಿರಿ.
ಆಸಕ್ತರು ಮಾತ್ರ ಕರೆ ಮಾಡಿ **9986366909**

ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ಕೆಸರಿನಿಂದ ಅಮೃತಕಳಸವನೆತ್ತಿ ಕೊಡುತ್ತಿರುವ ರೈತ ನಿನಗೊಂದು ನನ್ನ ಸಲಾಮ್....

ರೈತನಿಗೊಂದು ಸಲಾಮು.
ಗದ್ದೆ ಕೆಸರನು ತುಳಿದು ಕಾಡ ಮುಳ್ಳನು ಕಡಿದು
ಹಾದಿ–ಬೀದಿಯೇಯಾಗುತ್ತಿದೆ.ಇಂದಿಗೂ
ಮುಂಜಾನೆಯಿಂದ ಸಂಜೆಯವರೆಗೆ ದುಡಿದುಡಿದು
ಚಳಿಯೋ ಮಳೆಯೋ ಬಿಸಿಲೋ ಬೇಗೆಯಲ್ಲವ ಸಹಿಸಿ
ಬೆವರು ಕಂಬನಿ ರಕುತವ ಸುರಿಸಿ, ನೆಲವನು ತಣಿಸಿ
ಕೆಸರಿನಿಂದ ಅಮೃತಕಳಸವನೆತ್ತಿ ಕೊಡುತ್ತಿರುವವ ರೈತ ನಿನಗೊಂದು ನನ್ನ ಸಲಾಮ್....


ಇಂದು ಬೆಳಗ್ಗೆ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ಹೊಟ್ಟೆ ತುಂಬುವಷ್ಟು ಊಟ ಮಾಡಿ ಹಸಿವೆ ಇಲ್ಲದೆ ನಿಶ್ಚಿಂತೆಯಿಂದ ನಿದ್ದೆ ಮಾಡುತ್ತಿದ್ದರೆ, ಇದಕ್ಕೆ ರೈತನ ಶ್ರಮದ ಫಲವೇ ಮುಖ್ಯ ಕಾರಣ ಎಂದು ಹೇಳಬಹುದು. ಏಕೆಂದರೆ ಉಪಹಾರ ಮತ್ತು ಊಟದಲ್ಲಿ ಬಳಸುವ ಪ್ರತಿಯೊಂದು ಪದಾಥ–ರ್ವೂ ರೈತನ ಶ್ರಮ ಅಡಗಿರುತ್ತದೆ. ಇಂತಹ ರೈತನಿಗೆ ನಾವೆಲ್ಲರೂ ಕೃತಜ್ಞರಾಗಿರಲೇಬೇಕು. ನಮಗೆಲ್ಲರಿಗೂ ಇಂದು, ಡಾಕ್ಟರ್, ಲಾಯರ್, ಎಂಜಿನಿಯರ್‌ಗಳು, ವ್ಯಾಪಾರಸ್ಥ, ಬ್ಯುಸಿನೆಸ್ ಮ್ಯಾನ್ ಮುಖ್ಯ ಎನಿಸುತ್ತಾರೆ. ಆದರೆ ಇವರೆಲ್ಲರಿಗಿಂತಲೂ ಮೂರು ಹೊತ್ತು ಅನ್ನಕ್ಕೆ ಕಾರಣವಾಗಿರುವ ರೈತನ ನೆನಪು ಮಾತ್ರ ಬರುವುದಿಲ್ಲ. ಇವರೆಲ್ಲರಿಗಿಂತಲೂ ರೈತನೇ ಏಕೆ ಶ್ರೇಷ್ಠ ಎಂಬುದಕ್ಕೆ ಈ ಕಥೆ ಓದಿ.

ಒಂದು ಊರಲ್ಲಿ ಒಬ್ಬ ರಾಜನಿದ್ದನಂತೆ ಆತನಿಗೆ ತನ್ನ ಹುಟ್ಟಿದ ಹಬ್ಬದ ಸಂದರ್ಭದಲ್ಲಿ ರಾಜ್ಯದ ಅತ್ಯಂತ ಶ್ರೇಷ್ಠವ್ಯಕ್ತಿಯನ್ನುಗೌರವಿಸಬೇಕೆಂದು ಅಂದುಕೊಂಡಿದ್ದ. ರಾಜನ ಕಾಲದಲ್ಲಿ ಸನ್ಮಾನವೆಂದರೆ ಕೇವಲ ಹೂಗುಚ್ಛ ನೀಡುವುದಲ್ಲ, ವಜ್ರ ವೈಡೂರ್ಯಗಳನ್ನು ಕೊಟ್ಟು ಸನ್ಮಾನಿಸಲಾಗುತ್ತಿತ್ತು. ಎಲ್ಲಾ ಮಂತ್ರಿಗಳನ್ನು ಕರೆದು ರಾಜ್ಯದ ಶ್ರೇಷ್ಠ ವ್ಯಕ್ತಿಯನ್ನು ಸನ್ಮಾನಿಸಬೇಕು ಎಂದು ಪ್ರಕಟಣೆ ಹೊರಡಿಸಿದ. ರಾಜನ ಪ್ರಕಟಣೆ ಕೇಳಿದ್ದೇ ತಡ ರಾಜ್ಯದಲ್ಲಿರುವ ವೈದ್ಯರು, ಎಂಜಿನಿಯರ್‌ಗಳು, ಸಮಾಜ ಸುಧಾರಕರು, ಕ್ರೀಡಾಪಟುಗಳು, ಸಂಗೀತಗಾರರು, ನೃತ್ಯಪಟುಗಳು, ವ್ಯಾಪಾರಸ್ಥರು, ಜ್ಯೋತಿಷಿಗಳು, ಪರ್ವತಾರೋಹಿಗಳು, ಉದ್ಯಮಿಗಳು, ವಕೀಲರು, ಪೊಲೀಸರು ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಂ ಮಾಡಿದವರು ರಾಜನ ಆಸ್ಥಾನಕ್ಕೆ ಬಂದು ತಾವು ತಾವೇಕೆ ಶ್ರೇಷ್ಠ ವ್ಯಕ್ತಿಗಳು ಎಂದು ವಿವರಿಸಿ ಹೋದರು.

ಆದರೆ, ಅಷ್ಟರಲ್ಲಿ ಆಸ್ಥಾನದಲ್ಲಿ ಒಂದು ಘಟನೆ ನಡೆದಿತ್ತು. ಅದು ರಾಜ ಮತ್ತು ಮಂತ್ರಿಗಳ ಗಮನಕ್ಕೂ ಬಂದಿರಲಿಲ್ಲ. ಹೌದು ಮೈಯೆಲ್ಲಾ ಕೆಸರುಮಯವಾಗಿರುವ, ತಲೆಗೆ ಶಾಲು ಸುತ್ತಿದ್ದ ವ್ಯಕ್ತಿಯೊಬ್ಬ ಓಡುತ್ತ ಬಂದು ರಾಜನ ಆಸ್ಥಾನ ಪ್ರವೇಶ ಮಾಡಲು ಯತ್ನಿಸಿದ್ದ. ಮೈಯಲ್ಲಾ ಕೆಸರುಮಯ ನೋಡಿ ಬಾಗಿಲ ಭಟರು ರಾಜನ ಆಸ್ಥಾನದಲ್ಲಿ ಪ್ರವೇಶ ಮಾಡಲು ಅವಕಾಶವನ್ನೇ ನೀಡಲಿಲ್ಲ. ಏ ಭಿಕ್ಷುಕ, ನೀನು ಒಳಗೆ ಹೋಗಲು ಸಾಧ್ಯವಿಲ್ಲ ಎಂದು ಆತನನ್ನು ತಡೆದುಬಿಟ್ಟರು. 'ನಾನು ಭಿಕ್ಷುಕನಲ್ಲ; ರೈತ. ಈ ರಾಜ್ಯದ ಎಲ್ಲರಿಗೂ ಬೇಕಾಗುವ ಆಹಾರಧಾನ್ಯಗಳನ್ನು ಬೆಳೆದುಕೊಡುವವನು' ಎಂದು ಎಷ್ಟು ಹೇಳಿದರೂ ಕಾವಲುಗಾರರು ಆತನನ್ನು ಒಳಕ್ಕೆ ಬಿಡಲೇ ಇಲ್ಲ. ಇದರಿಂದ ಬೇಸರಗೊಂಡ ಆ ರೈತ ಮನೆಗೆ ಹೋಗಿ ಮಲಗಿಬಿಟ್ಟ.

ಮುಂದಿನ ವರ್ಷ ರಾಜನ ಹುಟ್ಟು ಹಬ್ಬ ಬಂತು. ಶ್ರೇಷ್ಠ ವ್ಯಕ್ತಿಯನ್ನು ಸನ್ಮಾನ ಮಾಡಲು ರಾಜ ಸಿದ್ಧನಾಗಿ ಕುಳಿತಿದ್ದ. ರಾಜನಿಗೆ ಯಾರ್ಯಾರು ಶ್ರೇಷ್ಠವೆಂದು ಅರ್ಜಿ ಹಾಕಿದ್ದರೋ ಅವರೆಲ್ಲರನ್ನು ಆಹ್ವಾನಿಸಿ ಎಂದು ಮಂತ್ರಿಗಳಿಗೆ ಹೇಳಿದ.

ಆದರೆ, ಎಂಜಿನಿಯರ್, ವೈದ್ಯ, ಪರ್ವತಾರೋಹಿ, ವಿದ್ವಾಂಸ, ಈಜುಗಾರ, ಸಮಾಜ ಸುಧಾರಕ,




ಕ್ರೀಡಾಸಾಧಕ ಹಾಗೂ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಯಾರೂ ಆಸ್ಥಾನದತ್ತ ಸುಳಿಯಲೇ ಇಲ್ಲ. ಇದರಿಂದಾಗಿ ಆಶ್ಚರ್ಯಚಕಿತರಾದ ರಾಜ ತನ್ನ ಹುಟ್ಟುಹಬ್ಬಗ್ಗೆ ಒಬ್ಬರೂ ಬರಲಿಲ್ಲವೇ? ಕೂಡಲೇ ರಾಜ ಮಂತ್ರಿಯನ್ನು ಕರೆದು ಏಕೆ ಯಾರೂ ಬಂದಿಲ್ಲ ಎಂದು ಕೇಳಿದ. ತಕ್ಷಣವೇ ಬೇಹುಗಾರರನ್ನು ಕಳುಹಿಸಿ ವಿಷಯ ತಿಳಿದುಕೊಂಡು ಬರಲು ಕಳುಹಿಸಿದಾಗ ನಿಜವಾದ ಸಂಗತಿ ಗೊತ್ತಾಯಿತು.

ಕಳೆದ ಬಾರಿ ರಾಜನ ಆಸ್ಥಾನ ಪ್ರವೇಶಿಸಲು ಸಾಧ್ಯವಾಗದ್ದರಿಂದ ರೈತ ಮನೆಯಲ್ಲಿಯೇ ಮಲಗಿಬಿಟ್ಟಿದ್ದ. ಆತ ಮಲಗಿದ್ದರಿಂದ ಈ ವರ್ಷ ಆಹಾರಧಾನ್ಯದ ಉತ್ಪಾದನೆಯೇ ಆಗಿರಲಿಲ್ಲ. ಆಹಾರ ಇಲ್ಲದ್ದರಿಂದ ತಾವೇ ಶ್ರೇಷ್ಠ ಅಂದುಕೊಂಡಿದ್ದ ಯಾವುದೇ ವ್ಯಕ್ತಿಗೂ ರಾಜನ ಆಸ್ಥಾನಕ್ಕೆ ಬರುವಷ್ಟು ಶಕ್ತಿಯೇ ಇರಲಿಲ್ಲ.

ಈ ವಿಷಯ ರಾಜನಿಗೆ ಗೊತ್ತಾದ ತಕ್ಷಣವೇ ತನ್ನ ರಾಜ್ಯದಲ್ಲಿ ಅತ್ಯುತ್ತಮ ಶ್ರೇಷ್ಠ ವ್ಯಕ್ತಿ ಬೈರಾರು ಅಲ್ಲ, ರಾಜ್ಯಕ್ಕೆ ಅನ್ನ ಕೊಡುವ ವ್ಯಕ್ತಿಯೇ ಶ್ರೇಷ್ಠ, ಅವನೇ ಅನ್ನದಾತವೆಂದುಕೊಂಡು ನೇರವಾಗಿ ರೈತನ ಮನೆಗೆ ಹೋಗಿ ಆತನನ್ನು ಸತ್ಕರಿಸಿದ. ಜೊತೆಗೆ ಕಳೆದ ಬಾರಿ ರಾಜಭಟರು ಅರಮನೆಗೆ ಪ್ರವೇಶ ನಿರಾಕರಿಸಿದ್ದಕ್ಕಾಗಿ ಕ್ಷಮೆಯನ್ನೂ ಕೋ–ರಿದ. ಅನ್ನದಾತನಿದ್ದರೆ ಮಾತ್ರ ಅರಮನೆ ಎನ್ನುವುದು ಆ ರಾಜನಿಗೆ ಅರ್ಥವಾಗಿ–ತ್ತು. ಅನ್ನದಾತ ಮುನಿದರೆ ಯಾರೂ ಯಾವುದೇ ಸಾಧನೆ ಮಾಡುವುದು ಅಸಾಧ್ಯ ಎನ್ನುವುದೂ ಆತನಿಗೆ ಗೊತ್ತಾಯಿತು.

ಕೃಷಿ ಹಾಗೂ ರೈತನ ಅಗತ್ಯತೆ ಸಮಾಜಕ್ಕೆ ಎಷ್ಟಿದೆ ಎಂಬುದು ಈ ಕತೆಯಿಂದಲೇ ನಮಗೆ ತಿಳಿಯುತ್ತದೆ.

ನೇಗಿಲ ತುದಿಯೊಳಗಡಗಿದೆ ಕರ್ಮ, ನೇಗಿಲ ಮೇಲೆ ನಿಂತಿದೆ ಧರ್ಮ' ಎನ್ನುವ ರಾಷ್ಟ್ರಕವಿ ಕುವೆಂಪು ಅವರ ಕವನದ ಸಾಲುಗಳು ವೇದಿಕೆಗಳ ಮೇಲೆ ರಾಜಕಾರಣಿಗಳ ಬಾಯಲ್ಲಿ ಹರಿದಾಡುತ್ತಿದ್ದರೂ ರೈತರ ಉತ್ಪನ್ನಗಳಿಗೆ ಹಾದಿ–ಬೀದಿಯೇಯಾಗುತ್ತಿದೆ. ಇಂದಿಗೂ ಸಹ ರೈತ ತನ್ನ ಬೆಳೆಗೆ ಬೆಲೆ ನಿಗದಿ ಮಾಡದ ಪರಿಸ್ಥಿತಿಯಲ್ಲಿದ್ದಾನೆ. ರೈತನಿಂದ ಖರೀದಿ ಮಾಡಿದ ವ್ಯಾಪಾರಸ್ಥರು ಬೆಲೆ ಕಟ್ಟಿ ಅದನ್ನೇ ದುಬಾರಿ ಬೆಲೆಗೆ ರೈತನಿಗೆ ಮಾರುತ್ತಿರುವುದು ದುರ್ದೈವದ ಸಂಗತಿ.

– ರವಿ ಪಾಟೀಲ ದಣ್ಣೂರ

## ನಾಡ ಧ್ವಜ ಸುಟ್ಟ ಶಿವಸೇನೆ ಕಾರ್ಯಕರ್ತ ಪುಂಡರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಪಟ್ಟಣದಲ್ಲಿ ವಿವಿಧ ಸಂಘಟನೆಗಳ ಪ್ರತಿಭಟನೆ



ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಎಂಇ–ಎಸ್ ಹಾಗೂ ಶಿವಸೇನೆ ಕಾರ್ಯಕರ್ತರು ಕನ್ನಡ ನಾಡ ಧ್ವಜ ಸುಟ್ಟು ನಾಡ ವಿರೋಧಿ ಚಟುವಟಿ–ಕೆ ಮಾಡಿದ್ದನ್ನು ಖಂಡಿಸಿ ಯಡ್ರಾಮಿ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ವಿವಿಧ ಸಂಘಟನೆಯ ಮುಖಂಡರು ಟ್ಯಾಯರ್‌ಗೆ ಬೆಂಕಿ ಹಚಿ ಮಹಾರಾಷ್ಟ್ರ ಸರ್ಕಾರದ ವಿರೋಧ ಆಕ್ರೋಶ ವ್ಯಕ್ತಪಡಿಸಿದರು. ನಾಡ ಧ್ವಜ ಸುಟ್ಟ ಎಂಇಎಸ್ ಹಾಗೂ ಶಿವಸೇನೆ ಕಾರ್ಯಕರ್ತರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ತಹಶೀಲ್ದಾರ್ ಶಾಂತಗೌಡ ಬಿರದಾರ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಕರವೇ ತಾಲ್ಲೂಕಾಧ್ಯಕ್ಷ ವಿಶ್ವನಾಥ ಪಾಟೀಲ್, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಅಧ್ಯಕ್ಷ ಈರಣ್ಣ ಭಜಂತ್ರಿ, ತಾಲೂಕಾ ಒಕ್ಕೂಟದ ಅಧ್ಯಕ್ಷರ ಅಮರನಾಥ ಸಾಹು ಕುಳಗೇರಿ , ಬಿಸಿಲು ನಾಡಿನ ಜಿಲ್ಲಾಧ್ಯಕ್ಷರಾದ ಶಫಿವುಲ್ಲಾ ಎಂ.ದಖನಿ, ಹಸಿರು ಸೇನೆ ತಾಲೂಕಾ ಘಟಕ ಅಧ್ಯಕ್ಷ ಲಾಳೆಸಾಬ್ ಮನಿಯಾರ್, ಅಪ್ರೋಜ್ ಯಡ್ರಾಮಿ ಸೇರಿದಂತೆ ಇತರರು ಇದ್ದರು

## ಶಾರದಾ ಇಂಟರ್ ನ್ಯಾಷನಲ್ ಸ್ಕೂಲ್ ನಲ್ಲಿ :ಅಂಚೆ ಪತ್ರ ಸ್ಪರ್ಧೆ



ಕೊಪ್ಪಳ:ಸ್ವಾತಂತ್ರ್ಯ ಭಾರತದ ಎಪ್ಪತ್ತೈದನೇ ವರುಷದ ಸವಿನೆನಪಿಗಾಗಿ ಭಾರತ ಸರ್ಕಾರವು ಭಾರತೀಯ ಅಂಚೆ ಇಲಾಖೆಯ ಮೂಲಕ ಶಾಲಾ ವಿದ್ಯಾರ್ಥಿಗಳಿಗೆ ಅಂಚೆ ಪತ್ರ ಸ್ಪರ್ಧೆ ಏರ್ಪಡಿಸಿದ್ದು ಈ ನಿಮಿತ್ಯವಾಗಿ ಕೊಪ್ಪಳದ ಹೆಸರಾಂತ ಶಿಕ್ಷಣ ಸಂಸ್ಥೆಯಾದ ಶಾರದಾ ಇಂಟರ್ ನ್ಯಾಶನಲ್ ಸ್ಕೂಲ್ ನಲ್ಲಿ ಈ ಸ್ಪರ್ಧೆ ನಡೆಸಲಾಯಿತು.

ಪೋಸ್ಟ್ ಕಾರ್ಡ್ ಸ್ಪರ್ಧೆಯು ಎರಡು ವಿಷಯಗಳನ್ನು ಒಳಗೊಂಡಿದ್ದು ಮೊದಲನೆಯ ವಿಷಯ(Unsung Heroes of freedom struggle) ಆಗಿದ್ದು ಎರಡನೆಯ ವಿಷಯ (My vision for India in 2047)ಎಂಬುದಾಗಿತ್ತು.ಶಾರದಾ ಇಂಟರ್ ನ್ಯಾಷನಲ್ ಶಾಲೆಯ ಐದನೂರಕ್ಕೂ ಅಧಿಕ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿ ಅತೀ ಉತ್ಸುಕದಿಂದ ಫಾಲ್ಗೊಂಡಿದ್ದರು ಎಂದು ಶಾರದಾ ಇಂಟರ್ನ್ಯಾಷನಲ್ ಸ್ಕೂಲ್ ನ ಪ್ರಾಂಶುಪಾಲರಾದ ಶ್ರೀ

ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಈ ಕಾರ್ಯಕ್ರಮವನ್ನು ಅಂಚೆ ಇಲಾಖೆಯ ಮಾರ್ಕೆಟಿಂಗ್ ಎಕ್ಷಕ್ಯೂಟಿವ್ ಆಫೀಸರ್ ಆದ ಶ್ರೀ ಸುರೇಶ ತಂಗೋಡ ಹಾಗೂ ಅಂಚೆ ಸಹಾಯಕರಾದ ಶ್ರೀಮತಿ ಹೇಮಲತಾ ಸಾವಂತ ಮತ್ತು ಶಾಲಾ ಸಿಬ್ಬಂದಿಗಳು ಇದ್ದರೆಂದು ಶಾಲೆಯ ಪ್ರಾಂಶುಪಾಲರು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್ ಸಂಘಟನೆಗಳನ್ನು ಕರ್ನಾಟಕದಲ್ಲಿ ರದ್ದುಗೊಳಿಸಬೇಕೆಂದು ಮುಖ್ಯಮಂತ್ರಿಗಳಿಗೆ ಆಗ್ರಹ – ಪಂಪಣ್ಣ ನಾಯಕ

ಗಂಗಾವತಿ: ಕರ್ನಾಟಕ ರಾಜ್ಯದ ಏಳು ಕೋಟಿ ಕನ್ನಡಿಗರ ಭಾವನೆಗಳಿಗೆ ಧಕ್ಕೆ ಬರುವ ನಿಟ್ಟಿನಲ್ಲಿ ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ. ಎಸ್. ಸಂಘಟನೆಗಳು ನಿನ್ನೆ ಮಧ್ಯರಾತ್ರಿ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ವಿರೂಪಗೊಳಿಸಿ, ಸರ್ಕಾರಿ ಅಧಿಕಾರಿಗಳಾದ ಸಚಿವರ ವಾಹನಗಳನ್ನು, ಪೊಲೀಸರ ವಾಹನಗಳನ್ನು ಧ್ವಂಸಗೊಳಿಸಿರುತ್ತಾರೆ. ಇಂತಹ ಸಂಘಟನೆಗಳನ್ನು ಮಹಾರಾಷ್ಟ್ರ ಸರ್ಕಾರವು ಬೆಂಬಲಿಸುತ್ತಿದ್ದು, ಕನ್ನಡಿಗರ ಭಾವನೆಗಳಿಗೆ ಧಕ್ಕೆ ಬರುವ ಕೃತ್ಯಗಳಿಗೆ ಮಹಾರಾಷ್ಟ್ರ ಸರ್ಕಾರ ಈ



ಸಂಘಟನೆಗಳಿಗೆ ಕುಮ್ಮಕ್ಕು ನೀಡುತ್ತಿದೆ ಎಂದು ಕರವೇ ಪ್ರವೀಣಕುಮಾರ ಶೆಟ್ಟಿ ಬಣದ ಕೊಪ್ಪಳ ಜಿಲ್ಲಾಧ್ಯಕ್ಷರಾದ ಪಂಪಣ್ಣ ನಾಯಕ ಪ್ರಕಟಣೆಯಲ್ಲಿ ತೀವ್ರವಾಗಿ ಖಂಡಿಸಿದ್ದಾರೆ.

ಅವರು ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ. ಎಸ್ ಸಂಘಟನೆಗಳ ರದ್ದತಿಗೆ ಹಾಗೂ ಮಹಾರಾಷ್ಟ್ರ ಸರ್ಕಾರ ವಜಾ ಮಾಡಲು ಗಂಗಾವತಿ ತಹಶೀಲ್ದಾರರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಹೋರಾಟದ ಮೂಲಕ ಮನವಿ ಪತ್ರ ಸಲ್ಲಿಸಿ ಮಾತನಾಡುತ್ತಿದ್ದರು. ಈ ಕೃತ್ಯ ಮಾತ್ರವಲ್ಲದೇ, ಪ್ರತಿವರ್ಷದ ಕರ್ನಾಟಕ ರಾಜ್ಯೋತ್ಸವ ದಿನದಂದು ಹಾಗೂ ಬೆಳಗಾವಿಯಲ್ಲಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಕಪ್ಪುಪಟ್ಟಿ ಧರಿಸಿ, ನಾಡಿಗೆ ಅವಮಾನಿಸುವುದು, ಕನ್ನಡದ ನಾಮಫಲಕಗಳನ್ನು ಧ್ವಂಸಗೊಳಿಸುವುದು, ಕನ್ನಡ ನಾಡಿನ ಧೀಮಂತ ನಾಯಕರು, ಕವಿಗಳಿಗೆ ಅವಮಾನವೆಸಗುವುದು, ಕನ್ನಡಿಗರ ಮೇಲೆ ಹಲ್ಲೆ ಮಾಡುವುದು, ಈ ರೀತಿಯ ಕೃತ್ಯಗಳು ಆಗಿಂದಾಗ್ಗೆ ನಡೆಯುತ್ತಲೇ ಇವೆ. ಇದು ಕನ್ನಡಿಗರ ತಾಳ್ಮೆಯನ್ನು ಕೆಣ–ಕುವಂತಾಗಿದೆ. ಈ ಬಗ್ಗೆ ನಾವು ಸಾಕಷ್ಟು ಹೋರಾಟಗಳನ್ನು ಮಾಡಿದರೂ ಮಹಾರಾಷ್ಟ್ರ ಸರ್ಕಾರ ಹಾಗೂ ಶಿವಸೇನೆ ಮತ್ತು ಎಂ.ಇ. ಎಸ್ ಸಂಘಟನೆಗಳು ಪಾಠ ಕಲಿಯುತ್ತಿಲ್ಲ. ಇದರಿಂದ ಕನ್ನಡಿಗರ ತಾಳ್ಮೆಯು ಮಿತಿಮೀ–ರಿದ್ದು, ಇಂತಹ ಕೃತ್ಯಗಳು ಹೀಗೆಯೇ ಮುಂದುವರೆದಲ್ಲಿ ಕನ್ನಡ ನಾಡಿನ ಕನ್ನಡಪರ ಸಂಘಟನೆಗಳು ಹಾಗೂ ನಾಡಿನ ಸಮಸ್ತ ಕನ್ನಡಿಗರು ತಿರುಗಿಬಿದ್ದು, ಮುಂದಿನ ದಿನಗಳಲ್ಲಿ ಆಗುವ ಅನಾಹುತಗಳಿಗೆ ರಾಜ್ಯ ಸರ್ಕಾರವೇ ನೇರ ಹೊಣೆಯಾಗುತ್ತದೆ. ಕೂಡಲೇ ಮುಖ್ಯಮಂತ್ರಿಗಳು



ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್ ಸಂಘಟನೆಗಳನ್ನು ಕರ್ನಾಟಕದಲ್ಲಿ ರದ್ದು ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರವೇ ಸಂಘಟನೆಯ ಪದಾಧಿಕಾರಿಗಳಾದ ದಾದಾಪೀರ್, ಮುದುಕಪ್ಪ ನಾಯಕ, ಹುಸೇನಸಾಬ್, ಶಂಕರ ಪೂಜಾರಿ, ಪುಂಡಲೀಕ ಬಿಸಲದಿನ್ನಿಸ, ಶರಣು ನಾಯಕ ಆಟೋ, ಹಸೇನಸಾಬ ಮುದುಗಲ್, ಹುಲುಗಪ್ಪ, ಅಂಜಿ, ಉಮೇಶ ಬಂಡಿ, ಭರಮಪ್ಪ, ರಮೇಶ ಭೋವಿ, ಈರಣ್ಣ, ರಾಮು ಆಟೋ, ಸಿದ್ದು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

(ಪಂಪಣ್ಣ ನಾಯಕ) ಕೊಪ್ಪಳ ಜಿಲ್ಲಾಧ್ಯಕ್ಷರು
ಮೋ.ನಂ: 9845766745

# ಅಪ್ರಾಪ್ತ ಹೆಣ್ಣು ಮಗಳ ಮೇಲೆ ಅತ್ಯಾಚಾರ ರೋಡಿಗಿಳಿದ ಗೋರ ಸಮಾಜದವರು



ಚಿಂಚೋಳಿ ತಾಲೂಕಿನಲ್ಲಿ ಗೋರ ಸೇನಾ ಸಮಾಜದವರ ಅಪ್ರಾಪ್ತ ಹೆಣ್ಣು ಮಗಳು ರಂಜಿತಾ ಸುರೇಶ್ ರಾಠೋಡ ಮೇಲೆ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಗಳಿಗೆ ಶಿಕ್ಷೆ ನೀಡಬೇಕು ಎಂದು ಗೋರ ಸೇನಾ ವತಿಯಿಂದ ಕಾಲ ನಡಿಗೆಯ ಮುಖಂತಾರ ಚಿಂಚೋಳಿಯ ತಹಸೀಲ್ದಾರ್ ಆವರಣದವರೆಗೆ ನಡೆದು ಮಾನ್ಯ ತಹಸೀಲ್ದಾರ್ ಅಂಜುಮ್ ತಬಸುಮ್ಮ ಅವರಿಗೆ ಅಪರಾಧ ಗೈದ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಮನವಿ ನೀಡಿದರು ಇದೆ ಸಂದರ್ಭಲ್ಲಿ ಗೋರ ಸೇನೆಯ ಸದಸ್ಯರು ಆದ ಲಿಂಬಾಜಿ ರಾಠೋಡ , ಕಿಶನ ರಾಠೋಡ, ವಿಠಲ್ ರಾಠೋಡ, ಯಮರಾಜ ಪವಾರ, ಸಿಕಿಂದರ ರಾಠೋಡ, ಮಾಣಿಕ್ ಜಾಧವ್

,ರಾಜು ರಾಠೋಡ, ಕಿಶನ್ ಚವ್ಹಾಣ್, ಗೋವಿಂದ ಚವ್ಹಾಣ, ಯುವರಾಜ ರಾಠೋಡ , ಸವನ್ ರಾಠೋಡ, ಅರುಣ್ ಕುಮಾರ, ಜಾಧವ್ , ಯುವರಾಜ ರಾಠೋಡ,ದೇವಿದಾಸ ರಾಠೋಡ, ರಾಹುಲ್ ರಾಠೋಡ , ಮಾರುತಿ ಗಂಜಗೇರಿ, ಗೋಪಾಲ್ ಗಾರಂಪಲ್ಲಿ ಮತು ಇನ್ನಿತರ ಮುಖಂಡರು ಉಪಸ್ತಿತರಿದರು. –ಹರೀಶ್

ಸಮಸ್ತ ನಾಡಿನ ಜನತೆಗೆ ಹೊಸ ವರ್ಷದ ಹಾಗೂ ಸಂಕ್ರಾಂತಿ ಹಬ್ಬದ ಶುಭಾಷಯಗಳು




# ಸುಸ್ಥಿರ ಮತ್ತು ನಿರಂತರ ಹೈನುಗಾರಿಕೆಗಾಗಿ ಹೆಣ್ಣು ಕರುಗಳನ್ನು ಸರಿಯಾದ ಪದ್ಧತಿ ಅನುಸರಿಸಿ ಸಾಕುವುದು ತುಂಬಾ ಅವಶ್ಯಕ



ಹೆಣ್ಣು ಕರುಗಳನ್ನು ಹೆಚ್ಚು ವೈಜ್ಞಾನಿಕ ಪದ್ಧತಿಯಲ್ಲಿ ಸಾಕುವುದರಿಂದ ಅವುಗಳಲ್ಲಿರುವ ಆರ್ಥಿಕ ಗುಣಗಳನ್ನು ಅಧಿಕ ಲಾಭ ಸಂಪಾದನೆಗಾಗಿ ಬಳಸಿಕೊಳ್ಳಬಹುದು ಎಂದು ಸಹಾಯಕ ನಿರ್ದೇಶಕರು, ಹುನುಗುಂದ ಪಶುವೈದ್ಯಧಿಕಾರಿ ಡಾ. ಎಸ್.ಪಿ. ಬೇನಾಳ್ ತಿಳಿಸಿದರು.

ಪಶುಪಲಾನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಹುನುಗುಂದ ಹನಿಯಿಂದ ನೇರ ಮಾರುಕಟ್ಟೆ ಕೃಷಿ ಕಾರಿಡಾರ್ (ಡಿಮ್ಯಾಕ್), ರಿಲೆಯನ್ಸ್ ಫೌಂಡೇಷನ್, ನೆಟಾಫಿಮ್ ಮತ್ತು ಎಂಇಐ–ಎಲ್ ಸಂಯುಕ್ತಶ್ರಯದಲ್ಲಿ ಆಯೋಜಿಸಲಾಗಿದ್ದ ಉಚಿತ ಜಾಹನುವಾರುಗಳ ಶಿಬಿರ ಮತ್ತು ಮಿಶ್ರತಳಿ ಕರುಗಳ ಪ್ರದರ್ಶನವನ್ನು ಚಿತ್ತರಗಿ ಗ್ರಾಮದಲ್ಲಿ ಉದ್ಘಾಟಿಸಿ ಮಾತನಾಡಿದರು.

ಕೃಷಿ ಮತ್ತು ಪಶುಪಾಲನಾ ಎರಡು ಜಂಟಿಯಾಗಿ ನಡೆಯುವುದರಿಂದ, ಒಬ್ಬ ರೈತರ ವ್ಯವಸಾಯದ ಇಳುವ–ರಿಯನ್ನು ಅವನು ಸಾಕಾಣಿಕೆ ಮಾಡಿರುವ ಪಶು ಸಂಗೋಪನೆಯಿಂದ ತಿಳಿಯಬಹುದು.

ಡಿಮ್ಯಾಕ್‌ನ ಸಂಯೋಜಕರಾದ ಸುರೇಶ್ ಷಣ್ಮುಗಂ ಮಾತನಾಡಿ ' ರೈತರು ಇಂದು ಹೆಚ್ಚಿನ ರಸಗೊಬ್ಬರಗಳನ್ನು ಬಳಸುವುದರಿಂದ ಭೂಮಿಯು ತನ್ನ ಫಲವತ್ತತೆಯನ್ನು ಕಳೆದುಕೊಂಡಿದೆ. ವಿಶ್ವಕ್ಕೆ ಸಾವಯ ಪದ್ಧತಿಯನ್ನು ಪರಿಚಯಿಸಿದ ಈ ನಾಡಿನಲ್ಲಿ, ಜನರು ಮತ್ತೆ ಸಾವಯವ ಪದ್ಧತಿಯ ವ್ಯವಸಾಯಕ್ಕೆ ಬೇಕಾಗಿರುವುದು ಪಶುಸಂಗೋಪನೆ, ಮುಖ್ಯವಾಗಿ ಆರ್ಥಿಕ ಸಬಲತೆಯನ್ನು ಹೈನುಗಾರಿಕೆಯಿಂದ ಪಡೆಯುಬಹುದು. ಇಂದಿನ ಯುವ ಜನಾಂಗ ಅದರೆಡೆಗೆ ಒಲವು ತೋರಿಸುವುದು ಅಗತ್ಯ ಎಂದರು.

ರಿಲಾಯನ್ಸ್ ಫೌಂಡೇಷನ್ ಅಧಿಕಾರಿ ಮಂಜುನಾಥ್ ಮೋಕಾಶಿ ಮಾತನಾಡಿ ' ರೈತರು ತಂತ್ರಜ್ಞಾನದ ಅಳವಡಿಕೆಯನ್ನು ತಮ್ಮ ವ್ಯವಸಾಯದಲ್ಲಿ ಅಳವಡಿಸುವುದು ಅಗತ್ಯ ಈ ನಿಟ್ಟಿನಲ್ಲಿ ರಿಲೆಯನ್ಸ್ ಫೌಂಡೇಶನ್ ರೈತರೊಂದಿಗೆ ವಿವಿಧ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮಗಳನ್ನು ಡಿಜಿಟಲ್ ತಂತ್ರಜ್ಞಾನದ ಮೂಲಕ ಮಾಡುತ್ತಿದ್ದು ಇದರ ಸದುಪಯೋಗ ಪಡೆಯಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಶುವೈದ್ಯಧಿಕಾರಿಗಳಾದ ಸಿವಿಒ ವಿಎಚ್ ಡಾ.ಶಂಕರ್ ಗೌಡ, ವಿಒಡಾ.ಶರಣಬಸು ಮರೋಳ, ಎಸ್.ವಿ.ಒ. ಡಾ.ಮಹಾಂತೇಶ್ ಹೊಸಮನಿ, ವಿಒ ಡಾ.ಹಿರೇಮಠ, ರಿಲೆಯನ್ಸ್ ಫೌಂಡೆಷನ್‌ನ ನಾಗರಾಜು ಮತ್ತು ಇತರರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಒಟ್ಟು 138 ಜಾನುವಾರುಗಳು ಭಾಗವಹಿಸಿದ್ದವು

ಸಮತೋಲನ ಆಹಾರವನ್ನು ಕರುಗಳಿಗೆ ನೀಡುವುದ–ರಿಂದ ಅವುಗಳ ಬೆಳವಣಿಗೆ ಚೆನ್ನಾಗಿ ಆಗುತ್ತದೆ ಆದ್ದರಿಂದ ಈ ಬಾರಿ ಬಹುಮಾನ ಪಡೆದ ಪ್ರತಿಯೊಬ್ಬರಿಗೂ ಕ್ಯಾಟಲ್ ಫಿಡ್ ನೀಡುತ್ತಿದ್ದೆವೆ ಎಂದರು

ಬಹುಮಾನಗಳ ವಿವರ

* ಪ್ರಥಮ ಬಹುಮಾನ: ಮಲ್ಲಿಕಾರ್ಜುನ ನಾಗತ್‌ವಾಡ್

ದ್ವಿತೀಯ ಬಹುಮಾನ: ಶಿವ ರಾಜ್ ಹನುಮಂತ್ ಗೌಡ ಪಾಟೀಲ್

ತೃತೀಯ ಬಹುಮಾನ: ಎಂ.ಐ.ಮಚಾ

ಎಲ್ಲ ಬಹುಮಾನ ವಿಜೇತರಿಗೂ ನಂದಿನ ಕೆಎಂ–ಎಫ್ ಬೈಪಾಸ್ ಕ್ಯಾಟಲ್ ಫೀಡ್ ಮತ್ತು ವೆಟ್‌ಫೆನ್ 600 ನೀಡಿದರು. –ಮಾನಸಗೌಡ

ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ಶಿವಕುಮಾರ ಸ್ವಾಮಿಗಳ ಭಾವಚಿತ್ರ ಅನಾವರಣ



ಭದ್ರಾವತಿ: ಕರ್ನಾಟಕ ರತ್ನ, ತ್ರಿವಿಧ ದಾಸೋಹಿ, ನಡೆದಾಡುವ ದೇವರು ತುಮಕೂರು ಜಿಲ್ಲೆ ಸಿದ್ದಗಂಗಾ ಮಠದ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಯವ–ರಿಗೆ ನಗರದ ಮಾನವ ಹಕ್ಕುಗಳ ಹೋರಾಟ ಸಮಿತಿ ವತಿಯಿಂದ ವಿಶ್ವ ಮಾನವ ಬಿರುದು ನೀಡುವ ಮೂಲಕ ಸ್ಮರಿಸಲಾಯಿತು.

ಯೇಸು ಕ್ರಿಸ್ತರ ಜಯಂತಿಯ ಪ್ರಯುಕ್ತ, ಪ್ರವಾದಿ ಮುಹಮ್ಮದ್ (ಸಿ)ರವರ ವೇದಿಕೆಯಲ್ಲಿ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಹಾಗೂ ಭಾರತ ಸಂವಿಧಾನ ದಿನಾಚರಣೆ ಅಂಗವಾಗಿ ಕರ್ನಾಟಕ ರತ್ನ, ತ್ರಿವಿಧ ದಾಸೋಹಿ ಡಾ. ಶಿವಕುಮಾರ ಸ್ವಾಮೀಜಿಯವರಿಗೆ ವಿಶ್ವ ಮಾನವ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಮಾನವ ಹಕ್ಕುಗಳ ಸಂವಿಧಾನ ಹಕ್ಕುಗಳ ಜಾಗೃತಿಗಾಗಿ ಹಳೇನಗರ ಬಸವೇಶ್ವರ ವೃತ್ತದ ಅಕ್ಕಮಹಾದೇವಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ ವಿಶ್ವ ಮಾನವ ಸಮಾವೇಶವನ್ನು ಶಾಸಕ ಬಿ.ಕೆ.ಸಂಗಮೇಶ್ವರ್ ಉದ್ಘಾಟಿಸಿ, ಶಿವಕುಮಾರ ಸ್ವಾಮಿಗಳ ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿದರು.

ಮಾನವ ಹಕ್ಕುಗಳ ಹೋರಾಟ ಸಮಿತಿ ಅಧ್ಯಕ್ಷ ಬಿ.ಎನ್ ರಾಜು ಮಾತನಾಡಿ ತುಮಕೂರಿನ ಶ್ರೀ ಸಿದ್ಧಗಂಗಾ ಮಠದಲ್ಲಿ ಎಲ್ಲಾ ಜಾತಿ–ಮತದ ಲಕ್ಷಾಂತರ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಅನ್ನ, ಆಶ್ರಯ, ಉತ್ತಮ ಶಿಕ್ಷಣವನ್ನು ನೀಡುವ ಮೂಲಕ 'ಜನ ಸೇವೆಯೇ ಜನಾರ್ಧನ ಸೇವೆ' ಎಂಬಂತೆ ಬಸವಣ್ಣನವರ ದಾ–ರಿಯನ್ನೇ ಎತ್ತಿ ಹಿಡಿದ ಶ್ರೀಗಳ ಕಾರ್ಯ ಅತ್ಯಂತ ಶ್ರೇಷ್ಠವಾಗಿದೆ. ಶ್ರೀಗಳ ಸೇವಾ ಕಾರ್ಯಗಳು ಪ್ರಪಂಚದ ಎಲ್ಲೆಡೆ ಮೆಚ್ಚುಗೆಗೆ ಪಾತ್ರವಾಗಿವೆ. ಈ ಹಿನ್ನಲೆಯಲ್ಲಿ ಶ್ರೀಗಳನ್ನು ಗೌರವ ಪೂರ್ವಕವಾಗಿ ಸ್ಮರಣೆ ಮಾಡಿಕೊಳ್ಳುವ ಮೂಲಕ ಪ್ರಪಂಚದ ನಾಗರೀಕರ ಪರವಾಗಿ ವಿಶ್ವ ಮಾನವ ಬಿರುದನ್ನು ನೀಡಿ ಪ್ರಶಸ್ತಿಯನ್ನು ಸಾರ್ವಜನಿಕರಿಗೆ ಸಮರ್ಪಿಸಲಾಗುತ್ತಿದೆ ಎಂದು ಹೇಳಿದರು.

ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಹರೋನಹಳ್ಳಿ ಸ್ವಾಮಿ ರವರಿಂದ ಗೀತಗಾಯನ ನಡೆಸಿಕೊಟ್ಟರು. ಹೊಸಮನೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಜಿ.ಧನಂಜಯ ರವರು ಉಪನ್ಯಾಸ ನೀಡಿದರು.

ಸಿಪಿಐ (ಎಂ) ರಾಜ್ಯ ಮಂಡಳಿ ಸದಸ್ಯರು ಹಾಗೂ ಹಿರಿಯ ಕಾರ್ಮಿಕ ಮುಖಂಡರಾದ ಡಿ.ಸಿ.ಮಾಯಣ್ಣ ಅಧ್ಯಕ್ಷತೆ ವಹಿಸಿ ವಿಶ್ವಮಾನವ ಪ್ರಶಸ್ತಿ ಪ್ರದಾನ ಮಾಡಿದರು. ನಿವೃತ್ತ ಪ್ರಾಧ್ಯಾಪಕ ಎಂ.ಚಂದ್ರಶೇಖರಯ್ಯ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಕೆ.ಟಿ.ಗಂಗಾಧರ್ ಮಾತನಾಡಿದರು. ಮಾಜಿ ನಗರಸಭಾ ಅಧ್ಯಕ್ಷ ಆರ್. ಕರುಣಾಮೂರ್ತಿ, ಜೇಡಿಕಟ್ಟೆ ಶ್ರೀ ಮರುಳಸಿದ್ದೇಶ್ವರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಸಿದ್ದಲಿಂಗಯ್ಯ, ನಗರಸಭೆ ಉಪಾಧ್ಯಕ್ಷ ಚನ್ನಪ್ಪ, ಬ್ಲಾಕ್ ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಟಿ. ಚಂದ್ರೇಗೌಡ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಸ್. ಮಣಿಶೇಖರ್, ಹಾಗೂ ವಿವಿಧ ಸಮಾಜಗಳ ಅಧ್ಯಕ್ಷರು, ಮುಖಂಡರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಸಿಂಧನೂರು :ಪಂಪನಗೌಡ_ಬಾದರ್ಲಿ ರವರು ರಾಯಚೂರು ಜಿಲ್ಲಾ ಆರ್.ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಅವರಿಗೆ ಗೌರವ ಪೂರ್ವಕವಾಗಿ ಸನ್ಮಾನಿಸಲಾಯಿತು ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಬಸವರಾಜ ಗೌಡ ನಡವಿ, ಬಸನಗೌಡ ಬೆಳಗುರ್ಕಿ,ರಾಮಣ್ಣ ಸಾಸಲಾಮರಿ, ಹೊಳೆಯಪ್ಪ ದಿದ್ದಿಗಿ, ನಿಂಗಪ್ಪ ಕುರಿ ಇನ್ನು ಮುಂತಾದವರು ಭಾಗವಹಿಸಿದ್ದರು..



ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಾಗಲಕೋಟೆ ನೂತನ ಜಿಲ್ಲಾಧ್ಯಕ್ಷರಾಗಿ ಜಯ ಸಾದಿಸಿದ ಸ್ನೇಹ ಜೀವಿ ಶ್ರೀ ಶಿವಾನಂದ ಜಿ ಶೇಲ್ಲಿಕೇರಿ ಇವರಿಗೆ ಜಮಖಂಡಿ ತಾಲೂಕ ಸಾಹಿತಿಗಳ ಪರವಾಗಿ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ನಾಡಗೀತೆಯನ್ನು ವೈ.ವೈ. ಕೊಕ್ಕನವರ ಗುರುಗಳು ಹಾಡಿದರು ಸ್ವಾಗತವನ್ನು ಸಂತೋಷ ತಳಿಕೇರಿ ಇವರು ಮಾಡಿದರು ಘನ ಅಧ್ಯಕ್ಷತೆಯನ್ನು ಛಿ, ಝುಲಕಿ ವಹಿಸಿ ಪ್ರಾಸ್ತವಿಕ ನುಡಿಗಳನ್ನು , ಛ ಮಟೊಳಿ ಮಾಡಿದರು ಬಸವ ಚೇತನ ಕಾಲೇಜಿನ ಆಡಳಿತಾ ಧಿಕಾರಿ ಣ ಠಿ ಗಿರಡ್ಡಿ ಮತ್ತು ನೀಲಗುಂದ ಟ ಛಿ ಗೊಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

# ಬಿಡುವಿಲ್ಲದ ಶಿಕ್ಷಕ

ಆತ್ಮೀಯರೇ ಶಿಕ್ಷಕ ವೃತ್ತಿ ಎಂಬುವುದು ತುಂಬಾ ಪವಿತ್ರವಾದ ವೃತ್ತಿ ಭಾರತದ ಪರಂಪರೆಯಲ್ಲಿ ಗುರುವಿಗೆ ಮಹತ್ವದ ಸ್ಥಾನವಿದೆ ಗುರುವಿನಲ್ಲಿ ಬ್ರಹ್ಮ ವಿಷ್ಣು ಮಹೇಶ್ವರ ಆದಿ ದೇವಾನು ದೇವರನ್ನು ಕಾಣುವಂಥ ದೇಶ ನಮ್ಮದು.

ಶಿಕ್ಷಕ ವೃತ್ತಿಯಲ್ಲಿ ರುವ ಪ್ರತಿಯೊಬ್ಬರು ಸಂಬಳಕ್ಕಾಗಿ ಮಾಡುತ್ತಿರುವ ವೃತ್ತಿ ಎಂದು ಭಾವಿಸಿದ್ದರೆ ಬಹುಶಃ ಗುರುವಿಗೆ ಇಷ್ಟೊಂದು ಮಹತ್ವದ ಮನ್ನಣೆ ಸಿಗುತ್ತಿರಲಿಲ್ಲ ಎನಿಸುತ್ತದೆ ಮಣ್ಣಿನ ಮುದ್ದೆಯಂತಿರುವ ಮಕ್ಕಳ ಮನಸ್ಸನ್ನು ಪ್ರತಿನಿತ್ಯ ತಿದ್ದಿ ತೀಡಿ ಭವಿಷ್ಯದ ಸುಂದರ ಶಿಲ್ಪಿಗಳಾಗಿ ಮಾಡುವ ಕಾಯಕ ಈ ಶಿಕ್ಷಕರದ್ದಾಗಿದೆ ಶಿಕ್ಷಕ ಪ್ರಸ್ತುತ ಸರ್ಕಾರದ ಹಲವಾರು ಮಹತ್ವ ಯೋಜನೆಯನ್ನು ಕಾರ್ಯರೂಪಕ್ಕೆ ತರುವಂತ ಮುಖ್ಯವಾಹಿನಿಯಾಗಿ ಕೆಲಸ ಮಾಡುತ್ತಿದ್ದಾನೆ ಅವುಗಳು ಇಂತಿವೆ. ಅಕ್ಷರ ದಾಸೋಹ, ಕ್ಷೀರಭಾಗ್ಯ, ಸುವರ್ಣ ಆರೋಗ್ಯ ಚೈತನ್ಯ, ಸೈಕಲ್ ವಿತರಣೆ, ಪಠ್ಯಪುಸ್ತಕ ವಿತರಣೆ, ಬ್ಯಾಗ್ ವಿತರಣೆ, ಚಿನ್ನದ ಅಂಗಳ, ಕೂಲಿಯಿಂದ ಶಾಲೆಗೆ, ಬಾ ಬಾಲೆ ಶಾಲೆಗೆ, ಶಾಲಾ ಪ್ರಾರಂಭೋತ್ಸವ, ದಾಖಲಾತಿ ಆಂದೋಲನ, ಶಾಲೆ ಬಿಟ್ಟ ಮಕ್ಕಳ ಮನೆ ಭೇಟಿ, ಎಸ್ಡಿಎಂಸಿ ರಚನೆ, ಶೌಚಾಲಯ ನಿರ್ವಹಣೆ, ಕಟ್ಟಡ ಕಾಮಗಾರಿ, ಸಮುದಾಯದತ್ತ ಶಾಲೆ, ಶಾಲಾ ವಾರ್ಷಿಕೋತ್ಸವ, ಪ್ರಗತಿ ಪತ್ರ ತುಂಬುವುದು, ಪಾಠ ಯೋಜನೆ, ಪಾಠ ಬೋಧನೆ, ಕ್ರಿಯಾಯೋಜನೆ, ಕ್ರಿಯಾ ಸಂಶೋಧನೆ, ಶೈಕ್ಷಣಿಕ ಯೋಜನೆ, ದಾಖಲೆ ನಿರ್ವಹಣೆ, ಡಾಟಾ ಎಂಟ್ರಿ, ಮಕ್ಕಳಿಗೆ ಬ್ಯಾಂಕ್ ಖಾತೆ ತೆರೆಯುವುದು, ವಿದ್ಯಾರ್ಥಿವೇತನ, ಸಮನ್ವಯ ಶಿಕ್ಷಣ, ಜನಗಣತಿ, ಚುನಾವಣಾ ಕಾರ್ಯ, ಬಿಎಲ್ಒ ಕೆಲಸ, ಗುಡಿಗೆ ಹಂಚಿಕೆ, ಪಲ್ಸ್ ಪೋಲಿಯೋ, ಸಮಾಲೋಚನಾ ಸಭೆ, ಎಸ್ಡಿಎಂಸಿ ಸಭೆ, ಪಾಲಕರ ಸಭೆ, ಶಿಕ್ಷಕರ ಸಭೆ, ಪುನಶ್ಚೇತನ ತರಬೇತಿ, ಹೊರಸಂಚಾರ, ಕ್ಷೇತ್ರ ಸಂದರ್ಶನ, ಶೈಕ್ಷಣಿಕ ಪ್ರವಾಸ, ಜಿಲ್ಲಾ ದರ್ಶನ, ಸೇತುಬಂಧ, ಪರಿಹಾರ ಬೋಧನೆ, ಪೂರಕ ಬೋಧನೆ, ನಲಿಕಲಿ, ಕಲಿನಲಿ, ಚೈತನ್ಯ ಮಾದರಿ, ಟಿಎಲ್ಎಂ ತಯಾರಿ, ಚಿನ್ನರ ಚುಕ್ಕಿ, ಚುಕ್ಕಿ ಚಿನ್ನ, ಕೇಳಿ ಕಲಿ, ಕ್ರೀಡಾ ಮೇಳ, ಪ್ರತಿಭಾ ಕಾರಂಜಿ, ಕಲಿಕೋತ್ಸವ, ಮೆಟ್ರಿಕ್ ಮೇಳ, ವಿಜ್ಞಾನ ಮೇಳ, ಸಾಂಸ್ಕೃತಿಕ ಕಾರ್ಯಕ್ರಮ, ಪೂರಕ ಪರೀಕ್ಷೆ, ನೈದಾನಿಕ ಪರೀಕ್ಷೆ, ಘಟಕ ಪರೀಕ್ಷೆ, ಮೊರಾರ್ಜಿ ದೇಸಾಯಿ ಪ್ರವೇಶ ಪರೀಕ್ಷೆ, ಆದರ್ಶ ವಿದ್ಯಾಲಯ ಪ್ರವೇಶ ಪರೀಕ್ಷೆ, ಕಸ್ತೂರಿ ಬಾ ಬಾಲಿಕಾ ವಿದ್ಯಾಲಯ ಪ್ರವೇಶ ಪರೀಕ್ಷೆ, ನವೋದಯ ಪ್ರವೇಶ ಪರೀಕ್ಷೆ, ಎನ್ ಟಿ ಎಸ್ ಪರೀಕ್ಷೆ, ಎನ್ಎಂಎಂಎಸ್ ಪರೀಕ್ಷೆ, ಗಣರಾಜ್ಯೋತ್ಸವ, ಸ್ವಾತಂತ್ರೋತ್ಸವ, ಯುವಕರ ದಿನಾಚರಣೆ, ಮಕ್ಕಳ ದಿನಾಚರಣೆ ಇತ್ಯಾದಿ ಹಲವಾರು ದಿನಾಚರಣೆ ಗಳನ್ನು ಮತ್ತು ಮೊಟ್ಟೆ ಬಾಳೆಹಣ್ಣು ವಿತರಣೆ, ಇನ್ನು ಇತ್ಯಾದಿ. ಇನ್ನು ಹಲವಾರು ಕೆಲಸಗಳನ್ನು ಇಲಾಖೆಯ ಸೂಚನೆಯಂತೆ ಬಿಡುವಿಲ್ಲದೆ ತನ್ನ ಸೇವೆಯಲ್ಲಿ ವಿರಮಿಸದೆ ದುಡಿಯುತ್ತಿದ್ದಾನೆ ಇವೆಲ್ಲದರ ನಡುವೆ ಪ್ರತಿನಿತ್ಯ ಮಕ್ಕಳಿಗೆ ಶಿಸ್ತು ಪಾಲನೆ ಸುಭಾಷಿತ ವಚನ ಒಗಟು ಗಾದೆಮಾತು ಪತ್ರಿಕೆ ಸಂವಿಧಾನ ಪೀಠಿಕೆ , ಮನನ ಮಾಡುವುದು, ನೀತಿ ಕಥೆ ಹೇಳುವುದು, ಹಾಡು ಹೇಳಿ ಮಕ್ಕಳನ್ನು ರಂಜಿಸುವುದು, ಉಪಯುಕ್ತ ಕಲಿಕೋಪಕರಣಗಳು ಒಂದಿಗೆ, ಪಾಠ ಬೋಧಿಸುವುದು, ಮಕ್ಕಳ ನೋಟ್ ಪುಸ್ತಕ ಪರಿಶೀಲಿಸುವುದು, ಗೃಹಪಾಠ ಪರಿಶೀಲಿಸುವುದು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸೂಕ್ತ ಸಲಹೆ, ಈ ಮಾಹಿತಿ ನೀಡುವುದು ಕ್ರೀಡಾ ಚಟುವಟಿ–ಕೆಯಲ್ಲಿ ತೊಡಗುವುದು, ಇಲಾಖೆಯ ಆದೇಶ ಮತ್ತು ಪಾಠಗಳನ್ನು ಸಕಾಲದಲ್ಲಿ ತುಂಬಿ ಮಾಹಿತಿ ಕಳಿಸುವುದು ಹೀಗೆ ಶಿಕ್ಷಕನ ಕೆಲಸವನ್ನು ಹೇಳುತ್ತಾ ಹೋದರೆ ಒಂದು ದೊಡ್ಡ ಪಟ್ಟಿಯೇ ತಯಾರಾಗುತ್ತದೆ. ಇವೆಲ್ಲಾ ಒತ್ತಡಗಳ ನಡುವೆ ಮಕ್ಕಳೊಂದಿಗೆ ನಗುನಗುತ ಕಲಿಸುವ ನಿಜವಾದ... ಶಿಕ್ಷಕ. ಈಗಾಗಲೇ ಭೌತಿಕ ತರಗತಿಗಳು ಆರಂಭವಾಗಿದ್ದು ಶಿಕ್ಷಕರಿಗೆ ಆನ್ಲೈನ್ ಸಭೆಗಳು ಎಸ್ ಎ ಟಿ ಎಸ್ ಮಾಹಿತಿ ತುಂಬುವುದು . ತರಬೇತಿಗಳನ್ನು ಕಡಿಮೆಗೊಳಿಸಿ ಶಿಕ್ಷಕರು ಮಕ್ಕಳೊಂದಿಗೆ ಹೆಚ್ಚು ಬೆರೆಯಲು. ಕಲಿಕೆಯಲ್ಲಿ ತೊಡಗಲು. ಅವಕಾಶ ನೀಡಬೇಕಾಗಿ ವಿನಂತಿ.

**– ಗೊರವರ ಕೋಟೆಪ್ಪ ಹೊಸ ಓಬಳಾಪುರ.**



ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವ ಅಭಿಯಾನ ಚಾಲನೆ

ವಿಜಯನಗರ (ಜಿಲ್ಲೆ) ಕೊಟ್ಟೂರು :– ಪಟ್ಟಣದ ತೇರು ಬಯಲು ಬಸವೇಶ್ವರ ದೇವಸ್ಥಾನದ ಬಳಿ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವ ಅಭಿಯಾನವನ್ನು ಕೊಟ್ಟೂರು ಬ್ಲಾಕ್ ಕಾಂಗ್ರೆಸ್ ಹಾಗೂ ಯುವ ಕಾಂಗ್ರೆಸ್ ನೇತೃತ್ವದಲ್ಲಿ ಚಾಲನೆ ನೀಡಲಾಯಿತು ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರಾದ ಎಂ ಎಂ ಜೆ ಹರ್ಷವರ್ಧನ ಅವರು ಮಾತನಾಡಿ ಕಾಂಗ್ರೆಸ್ ಪಕ್ಷದ ಸದಸ್ಯತ್ವವನ್ನು ಅತಿ ಹೆಚ್ಚಾಗಿ ಯುವಕರು ಪಡೆದುಕೊಂಡು ಪಕ್ಷ ಸಂಘಟನೆಯಲ್ಲಿ ತೊಡಗಿ ಎಂದು ಸೂಚನೆ ನೀಡಿದರು. ಕೊಟ್ಟೂರು ಬ್ಲಾಕ್ ನಲ್ಲಿ ಒಟ್ಟು ಐದು ಕಡೆಗಳಲ್ಲಿ ಇಂದು ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ೦. ಒ. ಎ. ಮಲ್ಲಿಕಾರ್ಜುನ ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರಾದ ಪಿಎಚ್ ದೊಡ್ಡರಾಮಣ್ಣ, ಸುಧಾಕರ ಪಾಟೀಲ್, ಕೊಟ್ಟೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಿಕಾರ್ಜುನ್ ಯುವ ಕಾಂಗ್ರೆಸ್ ಅಧ್ಯಕ್ಷ ಆಕರ್ಷ ಹಳೆಮನೆ, ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷ ಪ್ರಸಾದ್ ಅರಮನೆ,ಕಾರ್ಮಿಕ ಘಟಕದ ಅಧ್ಯಕ್ಷರಾದ ಪಿಕೆ ಇಂದ್ರಜಿತ್, ಹ್ಯಾಳ್ಯಾ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರಾಘವೇಂದ್ರ ಮುಖಂಡರಾದ ಆಟವಾಳ್ಗಿ ಸಂತೋಷ್ , ಹಾಗೂ ಪಟ್ಟಣ ಪಂಚಾಯತಿ ಸದಸ್ಯರು ಈ ವೇಳೆ ಉಪಸ್ಥಿತರಿದ್ದರು.



# ಯಾವ ವ್ಯಕ್ತಿ ಯಾವ ಆಸ್ತಿಯ ಉಯಿಲು ಮಾಡಬಹುದು..?

ಮೃತ್ಯು ಪತ್ರ ( will deed)

ಮೃತ್ಯು ಪತ್ರ ಯಾರು ಬರೆಯಬಹುದು ..?

ಮೃತ್ಯು ಪತ್ರ ರದ್ದು ಪರಿಸಬಹುದೆ..?

ಯಾವ ವ್ಯಕ್ತಿ ಯಾವ ಆಸ್ತಿಯ ಉಯಿಲು ಮಾಡಬಹುದು..?

ಯಾರು ವಿಶೇಷ ಮೃತ್ಯ ಪತ್ರ ಬರೆಯಬಹುದು..?

ಮನಸ್ಸಿದ್ದಲ್ಲಿ ಮಾರ್ಗ, ಉಯಿಲಿದ್ದಲ್ಲಿ ನೆಂಟ.' ಇದು ಹಿರಿಯರ ಮಾತು. ಒಬ್ಬ ವ್ಯಕ್ತಿ, ತಾನು ಸಂಪಾದಿಸಿದ ಆಸ್ತಿಯನ್ನು, ತನ್ನ ಮರಣಾನಂತರ ಅದು ಯಾರಿಗೆ ಹೋಗಬೇಕು ಎಂದು ಮನಸ್ಸು ಮಾಡಿ ನಿರ್ಧಾರ ತಾಳಿ, ಮನಸ್ಸಿನ ಆ ನಿರ್ಧಾರದಂತೆ ಬರೆದಿಡುವ ಒಂದು ದಾಖಲೆ

ಮೃತ್ಯು ಪತ್ರವನ್ನು ಅಥವಾ ಉಯಿಲು ಪತ್ರ ಎಂತಲೂ ಕರೆಯುತ್ತಾರೆ ಆಂಗ್ಲ ಭಾಷೆಯಲ್ಲಿ ತಿಟಟ ಜಜಜಜ ಎಂತಲೂ ಕರೆಯುತ್ತಾರೆ

ಒಬ್ಬ ವ್ಯಕ್ತಿಯು ತಾನು ಮರಣಾನಂತರ ತನ್ನ ಆಸ್ತಿಯ ವಿಲೇವಾರಿಗೆ ಸಂಬಂಧಿಸಿದಂತೆ ಇರುವ ತನ್ನ ಅಪೇಕ್ಷೆಯನ್ನು ಅಥವಾ ಇಚ್ಛೆಯನ್ನು ತಿಳಿಸಿ ಕಾನೂನಿನನ್ವಯ ಮಾಡುವ ಘೋಷಣೆಯೇ ಉಯಿಲು ಅಥವಾ ಮೃತ್ಯುಪತ್ರ ಎಂಬುದಾಗಿ ಭಾರತೀಯ ವಾರಸಾ ಅಧಿನಿಯಮ, 1925 ಖಟಿ–ಜುಚಿಟಿ ಖಣಛಿಛಿಟುಂಟಿ ೦ಛಿಣ, 1925 ದ ಕಲಂ 2ಎಚ್ ರ ಅಡಿಯಲ್ಲಿ ವ್ಯಾಖ್ಯಾನಿಸಲಾಗಿದೆ.

ಇದರ ಅನ್ವಯ ಉಯಿಲು(ಮೃತ್ಯು ಪತ್ರ) ಎಂದರೆ...

1) ಒಬ್ಬ ವ್ಯಕ್ತಿಯು ಕಾನೂನಿನನ್ವಯ ಮಾಡಿದ ಘೋಷಣೆ.

2) ಆ ಘೋಷಣೆಯು ಕಾನೂನುಬದ್ಧವಾಗಿ ಇರಬೇಕು: ಅಂದರೆ ವ್ಯಕ್ತಿಯು ಯಾವ ಆಸ್ತಿಯ ಸಂಬಂಧವಾಗಿ ಘೋಷಣೆಯನ್ನು ಮಾಡಿರುತ್ತಾನೆಯೋ ಅಂತಹ ಆಸ್ತಿಯನ್ನು ಆತನು ತನ್ನ ಜೀವಿತಾವಧಿಯಲ್ಲಿ ವಿಲೇವಾರಿ ಮಾಡುವ ಅಧಿಕಾರವನ್ನು ಹೊಂದಿರಬೇಕು.

3) ಆ ಘೋಷಣೆಯು ಆತನ ಮರಣಾನಂತರ ಆತನ ಆಸ್ತಿಯ ವಿಲೇವಾರಿಗೆ ಸಂಬಂಧಿಸಿದಂತೆ ಆತನ ಅಪೇಕ್ಷೆ ಅಥವಾ ಇಚ್ಛೆಯನ್ನು ತಿಳಿಸುವಂತಿರಬೇಕು.

ಅಲ್ಲದೆ ಆತನ ಉಯಿಲು ಮಾಡುವ ಸಾಮರ್ಥ್ಯವನ್ನು ಹೊಂದಿರತಕ್ಕದ್ದು.

ಉಯಿಲು ಲಿಖಿತರೂಪದಲ್ಲಿ ಇರಬೇಕು. ಆದರೆ ಉಯಿಲು ಕರ್ತನು (ಖಿಢಣಚಿಡಿಣಂಡಿ) ಯುದ್ಧದಲ್ಲಿ ನಿರತನಾದ ಸೈನಿಕ, ವೈಮಾನಿಕ, ಅಥವಾ ನಾವಿಕ ದರ್ಜೆಯ ಅಧಿಕಾರಿ ಆಗಿದ್ದರೆ ಆತನು ವಿಶೇಷ ಸಂದರ್ಭಗಳಲ್ಲಿ ಭಾಗಶಃ ಲಿಖಿತ ಮತ್ತು ಭಾಗಶಃ ಮೌಖಿಕ ಅಥವಾ ಸಂಪೂರ್ಣವಾಗಿ ಮೌಖಿಕ ಉಯಿಲನ್ನು ಮಾಡಬಹುದು. ( ಕಚಿಡಿಣ–ಟಥಿ ತಿಡಿಣಣಜಟಿ, ಕಚಿಡಿಣಟಥಿ ಠಡಿಚಿಟ ಠಡಿ ಈಣಟಟಥಿ ಔಡಿಚಿಟ). ಇಂತಹ ಉಯಿಲಿಗೆ ವಿಶೇಷ ಉಯಿಲು (ಕಡಿತುಟಜಂಜಜ ಕುಟಟ) ಎಂದು ವ್ಯಾಖ್ಯಾನಿಸಲಾಗಿದೆ.

ವಿಶೇಷ ಉಯಿಲನ್ನು ಹೊರತುಪಡಿಸಿ ಇತರ ವಿಶೇಷವಲ್ಲದ ಉಯಿಲುಗಳೆಲ್ಲವೂ ( ಗಟಿಕಖಿಖಗಿ–ಖಐಖಲಉಇಆ ಘಖಐಐ) ಲಿಖಿತರೂಪದಲ್ಲಿಯೇ ಇರತಕ್ಕದ್ದು.

ವಿಶೇಷವಲ್ಲದ ಉಯಿಲನ್ನು (ಗಟಿರಿಡಿತು–ಟಜಂಜಜ ಘುಟಟ) ಯಾರು ಮಾಡಬಹುದು?

ಅಪ್ರಾಪ್ತ ವಯಸ್ಕನಲ್ಲದ ಅಂದರೆ 18 ವರ್ಷಗಳ ವಯಸ್ಸನ್ನು ಪೂರೈಸಿದ ಮತ್ತು ಮಾನಸಿಕ ಸ್ವಾಸ್ಥ್ಯ ಹೊಂದಿರುವ ಯಾವುದೇ ವ್ಯಕ್ತಿಯು ವಿಶೇಷವಲ್ಲದ ಉಯಿಲನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ.

1) ಒಬ್ಬ ವಿವಾಹಿತ ಮಹಿಳೆ ಯಾವ ಆಸ್ತಿಯನ್ನು ತನ್ನ ಜೀವಿತಕಾಲದಲ್ಲಿ ವಿಲೇವಾರಿ (ಪರಭಾರೆ) (ಖಚಿಟಜ, ಐಜಛಿಜ, ಖಜಟಿಣ, ಒಂಡಿಣಂಚಿಂಜ, ಜಣಛಿ) ಮಾಡುವ ಹಕ್ಕನ್ನು ಹೊಂದಿರುತ್ತಾರೆಯೋ ಅಂತಹ ಆಸ್ತಿಗೆ ಸಂಬಂಧಿಸಿದಂತೆ ಉಯಿಲನ್ನು ಮಾಡಬಹುದು.

2 ) ಕಿವುಡ, ಮೂಗ ಅಥವಾ ಕುರುಡ ವ್ಯಕ್ತಿ ತಾನು ಮಾಡುತ್ತಿರುವ ಕೃತ್ಯದ ಬಗ್ಗೆ ಸಾಕಷ್ಟು ತಿಳುವಳಿಕೆ ಹೊಂದಿದ್ದಲ್ಲಿ ಅಂತಹ ವ್ಯಕ್ತಿಯೂ ಸಹ ತನ್ನ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಉಯಿಲನ್ನು ಮಾಡಬಹುದು.

3) ಯಾವುದೇ ವ್ಯಕ್ತಿಯು ಕೆಲವು ಸಮಯದಲ್ಲಿ ಮಾತ್ರ ಮಾನಸಿಕವಾಗಿ ಅಸ್ವಸ್ಥನಾಗಿದ್ದು ಮತ್ತೆ ಕೆಲವು ಸಮಯದಲ್ಲಿ ಸ್ವಸ್ಥ ನಾಗಿರುತ್ತಾನೆ (ಕಚಿಡಿಣುಚಿಟ ಖಟಿಚಿಟುಣಥಿ) ಅಂತಹ ವ್ಯಕ್ತಿಯು ಮಾನಸಿಕವಾಗಿ ಸ್ವಸ್ಥ ನಾಗಿದ್ದ ಸಮಯದಲ್ಲಿ ಮಾತ್ರವೇ ಉಯಿಲನ್ನು ಮಾಡಬಹುದು.

ಯಾವುದೇ ವ್ಯಕ್ತಿಯು ಮತ್ತು ತರಿಸುವ ಪದಾರ್ಥದ (Under the Influence of Intoxication) ಸೇವನೆಯಿಂದಾಗಿ ಅಥವಾ ಯಾವುದೇ ರೀತಿಯ ಅನಾರೋಗ್ಯದಿಂದಾಗಿ ಅಥವಾ ಬೇರಾವುದೇ ಕಾರಣದಿಂದ ತಾನು ಮಾಡುತ್ತಿರುವುದೇನು ಎಂಬುದರ ತಿಳುವಳಿಕೆ , ಪರಿಜ್ಞಾನ ವಿಲ್ಲದ ಸ್ಥಿತಿಯಲ್ಲಿದ್ದಾಗ ಉಯಿಲನ್ನು ಮಾಡುವಂತಿಲ್ಲ. ಮಾಡಿದರು ಅದು ಅನುರ್ಜಿತ.

ವ್ಯಕ್ತಿಯೊಬ್ಬನು ಬೇರೊಬ್ಬರ ಬೆದರಿಕೆಗೆ, ಪ್ರಲೋಭನೆಗೆ, ಮರುಳು ಮಾತಿಗೆ ಅಥವಾ ಮೋಸಕ್ಕೆ ಒಳಗಾಗಿದ್ದ ಸಮಯದಲ್ಲಿ ಮಾಡಿದ ಉಯಿಲು ಊರ್ಜಿತವಾಗಿ ಇರುವುದಿಲ್ಲ. (Intimidation, Temptation, Mis- Representation, Undue Influence.) ಉಯಿಲನ್ನು ಮಾಡಲು ಕಾನೂನಿನನ್ವಯ ಸಮರ್ಥರಲ್ಲದವರರು ಅಂದರೆ ಅಪ್ರಾಪ್ತ ವಯಸ್ಕರ (ಒಟಿಂಡಿ) ಅಥವಾ ಬುದ್ಧಿಭ್ರಮಣೆಯ (ಖಜುಂಛಿಥಿ) ಅವರ ಪರವಾಗಿ ಅವರ ಪಾಲಕರು ಅಥವಾ ಪೋಷಕರು ಉಯಿಲನ್ನು ಮಾಡುವಂತಿಲ್ಲ.

ಉಯಿಲನ್ನು ಮಾಡುವಾಗ ಮುಖ್ಯವಾಗಿ ಪಾಲಿಸಬೇಕಾದ ಸಂಗತಿಗಳು:

ಉಯಿಲು ಬರವಣಿಗೆಯಲ್ಲಿಯೇ ಇರತಕ್ಕದ್ದು: ಸಾಧ್ಯವಾದರೆ ಉಯಿಲು ಕರ್ತನು ಅದನ್ನು ತನ್ನ ಕೈಬರಹದಲ್ಲಿಯೇ ಬರೆಯುವುದು ಸೂಕ್ತ.

ಉಯಿಲನ್ನು ಯಾವುದೇ ಭಾಷೆಯಲ್ಲಿ ಯಾವುದೇ ಶೈಲಿಯಲ್ಲಿ ಬರೆಯಬಹುದು. ಉಯಿಲನ್ನು ಛಾಪಾ ಕಾಗದದ ಮೇಲೆಯೇ ಬರೆಯಬೇಕೆಂದೇನಿಲ್ಲ. ಉತ್ತಮ ದರ್ಜೆಯ ಯಾವುದೇ ಕಾಗದದಲ್ಲಿಯೂ ಬರೆಯಬಹುದು.

ಉಯಿಲಿನ ಪ್ರತಿಪುಟದ ಮೇಲೆ ಉಯಿಲು ಕರ್ತನು ತನ್ನ ಸಹಿಯನ್ನು ಮಾಡಬೇಕು ಅಥವಾ ಹೆಬ್ಬೆರಳಿನ ಗುರುತನ್ನು ಹಾಕಬೇಕು. ಉಯಿಲು ದಸ್ತಾವೇಜಿಗೆ ಕನಿಷ್ಠ ಇಬ್ಬರು ವ್ಯಕ್ತಿಗಳು 'ಸಾಕ್ಷಿಗಳೆಂದು' (ಘುಣಟಿಢ) ಉಯಿಲು ಕರ್ತನು ಅದಕ್ಕೆ ಸಹಿ ಮಾಡಿದ್ದನ್ನು ಪ್ರತ್ಯಕ್ಷ ಕಂಡು ಸಹಿ ಮಾಡಬೇಕು.

ಬಿಕ್ಕಲಂ (Document Writer) ಬರಹಗಾರ 'ಸಾಕ್ಷಿ' ಆಗುವುದಿಲ್ಲ.(ಉಯಿಲು ದಾಖಲೆ ಪತ್ರ ಬರೆದ ವ್ಯಕ್ತಿ Deed writer)

ಉಯಿಲಿನ ಮೂಲಕ ಯಾವುದೇ ವಿಧದ ಪ್ರಯೋಜನವನ್ನು ಪಡೆಯುವ ವ್ಯಕ್ತಿ ( Beneficiary Of the will ) ಉಯಿಲಿಗೆ ಸಾಕ್ಷಿ ಹಾಕಬಾರದು. ಹಾಗೊಂದು ವೇಳೆ ಸಾಕ್ಷಿ ಹಾಕಿದಲ್ಲಿ, ಸಾಕ್ಷಿ ಹಾಕಿದ್ದು ಅನೂರ್ಜಿತವಾಗುವುದಿಲ್ಲ. ಆದರೆ ಸಾಕ್ಷಿ ಹಾಕಿದ ವ್ಯಕ್ತಿ ಅಥವಾ ಆತನ/ಆಕೆಯ ಹೆಂಡತಿ ಅಥವಾ ಗಂಡ ಉಯಿಲು ಮೂಲಕ ಪಡೆದ ಪ್ರಯೋಜನ ರದ್ದಾಗುವ ಸಂಭವವಿರುತ್ತದೆ.

ಉಯಿಲಿನಲ್ಲಿ ತೋರಿಸಿದ ಆಸ್ತಿಗಳ ಮತ್ತು ಅವುಗಳನ್ನು ಪಡೆಯುವ ವ್ಯಕ್ತಿಗಳ ವಿವರಗಳನ್ನು ಯಾವುದೇ ಸಂದಿಗ್ಧತೆ ಅಥವಾ ಅಸ್ಪಷ್ಟತೆಗೆ ಅವಕಾಶವಿಲ್ಲದಂತೆ ಸ್ಪಷ್ಟವಾಗಿ ಮತ್ತು ಸರಿಯಾಗಿ ನಮೂದಿಸಬೇಕು.

ಯಾವ ವಿಧದ ಆಸ್ತಿಗಳನ್ನು ಉಯಿಲನ್ನು ,(ಮೃತ್ಯು ಪತ್ರ) ಮಾಡಬಹುದು?

ಉಯಿಲು ಕರ್ತನು ಯಾವ ಆಸ್ತಿಗಳಿಗೆ ಸಂಬಂಧಿಸಿದಂತೆ ಉಯಿಲು ಮಾಡಲು ಇಚ್ಚಿಸುತ್ತಾನೆಯೋ ಅಂತಹ ಆಸ್ತಿಗಳನ್ನು ತನ್ನ ಜೀವಿತಾವಧಿಯಲ್ಲಿ ವಿಲೇವಾರಿ ಮಾಡುವ ಸಂಪೂರ್ಣ ಹಕ್ಕನ್ನು ಹೊಂದಿರಬೇಕು.

ಒಬ್ಬ ಹಿಂದೂ ತನ್ನ ಸ್ವಯಾರ್ಜಿತ ವಾದ ಸಂಪೂರ್ಣ ಆಸ್ತಿಯನ್ನು ,ಒಬ್ಬ ಹಿಂದೂ ಮಹಿಳೆ ತನ್ನ ಜೀವಿತ ಸಮಯದಲ್ಲಿ ಯಾವ ಆಸ್ತಿಯನ್ನು ತನ್ನ ಇಚ್ಛಾನುಸಾರ ಪರಭಾರೆ (ವಿಲೇವಾರಿ) ಮಾಡುವ ಹಕ್ಕನ್ನು ಹೊಂದಿರುತ್ತಾಳೋ ಅಂತಹ ಆಸ್ತಿಯನ್ನು ,ಹಿಂದು ಅವಿಭಕ್ತ (ಏಕತ್ರ ,ಒಟ್ಟು ) ಕುಟುಂಬದ ಸದಸ್ಯನೊಬ್ಬನ ಕುಟುಂಬದ ಆಸ್ತಿ ವಿಭಾಗವಾದಲ್ಲಿ ತನ್ನ ಪಾಲಿಗೆ ಬರುವಷ್ಟು ಆಸ್ತಿಯನ್ನು ,ಒಬ್ಬ ಮಹಮ್ಮದೀಯನು ತನ್ನ ಒಟ್ಟು ಆಸ್ತಿಯ ಮೂರನೇ ಒಂದು ಭಾಗಕ್ಕೆ ಸಂಬಂಧಿಸಿದಂತೆ ,ಉಯಿಲನ್ನು ಮಾಡುವ ಹಕ್ಕುಳ್ಳವರಾಗಿರುತ್ತಾರೆ. ಉಯಿಲು ಮಾಡಿದ್ದರಿಂದಾಗಿ ಉಯಿಲುಕರ್ತನು(ವಿಲ್ ಬರೆಯುವವನು) ತನ್ನ ಆಸ್ತಿಯ ಮೇಲಿನ ಹಕ್ಕನ್ನು ಎಳ್ಳಷ್ಟೂ ಕಳೆದುಕೊಳ್ಳುವುದಿಲ್ಲ.

ಉಯಿಲು ನಿರ್ವಾಹಕ (EXECUTOR)

ಉಯಿಲಿನಲ್ಲಿರುವ ನಿರ್ದೇಶನಗಳಂತೆ ಆಸ್ತಿಗಳ ವಿತರಣೆ ಅಥವಾ ವಿಲೇವಾರಿ ಮಾಡಲೆಂದು ಉಯಿಲು ಕರ್ತನು ತನ್ನ ಉಯಿಲಿನಲ್ಲಿ ಒಬ್ಬ (ಇಥ–ಜಛಿಣಣಂಡಿ) ಉಯಿಲು ನಿರ್ವಾಹಕನನ್ನು ಅಥವಾ ಒಬ್ಬನಿಗಿಂತ ಹೆಚ್ಚು ನಿರ್ವಾಹಕರನ್ನು ನೇಮಿಸಿಕೊಳ್ಳಲು ಅವಕಾಶವಿದೆ.

ಉಯಿಲನ್ನು ನೊಂದಣಿ (ಖಜರ್ಚಣಡಿಚಿಣುಂಟಿ) ಮಾಡಿಸುವುದು ಕಡ್ಡಾಯವಲ್ಲ. ಆದರೆ ನೊಂದಾಯಿತ ಉಯಿಲಿನ ಬಗ್ಗೆ ಅನುಮಾನ ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಅಲ್ಲದೆ ಉಯಿಲಿನ ಮೂಲಪ್ರತಿ ಕಳೆದುಹೋದ ಸಂದರ್ಭದಲ್ಲಿ ಅದರ ದೃಢೀಕೃತ ನಕಲನ್ನು ಪಡೆದು ಜಾರಿಗೆ ತರಲು ಧನಾತ್ಮಕ ಅವಕಾಶವನ್ನು ಕಲ್ಪಿಸುತ್ತದೆ.

ಉಯಿಲನ್ನು ಭದ್ರತೆ:

ಉಯಿಲುಕರ್ತನು ತನ್ನ ಉಯಿಲನ್ನು ತನ್ನಲ್ಲಿಯೇ ಇರಿಸಿಕೊಳ್ಳಬಹುದು; ಅಥವಾ ತನ್ನ ಯಾವುದೇ ವಿಶ್ವಾಸಿಕರ ಹತ್ತಿರವಾಗಲೀ, ಅಥವಾ ಮೊಹರು ಮಾಡಿದ ಲಕೋಟೆಯೊಳಗೆ ಇಟ್ಟು ನೋಂದಣಾಧಿಕಾರಿ ಕಛೇರಿಯಲ್ಲಾಗಲಿ ಭದ್ರವಾಗಿಡಬಹುದು.

ಉಯಿಲು ಕರ್ತನು ಮೃತಪಟ್ಟಲ್ಲಿ ಆತನಿಗೆ ಸಂಬಂಧಿಸಿದವರು ನೋಂದಣಾಧಿಕಾರಿಗೆ ಅರ್ಜಿ ಸಲ್ಲಿಸಿ ಭದ್ರವಾಗಿಟ್ಟ ಉಯಿಲಿನ ಧೃಢೀಕೃತ ನಕಲನ್ನು ನೋಂದಣಾಧಿಕಾರಿಯವರಿಂದ ಪಡೆದುಕೊಳ್ಳಬಹುದು.ಭದ್ರವಾಗಿಟ್ಟ ಉಯಿಲನ್ನು ಅದರ ಕರ್ತನು ಬಯಸಿದಾಗ ಹಿಂದಕ್ಕೆ ಪಡೆಯಬಹುದು.

ಉಯಿಲಿನ ತಿದ್ದುಪಡಿ:

ಉಯಿಲನ್ನು ಮಾಡಿದ ನಂತರ ಉಯಿಲುಕರ್ತನು ತನ್ನ ಜೀವಿತದ ಅವಧಿಯಲ್ಲಿ ಈ ಉಯಿಲಿಗೆ ಯಾವುದೇ ರೀತಿಯಲ್ಲಿ ತಿದ್ದುಪಡಿಯನ್ನು ತರುವ ಹಕ್ಕನ್ನು ಹೊಂದಿರುತ್ತಾನೆ. ಆತನು ಬೇರೆಯದೇ ಆದ ಮತ್ತೊಂದು ದಸ್ತಾವೇಜನ್ನು ಬರೆದು ತಿದ್ದುಪಡಿ ಮಾಡಬೇಕಾಗುತ್ತದೆ. ಈ ದಸ್ತಾವೇಜಿಗೆ ಉಯಿಲಿನ ಅನುಬಂಧ ಅಥವಾ ಕೊಡಿಸಿಲ್ ಎಂದು ಕರೆಯಲಾಗುತ್ತದೆ.ಉಯಿಲು ನೋಂದಾಯಿಸಿದ ಉಯಿಲಾಗಿದ್ದರೆ ಅದಕ್ಕೆ ತಿದ್ದುಪಡಿ ತರುವ ಅನುಬಂಧ ಅಥವಾ ಕೊಡಿಸಿಲ್ ಅನ್ನು ಸಹ ನೋಂದಣಿ ಮಾಡಬೇಕಾಗುತ್ತದೆ.ಮೂಲ ಉಯಿಲನ್ನು ಬರೆಯುವಾಗ ಪಾಲಿಸಬೇಕಾದದ್ದೆಲ್ಲವನ್ನು ಅನುಬಂಧವನ್ನು ಬರೆಯುವಾಗಲೂ ಸಹ ಪಾಲಿಸಬೇಕಾಗುತ್ತದೆ.

ಮೃತ್ಯು ಪತ್ರವನ್ನು (ಉಯಿಲು) ರದ್ದುಗೊಳಿಸುವುದು ಹೇಗೆ?

ಮೂಲ ಉಯಿಲು ನೋಂದಾಣಿ ಉಯಿಲಾಗಿದ್ದರೆ ಮತ್ತೊಂದು ಉಯಿಲನ್ನು ಬರೆದು ಅದರಲ್ಲಿ ಮೊದಲನೇ ಉಯಿಲನ್ನು ರದ್ದುಗೊಳಿಸಿರುವುದಾಗಿ ಘೋಷಿಸುವ ಮೂಲಕ ಮೂಲ ಉಯಿಲನ್ನು ರದ್ದುಗೊಳಿಸಬಹುದು.ನೋಂದಾಣಿ ಮಾಡಲಾದ ಉಯಿಲನ್ನು ರದ್ದಿತಿ ಪತ್ರವನ್ನು ಮಾಡಿಸಿ ಆ ಪತ್ರವನ್ನು ನೊಂದಾಯಿಸುವ ಮೂಲಕವೂ ರದ್ದುಗೊಳಿಸಬಹುದು.ರದ್ದು ಪಡಿಸಲಾದ ಉಯಿಲಿನ ಪುನರುಜ್ಜೀವನ ಒಮ್ಮೆ ರದ್ದುಪಡಿಸಿದ ಉಯಿಲನ್ನು ಪುನರುಜ್ಜೀವನಗೊಳಿಸಲಾಗದು. ಆದರೆ ಉಯಿಲಿನಲ್ಲಿಯ ಅಂಶಗಳನ್ನೇ ಅಳವಡಿಸಿ ಮತ್ತೊಂದು ಉಯಿಲನ್ನು ಹೊಸತಾಗಿ ಬರೆಯಬಹುದು.

ಉಯಿಲು ಮತ್ತು ಪ್ರೋಬೆಟ್:

ಒಂದು ಉಯಿಲು ನಿಸ್ಸಂದೇಹವಾಗಿ ಸಾಚಾ ಉಯಿಲು (Genuine Will) ಎಂದು ನ್ಯಾಯಾಲಯದಲ್ಲಿ ರುಜುವಾತುಪಡಿಸಿ ಪಡೆಯುವ ಉಯಿಲಿನ ಪ್ರಮಾಣಿತ ಪ್ರತಿಗೆ ಪ್ರೊಬೇಟ್ ಎನ್ನುತ್ತಾರೆ.

ಪ್ರೋಬೆಟ್ ಅನ್ನು ನ್ಯಾಯಾಲಯವು ವಿವರವಾಗಿ ವಿಚಾರಣೆ ನಡೆಸಿದ ನಂತರವೇ ಕೊಡು ಮಾಡುವುದರಿಂದ ಉಯಿಲು ಸಂಶಯಾತೀತವಾಗುತ್ತದಲ್ಲದೆ ಅದರ ಸಿಂಧುತ್ವವನ್ನು ಯಾರೂ ಪ್ರಶ್ನಿಸುವಂತಿಲ್ಲ. ಉಯಿಲಿನ ಜಾರಿಗಾಗಿ ಅದರಲ್ಲಿ ನಿರ್ವಾಹಕನನ್ನು ನೇಮಿಸಿದಲ್ಲಿ ಆತನು ಪ್ರೋಬೆಟನ್ನು ಪಡೆಯಬೇಕಾಗುತ್ತದೆ.

ಪ್ರೋಬೆಟ್ ಗಾಗಿ ಅರ್ಜಿ ಸಲ್ಲಿಸಲು ಯಾವುದೇ ಕಾಲ ಪರಿಮಿತಿ ಇರುವುದಿಲ್ಲ.

– ಮರಿಗೌಡ ಬಾದರದಿನಿ, ವಕೀಲರು & ಪತ್ರಕರ್ತರು ಕುಷ್ಟಗಿ

ಕರುನಾಡ ಕಂದ
ಸಂಪುಟ–1 | ಸಂಚಿಕೆ–5
ದಿನಾಂಕ: 01–01–2022 | ಪುಟಗಳು: 16

# ಬಿಪಿನ್ ರಾವತ್ ಹೆಲಿಕಾಪ್ಟರ್ ದುರಂತದಲ್ಲಿ ಹುತಾತ್ಮರಗೆ ಭಾವಪೂರ್ಣ ಗೌರವ ನಮನ

ಕುಷ್ಟಗಿ: ಇತ್ತೀಚಿಗೆ ತಮಿಳುನಾಡಿನ ನೀಲಗಿರಿಯಲ್ಲಿ ಸೇನಾ ತರಬೇತಿ ಶಿಬಿರದ ಉಪನ್ಯಾಸಕ್ಕೆಂದು ತೆರಳುತ್ತಿದ್ದ, ಭಾರತೀಯ ಸೇನಾ ಪಡೆಗಳ ಪ್ರಥ'ಮ ಮುಖ್ಯಸ್ಥ ಶ್ರೀ ಬಿಪಿನ್ ರಾವತ್ ಹಾಗೂ ಧರ್ಮಪತ್ನಿ ಶ್ರೀಮತಿ ಮಧುಲಿಕಾ ರಾವತ್ ಸೇರಿದಂತೆ ಹೆಲಿಕಾಪ್ಟರ್ ಸೇನಾ ಸಿಬ್ಬಂದಿ 12 ಸೈನಿಕರು ಹೆಲಿಕಾಪ್ಟರ್ ದುರಂತದಲ್ಲಿ ಜೀವಂತ ದಹನವಾಗುವ ಮೂಲಕ ಪ್ರಾಣತ್ಯಾಗ ಮಾಡಿ, ಹುತಾತ್ಮರಾದ ಸೇನೆಯ ಮುಖ್ಯಸ್ಥರು ಹಾಗೂ ಸೈನಿಕರಿಗೆ ಹೈದರಾಬಾದ್_ಕರ್ನಾಟಕ_ಯುವಶಕ್ತಿ ಗ್ರಾಮ ಘಟಕ ಹಿರೇಮನ್ನಾಪೂರ, ಸಮಸ್ತ ಗ್ರಾಮದ ಹಿರಿಯರು ಗ್ರಾಮ ಪಂಚಾಯತ ಸರ್ವ ಸದಸ್ಯರು ಸೇರಿದಂತೆ ಕುಷ್ಟಗಿ ತಾಲೂಕು ಮಾಜಿ ಸೈನಿಕರ ಸಂಘದ ಜೊತೆಗೂಡಿ, ಭಾವಪೂರ್ಣ ಗೌರವ ನಮನಗಳನ್ನು ಸಲ್ಲಿಸಿದರು.

ಶ್ರೀ ಗವಿ ಸಿದ್ದೇಶ್ವರ ಪ್ರೌಢ ಶಾಲೆಯಲ್ಲಿ ಸೇನಾ ಪಡೆಗಳ ಮುಖ್ಯಸ್ಥ ಬಿಪಿನ್ ರಾವತ್ ರವರ ಭಾವಚಿತ್ರಕ್ಕೆ ಮಾಜಿ ಸೈನಿಕ ಅಶೋಕ ಪಾಟೀಲ್, ಮಾಲಾರ್ಪಣೆ ಮಾಡಿ,ಗೌರವ ನಮನ ಸಲ್ಲಿಸಿದರು. ನಂತರ (ಕ್ಯಾಂಡಲ್ ಮಾರ್ಚ್) ಮೇಣದಬತ್ತಿ ಬೆಳಗುವ ನಡಿಗೆಗೆ, ಗ್ರಾಮ ಪಂಚಾಯತ ಅಧ್ಯಕ್ಷರು ಹನಮಂತಪ್ಪ ಅಳ್ಳಳ್ಳಿ, ಮತ್ತು ಸರ್ವಸದಸ್ಯರು ಮೇಣದಬತ್ತಿ




ಹೊತ್ತಿಸುವ ಮೂಲಕ ಚಾಲನೆ ನೀಡಿದರು.

ರಾಷ್ಟ್ರಾಭಿಮಾನ, ಭಾರತೀಯ ಸೇನಾಪಡೆಗಳಿಗೆ ಗೌರವ ಹಾಗೂ ಆತ್ಮಸ್ಥೈರ್ಯ ತುಂಬುವ ಘೋಷ ವಾಕ್ಯಗಳೊಂದಿಗೆ ಹಿರೇಮನ್ನಾಪೂರ ಬಸ್ ನಿಲ್ದಾಣ ವೃತ್ತದ ವರೆಗೆ ಮೇಣದಬತ್ತಿ ಬೆಳಗಿಸಿಕೊಂಡು ಸಾಗಲಾಯಿತು.

ಹೈದರಾಬಾದ್ ಕರ್ನಾಟಕ ಯುವಶಕ್ತಿ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷರು ಬಸವರಾಜ್ ಗಾಣಿಗೇರ ಮಾತನಾಡಿ, ಸೇನಾ ಪಡೆಗಳ ಮುಖ್ಯಸ್ಥರಾದ ಬಿಪಿನ್ ರಾವತ್ ರವರ ಧೈರ್ಯ–ಶೌರ್ಯ ಹಾಗೂ ತಮ್ಮ ಬದುಕನ್ನು ಕುಟುಂಬ ಸಮೇತರಾಗಿ ನಿರಂತರ ದೇಶದ ಸೇನಾಪಡೆಯ ಪ್ರಬಲಗೊಳಿಸಲು ಮೀಸಲಿಟ್ಟಿರುವ ದೇಶಪ್ರೇಮವನ್ನು ಕೊಂಡಾಡಿದರು. 2019ರಲ್ಲಿಯೇ ಸೇನೆಯ ಸೇವಾ ನಿವೃತ್ತಿ ಹೊಂದಬೇಕಾಗಿದ್ದ ರಾವತ್ ರು, ಭಾರತ ಸರ್ಕಾರ ನೀಡಿದ ಎಲ್ಲಾ ಜವಾಬ್ದಾರಿಗಳನ್ನು ಸಮಥ'ರ್ವಾಗಿ ನಿಭಾಯಿಸುತ್ತಾ ಸೇನಾಪಡೆಗಳ ಉನ್ನತ ಸ್ಥಾನಕ್ಕೆ ಏರಿದವರು' ಎಂದರು.

ಈ ಸಂದರ್ಭದಲ್ಲಿ ಶ್ರೀಮತಿ ಮಧುಲಿಕಾ ರಾವತ್ ಸೇರಿದಂತೆ ಇನ್ನುಳಿದ ಸೇನಾಪಡೆಯ ಹನ್ನೆರಡು ಪ್ರಮುಖ ಸೈನಿಕರ ಹೆಸರುಗಳನ್ನು ಸ್ಮರಿಸಿ, ಗೌರವ ನಮನ ಸಲ್ಲಿಸಲಾಯಿತು.

ನಂತರ ಶಿವಾನಂದ ಹಿರೇಮಠ ಹಾಗೂ ಮಾಜಿ ಸೈನಿಕ ಅಶೋಕ ಪಾಟೀಲ್ ಹುತಾತ್ಮ ಯೋಧರಿಗೆ ನುಡಿನಮನ ಸಲ್ಲಿಸಿ,ಮಡಿದ ಯೋಧರ ಕುಟುಂಬದವರಿಗೆ ಆತ್ಮಸ್ಥೈರ್ಯ ತುಂಬುವ ಕಾರ್ಯ ಭಾರತದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ ಎಂದರು.

ಎರಡು ನಿಮಿಷದ ಮೌನಾಚರಣೆ ಮೂಲಕ ಹುತಾತ್ಮ ವೀರಯೋಧರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಪ್ರಾರ್ಥಿಸಲಾಯಿತು.

ಹೈ–ಕ ಯುವಶಕ್ತಿ ಸಂಘಟನೆಯ ಹನಮೇಶ ಪಲ್ಲೇದ,ಕಿರಣ್ ಜ್ಯೋತಿ, ಬಸವರಾಜ ತಿಮ್ಮಾಪೂರ, ರಾಮಣ್ಣ ಭಜಂತ್ರಿ,ಮಂಜುನಾಥ ತಳವಗೇರಾ, ಹಿರೇಮನ್ನಾಪುರ ಗ್ರಾಮ ಘಟಕದ ಅಧ್ಯಕ್ಷರು ಮಂಜುನಾಥ ಕಜ್ಜಿ , ಸರ್ವ ಪದಾಧಿಕಾರಿಗಳು ಹಾಗೂ ಗ್ರಾಮದ ಗುರು ಹಿರಿಯರು ಇತರರು. ಉಪಸ್ಥಿತರಿದ್ದರು.

# ಗಂಗಾವತಿ ತಾಲೂಕಾ ಚುಟುಕು ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳ ಆಯ್ಕೆ



ಗಂಗಾವತಿ: ಇಂದು ನಗರದ ಚನ್ನಮಲ್ಲಿಕಾರ್ಜುನ ಮಠದ ಪುರಾಣ ಮಂಟಪದಲ್ಲಿ ಗಂಗಾವತಿ ತಾಲೂಕಾ ಚುಟುಕು ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರಾದ ಎನ್. ಶರಣಪ್ಪ ಮೆಟ್ರಿ ಹಾಗೂ ಹಾಲಿ ಅಧ್ಯಕ್ಷರಾದ ಅಶೋಕ ಗುಡಿಕೋಟಿ ಅವರ ನೇತೃತ್ವದಲ್ಲಿ ತಾಲೂಕ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ತಾಲೂಕು ಚುಟುಕು ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರನ್ನಾಗಿ ಎಸ್.ವಿ ಪಾಟೀಲ್ ಗುಂಡೂರು, ಕಾರ್ಯದರ್ಶಿಗಳಾಗಿ ಸುರೇಶ ಕಲಾಪ್ರಿಯ, ಶ್ರೀಮತಿ ರಾಧಾ ಉಮೇಶ, ಸಹಕಾರ್ಯದರ್ಶಿಗಳಾಗಿ ಮಂಜುನಾಥ ಹೊಸಕೇರ, ಬಸವರಾಜ ಗೋನಾಳ, ಕೋಶಾಧ್ಯಕ್ಷರಾಗಿ ಮಂಜಪ್ಪ ತಾವರಗಿ, ಮಹಿಳಾ ಪ್ರತಿನಿಧಿಯಾಗಿ ಶ್ರೀಮತಿ ಮಾಲಾ ಶ್ರೀಧರ ಅವರನ್ನು ನೇಮಕ ಮಾಡಲಾಗಿದೆ.

ಸಲಹಾ ಸಮಿತಿ ಸದಸ್ಯರಾಗಿ ಡಾ. ಕೊಟ್ಟೂರು ಮಹಾಸ್ವಾಮಿಗಳು, ಡಾ. ಶರಣಬಸಪ್ಪ ಕೋಲ್ಕಾರ್, ಲಿಂಗಾರೆಡ್ಡಿ ಆಲೂರು, ನಿಜಲಿಂಗಪ್ಪ ಮೆಣಸಗಿ, ಸಿ.ಹೆಚ್. ನಾರಿನಾಳ, ಎಸ್.ಬಿ ಗೊಂಡಬಾಳ, ಶ್ರೀಮತಿ ರುದ್ರಮ್ಮ ಹಾಸಿನಾಳ, ಡಾ॥ ಶಿವಕುಮಾರ ಮಾಲಿಪಾಟೀಲ್, ಜಿ. ರಾಮಕೃಷ್ಣ, ಪರಶುರಾಮ ಪ್ರಿಯ, ಶ್ರೀಮತಿ ಸಿ. ಮಹಾಲಕ್ಷ್ಮೀ, ಶರಣಪ್ಪ ತಳ್ಳಿ, ಕಾಶೀಮಲಿ ಮುದ್ದಾಬಳ್ಳಿ, ಖಾದರಸಾಬ ಹುಲ್ಲೂರು, ಪಂಪಣ್ಣ ನಾಯಕ, ವಿಜಯ ವೈದ್ಯ, ಅಲ್ಲಾ ಗಿರಿರಾಜ, ಅಬ್ದುಲ್ ವಹಾಬ್ ಮುಲ್ಲಾ, ವಿಜಯಕುಮಾರ ರಾಯ್ಕರ್, ಅಮರೇಶ ಹಿರೇಮಠ, ಜಂಬುನಾಥ ಹೂಗಾರ, ಉಮೇಶ ಕಲ್ಮನಿ ಇವರನ್ನು ಆಯ್ಕೆ ಮಾಡಲಾಗಿದೆ.

ಹಾಗೆಯೇ ಕಾರ್ಯಕಾರಿ ಮಂಡಳಿ ಸದಸ್ಯರನ್ನಾಗಿ ಅರಳಿ ನಾಗಭೂಷಣ, ಮಲ್ಲೇಶಪ್ಪ ಅಂಗಡಿ, ಮುರುಳೀಧರ ಜೋಷಿ, ರಮೇಶ ನಾಯಕ, ನರಸಿಂಹ ದರೋಜಿ, ದಶರಥ ಪಿ., ಉಮೇಶ ಜೇಕಿನ್, ರಮೇಶ ಬಾಳೇಕಾಯಿ, ಬಸವರಾಜ ಭೋವಿ, ಶ್ರೀಮತಿ ಶಕುಂತಲಮ್ಮ ಕಲ್ಲೂರು, ಶ್ರೀಮತಿ ನರ್ಮದಾ ಕುಲಕರ್ಣಿ, ಶಂಕ್ರಪ್ಪ ಚಂದ್ರಿಕಿ, ಹಂಪಮ್ಮ ಸಿದ್ಲಿಂಗಯ್ಯಸ್ವಾಮಿ ರೋಣದಮಠ ಇವರನ್ನು ಆಯ್ಕೆ ಮಾಡಲಾಗಿದೆ.

ಮಾಹಿತಿಗಾಗಿ (ಅಶೋಕ ಗುಡಿಕೋಟಿ) ತಾಲೂಕ ಅಧ್ಯಕ್ಷರು, ಗಂಗಾವತಿ ತಾಲೂಕ ಚುಟುಕು ಸಾಹಿತ್ಯ ಪರಿಷತ್ತು. ಮೋ:ನಂ: 9972723406

# ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್ ಸಂಘಟನೆಗಳ ಪುಂಡಾಟಿಕೆಗೆ ಖಂಡನೆ: ಜನಹಿತ ಕರವೇ– ರಮೇಶ ಕೋಟಿ




ಗಂಗಾವತಿ: ಕರ್ನಾಟಕ ರಾಜ್ಯದ ಕನ್ನಡಿಗರ ಭಾವನೆಗಳಿಗೆ ಧಕ್ಕೆ ಬರುವ ನಿಟ್ಟಿನಲ್ಲಿ ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್. ಸಂಘಟನೆಗಳು ಇತ್ತೀಚೆಗೆ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ವಿರೂಪಗೊಳಿಸಿ, ಸರ್ಕಾರಿ ಅಧಿಕಾರಿಗಳ ಹಾಗೂ ಸಚಿವರ ವಾಹನಗಳನ್ನು, ಪೊಲೀಸರ ವಾಹನಗಳನ್ನು ಧ್ವಂಸಗೊಳಿಸಿರುತ್ತಾರೆ. ಇಂತಹ ಕೃತ್ಯವೆಸಗುತ್ತಿರುವ ಸಂಘಟನೆಗಳಿಗೆ ಮಹಾರಾಷ್ಟ್ರ ಸರ್ಕಾರವು ಬೆಂಬಲಿಸುತ್ತಿದ್ದು, ಇದರಿಂದ ಕನ್ನಡಿಗರ ಭಾವನೆಗಳನ್ನು ಅವಮಾನಿಸದಂತಗಿದೆ. ಕೂಡಲೇ ರಾಜ್ಯ ಸರ್ಕಾರ ಈ ಸಂಘಟನೆಗಳ ಮೇಲೆ ಗೂಂಡಾಕಾಯ್ದೆ ಪ್ರಕರಣ ದಾಖಲಿಸಿ ಬಂಧಿಸಬೇಕು ಹಾಗೂ ಸಂಘಟನೆಯನ್ನು ನಮ್ಮ ರಾಜ್ಯದಿಂದ ಬಹಿಷ್ಕಾರ ಮಾಡಬೇಕೆಂದು ಜನಹಿತ ಕರವೇ ರಾಜ್ಯಾಧ್ಯಕ್ಷರಾದ ರಮೇಶ ಕೋಟಿ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಅವರು ದಿನಾಂಕ: 19.12.2021 ರಂದು ಕನಕದಾಸ ವೃತ್ತದಲ್ಲಿ ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್ ಸಂಘಟನೆಗಳ ಬಹಿಷ್ಕಾರಕ್ಕೆ ಒತ್ತಾಯಿಸಿ ಸರ್ಕಾರಕ್ಕೆ ಪ್ರತಿಭಟನೆಯ ಮೂಲಕ ಒತ್ತಾಯಿಸುವ ಸಂದರ್ಭದಲ್ಲಿ ಮಾತನಾಡುತ್ತಿದ್ದರು. ಈ ಕೃತ್ಯ ಮಾತ್ರವಲ್ಲದೇ, ನಮ್ಮ ಕರ್ನಾಟಕ ರಾಜ್ಯೋತ್ಸವ ದಿನದಂದು ಹಾಗೂ ಬೆಳಗಾವಿಯಲ್ಲಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಕಪ್ಪುಪಟ್ಟಿ ಧರಿಸಿ, ನಾಡಿಗೆ ಅವಮಾನಿಸುವುದು, ಕನ್ನಡದ ನಾಮಫಲಕಗಳನ್ನು ಧ್ವಂಸಗೊಳಿಸುವುದು, ಕನ್ನಡ ನಾಡಿನ ಧೀಮಂತ ನಾಯಕರು, ಕವಿಗಳಿಗೆ ಅವಮಾನವೆಸಗುವುದು, ಕನ್ನಡಿಗರ ಮೇಲೆ ಹಲ್ಲೆ ಮಾಡುವುದು, ಈ ರೀತಿಯ ಕೃತ್ಯಗಳು ಪುನರಾವರ್ತನೆಯಾಗುತ್ತಲಿವೆ. ಈ ಬಗ್ಗೆ ನಾವು ಸಾಕಷ್ಟು ಹೋರಾಟಗಳನ್ನು ಮಾಡಿದರೂ ಮಹಾರಾಷ್ಟ್ರ ಸರ್ಕಾರ ಹಾಗೂ ಶಿವಸೇನೆ ಮತ್ತು ಎಂ.ಇ.ಎಸ್ ಸಂಘಟನೆಗಳು ಬುದ್ಧಿ ಕಲಿಯುತ್ತಿಲ್ಲ. ಇದರಿಂದ ಕನ್ನಡಿಗರ ತಾಳ್ಮೆಯು ಮಿತಿಮೀರಿದ್ದು, ಇಂತಹ ಕೃತ್ಯಗಳು ಹೀಗೆಯೇ ಮುಂದುವರೆದಲ್ಲಿ ಕನ್ನಡ ನಾಡಿನ ಕನ್ನಡಪರ ಸಂಘಟನೆಗಳು ಹಾಗೂ ನಾಡಿನ ಸಮಸ್ತ ಕನ್ನಡಿಗರು ತಿರುಗಿಬಿದ್ದು, ಮುಂದಿನ ದಿನಗಳಲ್ಲಿ ಆಗುವ ಅನಾಹುತಗಳು ಊಹಿಸಲಾಗುವುದಿಲ್ಲ. ಕೂಡಲೇ ಮುಖ್ಯಮಂತ್ರಿಗಳು ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್ ಸಂಘಟನೆಗಳ ಮೇಲೆ ಗೂಂಡಾಕಾಯ್ದೆಯಡಿ ಪ್ರಕರಣ ದಾಖಲಿಸಿ, ರಾಜ್ಯದಿಂದ ಗಡಿಪಾರು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಜನಹಿತ ಕರವೇ ಸಂಘಟನೆಯ ಪದಾಧಿಕಾರಿಗಳಾದ ಆನಂದ ಲಂಕಿ, ಶ್ರೀನಿವಾಸ, ಭೋಗೇಶ, ಮಲ್ಲಿಕಾರ್ಜುನ, ಶಾಂತಕುಮಾರ, ಮಂಜುನಾಥ ವಂಕಿ, ಜೆ. ಭೀಮೇಶ, ಬಸವರಾಜ, ಪ್ರತಾಪ್, ಶಿವರಾಜ ಕಂಪ್ಲಿ, ಕಲಾಲ್ ಭಾಷಾ, ಗಾದಿಲಿಂಗಪ್ಪ, ಪ್ರಕಾಶ, ಶಿವಮೂರ್ತಿ, ರಮೇಶ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿಶ್ವದಲ್ಲಿ ಶ್ರೇಷ್ಠ ನಮ್ಮ ಭಾರತದ ಅಂದ
ಭಾರತದಲ್ಲಿ ಕಣ್ಣ್ಮನ
ಸೆಳೆಯುವ ನಮ್ಮ ರಾಜ್ಯ ಕರ್ನಾಟಕ ಚೆಂದ...
ಕರುನಾಡ ಇತಿಹಾಸ ತಿಳಿಯಲು ಇನ್ನೂ ಆನಂದ...
ಪಾಕ್ಷಿಕ ಪತ್ರಿಕೆಯಲ್ಲೇ ಕೊಂಡು ಓದಲೂ
ಚೆಂದಕ್ಕಿಂತ ಚಂದ ನಮ್ಮ ಈ ಕರುನಾಡ ಕಂದ.

**–ದೀಪು, ತುಮಕೂರು.**

## ಪದಾಧಿಕಾರಿಗಳ ಆಯ್ಕೆ

ಕರುನಾಡು ಯುವ ಹೊಸಬೆಳಕು ಸಮಿತಿಗೆ ಹೊಸದಾಗಿ ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ. ಶ್ರೀ ಮಂಜುನಾಥ್ ಹಿರೇಮಠ. ಮಹಿಳಾ ರಾಜ್ಯಾಧ್ಯಕ್ಷರನ್ನಾಗಿ ಕುಮಾರಿ ಅನಿತಾ ಪಿಳಗಿಮಠ್. ರಾಜ್ಯಸಹ ಸಂಘಟನಾ ಕಾರ್ಯದರ್ಶಿಯನ್ನಾಗಿ ಶ್ರೀ ಕುಮಾರಸ್ವಾಮಿ ಹಿರೇಮಠ ಹಾಗೂ ಧಾರವಾಡ




ಜಿಲ್ಲಾ ಅಧ್ಯಕ್ಷರನ್ನಾಗಿ ಶ್ರೀ ನಾಗರಾಜ್ ಹುಲಿಮನಿ. ಮಹಿಳಾ ಅಧ್ಯಕ್ಷರನ್ನಾಗಿ ಕುಮಾರಿ ಪೂರ್ಣಿಮಾ ಬಿ.ಮತ್ತು ಕಲಘಟಗಿ ತಾಲೂಕಾಧ್ಯಕ್ಷರನ್ನಾಗಿ ಶ್ರೀ ಶೇಕಯ್ಯ ದೇಸಾಯಿ ಇವರೆಲ್ಲ ಪದಾಧಿಕಾರಿಗಳನ್ನು ನೇಮಿಸಲಾಗಿದೆ ಈ ಪತ್ರಿಕಾ ಪ್ರಕಟಣೆಯನ್ನು ಸಮಿತಿಯ ಸಂಸ್ಥಾಪಕ. ರಾಜ್ಯಾಧ್ಯಕ್ಷರಾದ ಶ್ರೀ ಶಿವಾನಂದ ಬಿ. ವಿ. ಆದೇಶ ಹೊರಡಿಸಿದ್ದಾರೆ.

ಕರುನಾಡ ಕಂದ
ಸಂಪುಟ-1 । ಸಂಚಿಕೆ-5
ದಿನಾಂಕ: 01-01-2022 । ಪುಟಗಳು: 16

# ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್ ಸಂಘಟನೆಗಳ ರದ್ಧತಿಗೆ ಹಾಗೂ ಮಹಾರಾಷ್ಟ್ರ ಸರ್ಕಾರ ವಜಾ ಮಾಡಲು ರಾಷ್ಟ್ರಪತಿಗಳಿಗೆ ಆಗ್ರಹ



ಗಂಗಾವತಿ: ಕರ್ನಾಟಕ ರಾಜ್ಯದ ಏಳು ಕೋಟಿ ಕನ್ನಡಿಗರ ಭಾವನೆಗಳಿಗೆ ಧಕ್ಕೆ ಬರುವ ನಿಟ್ಟಿನಲ್ಲಿ ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್. ಸಂಘಟನೆಗಳು ದಿನಾಂಕ: 15.12.2021 ರಂದು ಕರ್ನಾಟಕದ ಗಡಿನಾಡು ಬೆಳಗಾವಿಯಲ್ಲಿ ಕನ್ನಡ ಧ್ವಜವನ್ನು ಸುಟ್ಟುಹಾಕುವ ಮೂಲಕ ನಾಡದ್ರೋಹದ ಕೃತ್ಯವೆಸಗಿದ್ದಾರೆ. ಇಂತಹ ಸಂಘಟನೆಗಳನ್ನು ಮಹಾರಾಷ್ಟ್ರ ಸರ್ಕಾರವು ಬೆಂಬಲಿಸುತ್ತಿದ್ದು, ಕನ್ನಡಿಗರ ಭಾವನೆಗಳಿಗೆ ಧಕ್ಕೆ ಬರುವ ಕೃತ್ಯಗಳಿಗೆ ಮಹಾರಾಷ್ಟ್ರ ಸರ್ಕಾರ ಈ ಸಂಘಟನೆಗಳಿಗೆ ಕುಮ್ಮಕ್ಕು ನೀಡುತ್ತಿದೆ ಎಂದು ಕರವೇ ಪ್ರವೀಣಕುಮಾರ ಶೆಟ್ಟಿ ಬಣದ ಅಂಗವಿಕಲ ಘಟಕದ ತಾಲೂಕ ಅಧ್ಯಕ್ಷರಾದ ಅಶೋಕ ಗುಡಿಕೋಟಿ ಪ್ರಕಟಣೆಯಲ್ಲಿ ತೀವ್ರವಾಗಿ ಖಂಡಿಸಿದ್ದಾರೆ.

ಅವರು ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್ ಸಂಘಟನೆಗಳ ರದ್ಧತಿಗೆ ಹಾಗೂ ಮಹಾರಾಷ್ಟ್ರ ಸರ್ಕಾರ ವಜಾ ಮಾಡಲು ಗಂಗಾವತಿ ತಹಶೀಲ್ದಾರರ ಮೂಲಕ ಗೌರವಾನ್ವಿತ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡುತ್ತಿದ್ದರು. ಈ ಕೃತ್ಯ ಮಾತ್ರವಲ್ಲದೇ, ಪ್ರತಿವರ್ಷದ ಕರ್ನಾಟಕ ರಾಜ್ಯೋತ್ಸವ ದಿನದಂದು ಹಾಗೂ ಬೆಳಗಾವಿಯಲ್ಲಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಕಪ್ಪುಪಟ್ಟಿ ಧರಿಸಿ, ನಾಡಿಗೆ ಅವಮಾನಿಸುವುದು, ಕನ್ನಡದ ನಾಮಫಲಕಗಳನ್ನು ಧ್ವಂಸಗೊಳಿಸುವುದು, ಕನ್ನಡ ನಾಡಿನ ಧೀಮಂತ ನಾಯಕರು, ಕವಿಗಳಿಗೆ ಅವಮಾನವೆಸಗುವುದು, ಕನ್ನಡಿಗರ ಮೇಲೆ ಹಲ್ಲೆ ಮಾಡುವುದು, ಈ ರೀತಿಯ ಕೃತ್ಯಗಳು ಆಗಿಂದಾಗ್ಗೆ ನಡೆಯುತ್ತಲೇ ಇವೆ. ಇದು ಕನ್ನಡಿಗರ ತಾಳ್ಮೆಯನ್ನು ಕೆಣಕುವಂತಾಗಿದೆ. ಈ ಬಗ್ಗೆ ನಾವು ಸಾಕಷ್ಟು ಹೋರಾಟಗಳನ್ನು ಮಾಡಿದರೂ ಮಹಾರಾಷ್ಟ್ರ ಸರ್ಕಾರ ಹಾಗೂ ಶಿವಸೇನೆ ಮತ್ತು ಎಂ.ಇ.ಎಸ್ ಸಂಘಟನೆಗಳು ಪಾಠ ಕಲಿಯುತ್ತಿಲ್ಲ. ಇದರಿಂದ ಕನ್ನಡಿಗರ ತಾಳ್ಮೆಯು ಮಿತಿಮೀರಿದ್ದು, ಇಂತಹ ಕೃತ್ಯಗಳು ಹೀಗೆಯೇ ಮುಂದುವರೆದಲ್ಲಿ ಕನ್ನಡ ನಾಡಿನ ಕನ್ನಡಪರ ಸಂಘಟನೆಗಳು ಹಾಗೂ ನಾಡಿನ ಸಮಸ್ತ ಕನ್ನಡಿಗರು ತಿರುಗಿಬಿದ್ದು, ಮುಂದಿನ ದಿನಗಳಲ್ಲಿ ಆಗುವ ಅನಾಹುತಗಳಿಗೆ ಯಾರು ಹೊಣೆಯಾಗುತ್ತಾರೆ? ಕೂಡಲೇ ಗೌರವಾನ್ವಿತರಾದ ರಾಷ್ಟ್ರಪತಿಗಳು ಮಹಾರಾಷ್ಟ್ರದ ಶಿವಸೇನೆ ಹಾಗೂ ಎಂ.ಇ.ಎಸ್ ಸಂಘಟನೆಗಳನ್ನು ರದ್ದು ಮಾಡಬೇಕು ಹಾಗೂ ಮಹಾರಾಷ್ಟ್ರ ಸರ್ಕಾರವನ್ನು ವಜಾ ಮಾಡಬೇಕೆಂದು ಆಗ್ರಹಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರವೇ ಪ್ರವೀಣಕುಮಾರ ಶೆಟ್ಟಿ ಬಣದ ಅಂಗವಿಕಲ ಘಟಕದ ಕೊಪ್ಪಳ ಜಿಲ್ಲಾಧ್ಯಕ್ಷರಾದ ಮಂಜುನಾಥ ಹೊಸಕೇರಿ ಹಾಗೂ ಪದಾಧಿಕಾರಿಗಳಾದ ಉಮೇಶ ಕಲ್ಮನಿ, ರಾಘವೇಂದ್ರ ನಾಯಕ, ವಿನಾಯಕ, ಮಲಿಯಪ್ಪ, ಬಸವರಾಜ, ರಾಘವೇಂದ್ರ ನಾಯಕ, ಕೆ. ನಾಗರಾಜ, ಜಾಫರ್, ಖಾದರಭಾಷಾ, ಅಬ್ರಾಹಿಂ, ರಾಕೇಶ, ಮಂಜುನಾಥ ಮಣ್ಣೂರು, ವೆಂಕಟೇಶ ರಾಂಪುರ, ರಾಘವೇಂದ್ರ ವೈ., ಯುವರಾಜ, ನಾಗರಾಜ, ಯಮನಮ್ಮ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಾಹಿತಿಗಾಗಿ

**- (ಅಶೋಕ ಗುಡಿಕೋಟಿ) ತಾಲೂಕ ಅಧ್ಯಕ್ಷರು, ಅಂಗವಿಕಲ ಘಟಕ ಕರವೇ (ಪ್ರವೀಣಕುಮಾರ ಶೆಟ್ಟಿ ಬಣ) ಮೋ:ನಂ: 9972723406**

# ಕ.ರ.ವೇ ವತಿಯಿಂದ ಪ್ರತಿಭಟನೆ




ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣ ಔರಾದ್ ಮತ್ತು ಕಮಲ ನಗರ್ ತಾಲೂಕಾ ಘಟಕದ ವತಿಯಿಂದ ಬೆಳಗಾವಿಯಲ್ಲಿ ಇತ್ತೀಚಿಗೆ ನಡೆದ ವೀರ ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಹಾಗೂ ನಾಡ ಧ್ವಜದ ಅವಮಾನ ಖಂಡಿಸಿ ನಗರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ಹೋರಾಟವನ್ನು ಹಮ್ಮಿಕೊಂಡು ನಗರದ ಮುಖ್ಯ ಬೀದಿಗಳಲ್ಲಿ ಕನ್ನಡದ ಜೈಕಾರ ಹಾಕುತ್ತಾ ಪ್ರತಿಭಟನೆಯೊಂದಿಗೆ ತಹಶಿಲ್ದಾರರ ಕಚೇರಿವರೆಗೆ ತಲುಪಿದರು.ಈ ಸಂದರ್ಭದಲ್ಲಿ ಗೌರವಾಧ್ಯಕ್ಷರಾದ ಬಸವರಾಜ್ ಕೆ ಸೆಟ್ ಕಾರ್ ತಾಲೂಕ ಅಧ್ಯಕ್ಷರಾದ ಅನಿಲ ದೇವಕತ್ತೆ ಪದಾಧಿಕಾರಿಗಳಾದ ಅನಿಲ್ ಹೆಡೆ ಚಂದು ಚಾರಿ ಇತರ ಪ್ರಮುಖರು ಭಾಗವಹಿಸಿ ತಾಲೂಕಿನ ದಂಡಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದರು

ವರದಿ-ಸುಧೀರ ಕುಮಾರ ಬೀ ಪಾಂಡರೇ

# ಪತ್ರಕರ್ತರ ಸಮ್ಮೇಳನ ಯಶಸ್ವಿಗೊಳಿಸಲು ನಾಗರಾಜ್ ಇಂಗಳಗಿ ಮನವಿ




ಗಂಗಾವತಿ: ಜನವರಿ 3 ಮತ್ತು 4 ರಂದು ಎರಡು ದಿನಗಳ ಕಾಲ ಗುಲ್ಬರ್ಗಾದಲ್ಲಿ ಜರುಗಲಿರುವ ಕರ್ನಾಟಕ ಕಾರ್ಯನಿರತರ ಪ್ರತ್ರಕರ್ತರ ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕು ಎಂದು ಪತ್ರಕರ್ತರ ಸಂಘದ ತಾಲೂಕು ಘಟಕದ ಅಧ್ಯಕ್ಷ ಇಂಗಳಗಿ ನಾಗರಾಜ ಮನವಿ ಮಾಡಿದರು. ಪತ್ರಿಕಾಭವನದಲ್ಲಿ ಮಂಗಳವಾರ ನಡೆದ ಸಮ್ಮೇಳನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎರಡು ದಿನಗಳ ಕಾಲ ಜರುಗುವ ಸಮ್ಮೇಳನವನ್ನು ಸಿಎಂ ಬಸವರಾಜ್ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ, ಸಮಾರೋಪ ಕಾರ್ಯಕ್ರಮದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ, ಅನೇಕ ಮಂತ್ರಿಗಳು ಭಾಗವಹಿಸಲಿದ್ದಾರೆ, ಗಮನಾರ್ಹ ಗೋಷ್ಟಿಗಳಿದ್ದು. ಚಿಂತನ ಮಂಥನ ನಡೆಯಲಿದೆ, ಅನೇಕ ಸಾಧಕರಿಗೆ ಈ ಸಂದರ್ಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಅತ್ಯಂತ ಅರ್ಥಪೂರ್ಣ ಅರ್ಥಪೂರ್ಣ ಸಮ್ಮೇಳನ ಗುಲ್ಬಾರ್ಗದಲ್ಲಿ ಜರುಗಲಿದ್ದು ತೆರಳಲು

ವಾಹನ ವ್ಯವಸ್ಥೆ ಮಾಡಲಾಗುವುದು, ಸಮ್ಮೇಳನದಲ್ಲಿ ಭಾಗವಹಿಸಲು ಆಸಕ್ತಿ ವುಳ್ಳ ಪತ್ರಕರ್ತರು ಸಂಘದ ಪ್ರಧಾನ ಕಾರ್ಯದರ್ಶಿ ದೇವರಾಜ್ ಅವರ ಬಳಿ ಡಿಸೆಂಬರ್ 25 ರ ಒಳಗೆ ತಮ್ಮ ಹೆಸರು ನೊಂದಾಯಿಸಲು ತಿಳಿಸಿದರು ನಂತರ ಕಟ್ಟಡದ ಅಭಿವೃದ್ಧಿ ಕುರಿತು ವಿಸ್ತೃತ ಚರ್ಚೆ ನಡೆಸಲಾಯಿತು, ಪತ್ರಿಕಾ ಭವನದಲ್ಲಿ ಒಳ ಭಾಗವನ್ನು ಪಿಒಪಿ ಮೂಲಕ ಸಿಂಗರಿಸುವುದು, ಸೇರಿದಂತೆ ಲೈಬ್ರೆರಿ ಕಟ್ಟಡಕ್ಕೆ ಅನುದಾನ ಬಿಡುಗಡೆ ಮತ್ತು ಒಂದನೇ ಅಂತಸ್ತಿನ ಮೇಲ್ಭಾಗಕ್ಕೆ ಚಾವಣಿ ಹೊದಿಸುವ ಮೂಲಕ ಬೇಸಿಗೆಯಲ್ಲಿ ವಿಶ್ರಾಂತಿಗಾಗಿ ಏರ್ಪಾಡು ಮಾಡುವ ಕುರಿತು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು. ಈ ಸಂದರ್ಭದಲ್ಲಿ

ಗೌರವಸಲಹೆಗಾರರಾದ ಪತ್ರಕರ್ತರಾದ ಪ್ರಸನ್ನದೇಸಾಯಿ, ವೃಷಭೇಂದ್ರಸ್ವಾಮಿ ನವಲಿ ಹಿರೇಮಠ, ಉಪಾಧ್ಯಕ್ಷರಾದ ಹರೀಶ ಕುಲಕರ್ಣಿ, ಖಜಾಂಚಿ ಹೊಸ್ಕೇರಾ ಮಂಜುನಾಥ ಮಾತನಾಡಿದರು ಸಭೆಯಲ್ಲಿ ಪತ್ರಕರ್ತರಾದ ಚಂದ್ರಶೇಖರ್ ಮುಕುಂದಿ, ಕಾರ್ಯದರ್ಶಿ ವಸಂತ ಕುಮಾರ್ ಜೆ, ಗೌರವ ಸಲಹೆಗಾರರಾದ ದೇವಿಕೇರಿ ಶ್ರೀನಿವಾಸ್, ಕಾರ್ಯಕಾರಿ ಮಂಡಳಿ ಸದಸ್ಯ ಸಾಕ್ಷಿ ರವಿ, ವೆಂಕಟೇಶ್ ಉಪ್ಪಾರ್ ದಶರಥ, ಶಿವಪ್ಪ ನಾಯಕ, ಜೋಗದ ಗಾದಿಲಿಂಗಪ್ಪ ನಾಯಕ, ವಾಗೀಸ್ ನವಲಿ ಹಿರೇಮಠ, ಮೃತ್ಯುಂಜಯ ಸ್ವಾಮಿ ನವಲಿ ಹಿರೇಮಠ ಹಲವು ಪತ್ರಕರ್ತರು ಭಾಗವಹಿಸಿದ್ದರು. ಪ್ರಧಾನಕಾರ್ಯದರ್ಶಿ ದೇವರಾಜ್ ನಿರೂಪಿಸಿ ವಂದಿಸಿದರು.

# ಅತಿಥಿ ಉಪನ್ಯಾಸಕರ ಮತ್ತು ಸರ್ಕಾರ ಹಗ್ಗ ಜಗ್ಗಾಟ ವಿದ್ಯಾರ್ಥಿಗಳ ಶಿಕ್ಷಣ ಹಾಳು



ಗಂಡ ಹೆಂಡ್ತಿ ಜಗಳ ನಡುವೆ ಕೂಸು ಬಡವಾಯ್ತು ಎಂಬ ಗಾದೆ ಮಾತಿನಂತೆ ಅತಿಥಿ ಉಪನ್ಯಾಸಕರ ಮತ್ತು ಸರ್ಕಾರ ಹಗ್ಗ ಜಗ್ಗಾಟ ನಡುವೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳ ಶಿಕ್ಷಣ ಹಾಳಾಗುತ್ತಿರುವುದಂತು ಸತ್ಯ .

ನಾ ಕೊಡೆ ನೀ ಬಿಡೆ ಎಂಬುವುದು ಕರ್ನಾಟಕದಲ್ಲಿ ಕಾಣುತ್ತಿರುವ ಪರಿಸ್ಥಿತಿ ಇದರ ನಡುವೆ ವಿದ್ಯಾರ್ಥಿಗಳು ಮಾತ್ರ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಸರಕಾರ ಇದರ ಬಗ್ಗೆ ಯಾಕೆ ಈ ಮೌನ ...?

ಕೊರೋನ ಮಹಾಮಾರಿಯಿಂದಾಗಿ ಶಾಲಾ ಕಾಲೇಜುಗಳು ಬಂದ್ ಆಗಿದ್ದವು, ಆದ್ದರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳ ಭೌತಿಕ ಶಿಕ್ಷಣದಿಂದ ವಂಚಿತರಾಗಿದ್ದರು ಇನ್ನೇನು ಕೊರೋನ ಮಹಾಮಾರಿ ಕಡಿಮೆಯಾಯಿತು ಎನ್ನುವಷ್ಟರಲ್ಲಿ ಕಾಲೇಜುಗಳಲ್ಲಿ ಭೌತಿಕ ತರಗತಿ ನಡೆಸಲು ಸರ್ಕಾರ ಗ್ರೀನ್ ಸಿಗ್ನಲ್ ನೀಡಿತ್ತು . ಆದರೆ ಇಷ್ಟು ದಿನ ಹೇಗೋ ಕಳೆದೋಯ್ತು ಇನ್ನುಳಿದ ದಿನಗಳನ್ನಾದರೂ ವಿದ್ಯಾರ್ಥಿಗಳಿಗೆ ಸರಿಯಾಗಿ ಉಪಯೋಗವಾಗುವಂತೆ ಸರಕಾರ ಮಾಡಿದ್ದರೆ ಶಿಕ್ಷಣ ಪಡೆಯುವಲ್ಲಿ ಕೊರತೆಯಾಗುತ್ತಿರಲಿಲ್ಲ.

ಸರಕಾರ ನೀಡಿದ ಆದೇಶದಂತೆ ಎಲ್ಲಾ ಕೋರೋನ ರೂಲ್ಸ್ ಪಾಲಿಸುತ್ತಾ ಕಾಲೇಜುಗಳಲ್ಲಿ ಭೌತಿಕ ತರಗತಿ ಪ್ರಾರಂಭವಾಗಿವೆ. ಆದರೆ

ಚಳಿಗಾಲದ ಅಧಿವೇಶನ ಪ್ರಾರಂಭವಾಗುತ್ತಿದ್ದಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕರ ಮತ್ತು ಸರ್ಕಾರ ನಡುವಿನ ಕಿತ್ತಾಟ ವಿದ್ಯಾರ್ಥಿಗಳ ಶಿಕ್ಷಣಕ್ಕೆ ದೊಡ್ಡ ಹೊಡೆತವನ್ನೇ ಕೊಟ್ಟಿದೆ . ಇದನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕಿದೆ.

ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ಹಸನಾಗಿ ರೂಪಿಸುವುದಕ್ಕೆ ಬಹುಮುಖ್ಯ ಪಾತ್ರವಹಿಸಬೇಕಿರುವುದು ಶಿಕ್ಷಣ ಕ್ಷೇತ್ರ. ಇದನ್ನು ಇನ್ನೊಂದು ಬಗೆಯಲ್ಲೂ ಹೇಳಬಹುದು. ಶಿಕ್ಷಣ ಬಹುಮುಖ್ಯ ಪಾತ್ರವಹಿಸಿದರಷ್ಟೇ ವಿದ್ಯಾರ್ಥಿಗಳಿಗೆ ಉತ್ತಮ ದಾರಿ ದೊರೆಯಲು ಸಾಧ್ಯ. ಏಕೆಂದರೆ ಎಲ್ಲಾ ಸಮಾಜಗಳಲ್ಲೂ ವ್ಯಕ್ತಿ ಮತ್ತು ಆ ಮೂಲಕ ಸಮಾಜದ ಅಭಿವೃದ್ಧಿಯನ್ನು ಸಾಧ್ಯ ಮಾಡುವ ಏಕೈಕ ಸಂಘಟಿತ ಪ್ರಕ್ರಿಯೆಯೊಂದಿದ್ದರೆ ಅದು ಶಿಕ್ಷಣ ಮಾತ್ರ.

ಇದೀಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅತಿಥಿ ಉಪನ್ಯಾಸಕರ ಮತ್ತು ಸರಕಾರ ನಡುವೆ ಆಗುತ್ತಿರುವ ಕಿತ್ತಾಟದಲ್ಲಿ ಹೆಚ್ಚಿನ ಹೊಡೆತ ಅನುಭವಿಸುತ್ತಿರುವುದು ವಿದ್ಯಾರ್ಥಿಗಳು. ಯಾವಾಗ ಈ ಮೊಂಡುತನದ ಸರ್ಕಾರ ತನ್ನ ಹಟಮಾರಿ ಧೋರಣೆಯನ್ನು ಬಿಟ್ಟು ಸರ್ಕಾರಿ ಪ್ರಥಮ ದರ್ಜೆ ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಿ ಶಿಕ್ಷಣದಿಂದ ವಂಚಿತರಾದ ವಿದ್ಯಾರ್ಥಿಗಳಿಗೆ ಮತ್ತೆ ಶಿಕ್ಷಣ ದೂರೆಯುವಂತೆ ಮಾಡುತ್ತದೆಯೋ ..? ಅಥವಾ ವಿದ್ಯಾರ್ಥಿಗಳ ಭವಿಷ್ಯಕ್ಕೆ ಈ ಸರ್ಕಾರ ಕಲ್ಲು ಹಾಕುತ್ತದೆಯೋ ತಿಳಿಯುತ್ತಿಲ್ಲ.

ಅತಿಥಿ ಉಪನ್ಯಾಸಕರ ಬದುಕು ಒಂದೆಡೆ ಅತಂತ್ರ ಸ್ಥಿತಿಯಲ್ಲಿದ್ದರೆ ವಿದ್ಯಾರ್ಥಿಗಳ ಬದುಕು ಇನ್ನೊಂದೆಡೆ ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದಾರೆ.ಸರ್ಕಾರ

ಇನ್ನಾದರೂ ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಿದೆ.

- ಪ್ರಶಾಂತ್ ಸತ್ತಿ ,ಅಥಣಿ

ಕರುನಾಡ ಕಂದ
ಸಂಪುಟ-1 । ಸಂಚಿಕೆ-5
ದಿನಾಂಕ: 01-01-2022 । ಪುಟಗಳು: 16

# ಸೇನಾ ದಂಡನಾಯಕನ ಸ್ಥಾನಕ್ಕೆ ಜನರಲ್ ಮನೋಜ್ ಮುಕುಂದ್ ನರವಣೆ ನೇಮಕ

ಭಾರತೀಯ ಮೂರು ಸೇನೆಗಳ ನೂತನ ಮುಖ್ಯಸ್ಥ, ಸೇನಾ ದಂಡನಾಯಕನ ಸ್ಥಾನಕ್ಕೆ ಜನರಲ್ ಮನೋಜ್ ಮುಕುಂದ್ ನರವಣೆ ನೇಮಕವಾಗಿರುತ್ತಾರೆ..

ಜನರಲ್ ಮನೋಜ್ ಮುಕುಂದ್ ನರವಾಣೆ

ಜೀವನಚರಿತ್ರೆ: ಸಿಡಿಎಸ್ ಜನರಲ್ ಬಿಪಿನ್ ರಾವತ್ ರ ದುರಂತ ಹೆಲಿಕಾಪ್ಟರ್ ಅಪಘಾತದಲ್ಲಿ ಹಠಾತ್ ನಿಧನವು ಭಾರತದ ಅತ್ಯುನ್ನತ ಮಿಲಿಟರಿ ಸ್ಥಾನದಲ್ಲಿ ಶೂನ್ಯವನ್ನು ಸೃಷ್ಟಿಸಿದಂತೆ ಇದ್ದ ಸ್ಥಾನಕ್ಕೆ , ಜನರಲ್ ಮನೋಜ್ ಮುಕುಂದ್ ಅವರನ್ನು ರಕ್ಷಣಾ ಸಿಬ್ಬಂದಿ ಮುಖ್ಯಸ್ಥ (ಸಿಡಿಎಸ್) ಸೇನಾ ದಂಡನಾಯಕ ಹುದ್ದೆಗೆ ನೇಮಕವಾಗಿರುತ್ತಾರೆ . ಅವರು ಸೇನಾ ಸಿಬ್ಬಂದಿ ಮುಖ್ಯಸ್ಥರಾಗಿ (ಅಔಂಖ) ಸೇವೆ ಸಲ್ಲಿಸುತ್ತಿದ್ದರು.

ಅಆಖ ಹುದ್ದೆಗೆ ಏರಲು ಜನರಲ್ ನರವಾಣೆ ಅವರಿಗೆ ಅವರ ಹಿರಿತನ. 31 ಡಿಸೆಂಬರ್ 2019 ರಂದು ಜನರಲ್ ಬಿಪಿನ್ ರಾವತ್ ಅವರ ಉತ್ತರಾಧಿಕಾರಿಯಾದ ಭಾರತದ ಮೂವರು ಮುಖ್ಯಸ್ಥರಲ್ಲಿ ಜನರಲ್ ಎಂಎಂ ನರವಾಣೆ ಅವರು ಹಿರಿಯ ಅಧಿಕಾರಿಯಾಗಿದ್ದಾರೆ.

ಇತರ ಇಬ್ಬರು ಮುಖ್ಯಸ್ಥರು-- ಐಎಎಫ್ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿಆರ್ ಚೌಧರಿ ಮತ್ತು ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಆರ್ ಹರಿ ಕುಮಾರ್-- ಅವರ ಸ್ಥಾನಗಳಲ್ಲಿ ತುಲನಾತ್ಮಕವಾಗಿ ಹೊಸಬರು. ಅವರು ತಮ್ಮ ಪಡೆಗಳ ಪ್ರಮುಖ ಸ್ಥಾನಗಳನ್ನು ಕ್ರಮವಾಗಿ 30 ಸೆಪ್ಟೆಂಬರ್ 2021 ಮತ್ತು 30 ನವೆಂಬರ್ 2021 ರಂದು ವಹಿಸಿಕೊಂಡರು.

ರಕ್ಷಣಾ ಸಿಬ್ಬಂದಿ ಮುಖ್ಯಸ್ಥ (ಅಆಖ)ಸೇನಾ ಸಿಬ್ಬಂದಿಯ (ಅಔಂಖ) 27 ನೇ ಮುಖ್ಯಸ್ಥರಾದ ಜನರಲ್ ಮನೋಜ್ ಮುಕುಂದ್ ನರವಾಣೆ ಅವರ ಜೀವನವನ್ನು ನಾವು ನೋಡೋಣ.

ಜನರಲ್ ಎಂಎಂ ನರವಣೆ: ಜನನ, ಆರಂಭಿಕ ಜೀವನ ಮತ್ತು ಶಿಕ್ಷಣ

ಜನರಲ್ ಮನೋಜ್ ಮುಕುಂದ್ ನರವಾಣೆ ಳಿಗಿಖಒ ಂಗಿಖಒ ಖಒ ಗಿಖಒ ಂಆಅ ಅವರು ಪ್ರಸ್ತುತ ಸೇನಾ ಸಿಬ್ಬಂದಿಯ 27 ನೇ ಮುಖ್ಯಸ್ಥರಾಗಿ (ಅಔಂಖ) ಸೇವೆ ಸಲ್ಲಿಸುತ್ತಿದ್ದಾರೆ. ಅವರು 31 ಡಿಸೆಂಬರ್ 2019 ರಂದು ಜನರಲ್ ಬಿಪಿನ್ ರಾವತ್ ಅವರ ಉತ್ತರಾಧಿಕಾರಿಯಾದರು.

ಜನರಲ್ ಒಒ ನರವಾಣೆ ಅವರು 22 ಏಪ್ರಿಲ್ 1960 ರಂದು ಭಾರತದ ಬಾಂಬೆ ರಾಜ್ಯದ ಪುಣೆಯಲ್ಲಿ



ಜನಿಸಿದರು. ಅವರ ತಂದೆ ಮುಕುಂದ್ ನರವಾಣೆ ಅವರು ಭಾರತೀಯ ವಾಯುಪಡೆಯ ಮಾಜಿ ಅಧಿಕಾರಿಯಾಗಿದ್ದು, ಅವರು ವಿಂಗ್ ಕಮಾಂಡರ್ ಶ್ರೇಣಿಯಲ್ಲಿ ನಿವೃತ್ತರಾಗಿದ್ದಾರೆ ಮತ್ತು ಅವರ ತಾಯಿ ಸುಧಾ ಅವರು ಆಲ್ ಇಂಡಿಯಾ ರೇಡಿಯೊದಲ್ಲಿ ಅನೌನ್ಸರ್ ಆಗಿದ್ದರು.

ಜನರಲ್ ನರವಾಣೆ ಅವರು ಪುಣೆಯ ಜ್ಞಾನ ಪ್ರಬೋಧಿನಿ ಪ್ರಾಶಾಲಾದಲ್ಲಿ ತಮ್ಮ ಶಾಲಾ ಶಿಕ್ಷಣವನ್ನು ಪಡೆದರು. ಅವರು ಪುಣೆಯ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ, ಡೆಹ್ರಾಡೂನ್ನ ಇಂಡಿಯನ್ ಮಿಲಿಟರಿ ಅಕಾಡೆಮಿ, ವೆಲ್ಲಿಂಗ್ಟನ್ನ ರಕ್ಷಣಾ ಸೇವೆಗಳ ಸಿಬ್ಬಂದಿ ಕಾಲೇಜು ಮತ್ತು ಮೊವ್ನ ಆರ್ಮಿ ವಾರ್ ಕಾಲೇಜ್ನಲ್ಲಿ ವ್ಯಾಸಂಗ ಮಾಡಿದರು.

ಜನರಲ್ ಎಂ.ಎಂ.ನರವಾಣೆ ಅವರು ಚೆನ್ನೈನ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ರಕ್ಷಣಾ ಅಧ್ಯಯನದಲ್ಲಿ ಎಂ.ಎ. ಪದವಿ ಮತ್ತು ಎಂ.ಫಿಲ್. ಇಂದೋರ್ನ ದೇವಿ ಅಹಲ್ಯಾ ವಿಶ್ವವಿದ್ಯಾಲಯದಿಂದ ರಕ್ಷಣಾ ಮತ್ತು ನಿರ್ವಹಣಾ ಅಧ್ಯಯನದಲ್ಲಿ ಪದವಿ. ಅವರು ಪ್ರಸ್ತುತ ಪಟಿಯಾಲದ ಪಂಜಾಬಿ ವಿಶ್ವವಿದ್ಯಾನಿಲಯದಿಂದ ರಕ್ಷಣಾ ಮತ್ತು ಕಾರ್ಯತಂತ್ರದ ಅಧ್ಯಯನದಲ್ಲಿ ಡಾಕ್ಟರೇಟ್ ಪಡೆಯುತ್ತಿದ್ದಾರೆ.

ಜನರಲ್ ಎಂಎಂ ನರವಣೆ: ಮಿಲಿಟರಿ ವೃತ್ತಿ

ನರವಾಣೆ ಅವರನ್ನು ಜೂನ್ 1980 ರಲ್ಲಿ 7 ನೇ ಬೆಟಾಲಿಯನ್ ದಿ ಸಿಖ್ ಲೈಟ್ ಇನ್ಫಾಂಟ್ರಿಗೆ ನಿಯೋಜಿಸಲಾಯಿತು. 40 ವರ್ಷಗಳ ಕಾಲ ತನ್ನ ವಿಶಿಷ್ಟ ಮಿಲಿಟರಿ ವೃತ್ತಿಜೀವನದಲ್ಲಿ, ಅವರು ಇನ್ಸ್ಪೆಕ್ಟರ್ ಜನರಲ್ (ಉತ್ತರ) ರಿಂದ ಸೇನಾ ಸಿಬ್ಬಂದಿ ಮುಖ್ಯಸ್ಥ (ಅಔಂಖ) ವರೆಗೆ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು ಮತ್ತು ಈಗ ಮುಂಚೂಣಿಯಲ್ಲಿದ್ದಾರೆ. ಅಆಖ ಹುದ್ದೆಗೆ

ಎಂಎಂ ನರವಾಣೆ ಅವರು ಜಮ್ಮು ಮತ್ತು ಕಾಶ್ಮೀರದಲ್ಲಿ ರಾಷ್ಟ್ರೀಯ ರೈಫಲ್ಸ್ನ 2 ನೇ ಬೆಟಾಲಿಯನ್ (ಸಿಖ್ಲಿ), 106 ಪದಾತಿ ದಳ ಮತ್ತು ಅಸ್ಸಾಂ ರೈಫಲ್ಸ್ನ ನಾಗಾಲ್ಯಾಂಡ್ನ ಕೊಹಿಮಾದಲ್ಲಿ ಇನ್ಸ್ಪೆಕ್ಟರ್ ಜನರಲ್ (ಉತ್ತರ) ಆಗಿ ಕಮಾಂಡರ್ ಆಗಿದ್ದರು. ಅವರು ಜಮ್ಮು ಮತ್ತು ಕಾಶ್ಮೀರ ಮತ್ತು ಈಶಾನ್ಯ ಭಾರತದಲ್ಲಿ ಬಂಡಾಯ ನಿಗ್ರಹ ಕಾರ್ಯಾಚರಣೆಗಳಲ್ಲಿ ಮತ್ತು ಆಪರೇಷನ್ ಪವನ್ ಸಮಯದಲ್ಲಿ ಶ್ರೀಲಂಕಾದಲ್ಲಿ ಭಾರತೀಯ ಶಾಂತಿಪಾಲನಾ ಪಡೆಗಳಲ್ಲಿ ಸೇವೆ ಸಲ್ಲಿಸಿದರು.

ಅವರ ಸಿಬ್ಬಂದಿ ನಿಯೋಜನೆಗಳಲ್ಲಿ ಪದಾತಿದಳದ ಬ್ರಿಗೇಡ್ನ ಬ್ರಿಗೇಡ್ ಮೇಜರ್, ಹೆಡ್ಕ್ವಾರ್ಟರ್ಸ್ ಸ್ಥಾಪನೆ ಸಂಖ್ಯೆ 22 ರ ಂಂ&ಕಿಒಉ, ಯಾಂಗೋನ್ನಲ್ಲಿ ಮ್ಯಾನ್ಮಾರ್ಗೆ ಮಿಲಿಟರಿ ಅಟ್ಯಾಚ್, ಮೋವ್ನ ಆರ್ಮಿ ವಾರ್ ಕಾಲೇಜಿನಲ್ಲಿ ಸೂಚನಾ ನೇಮಕಾತಿ ಮತ್ತು ಇಂಟಿಗ್ರೇಟೆಡ್ ಡಿಫೆನ್ಸ್ ಸ್ಟಾಫ್ ಹೆಡ್ಕ್ವಾರ್ಟರ್ಸ್ನಲ್ಲಿ ಎರಡು ಅಧಿಕಾರಾವಧಿಗಳು ಸೇ-ರಿವೆ. ರಕ್ಷಣಾ, ನವದೆಹಲಿ.

ಲೆಫ್ಟಿನೆಂಟ್ ಜನರಲ್ ಹುದ್ದೆಗೆ ಬಡ್ತಿ ಪಡೆದ ನಂತರ, ಅವರು ಅಂಬಾಲಾ ಮೂಲದ ಖರ್ಗಾ ಸ್ಟ್ರೈಕ್ ಕಾರ್ಪ್ಸ್ಗೆ ಕಮಾಂಡಿಂಗ್ ಮತ್ತು ಜನರಲ್ ಆಫೀಸರ್ ಕಮಾಂಡಿಂಗ್ (ಜಿಒಸಿ) ದೆಹಲಿ ಪ್ರದೇಶವಾಗಿ ಸೇವೆ ಸಲ್ಲಿಸಿದರು. ಉಔಅ ಆಗಿ ಅವರ ಸಾಮರ್ಥ್ಯದಲ್ಲಿ, ಅವರು 2017 ರ ಗಣರಾಜ್ಯೋತ್ಸವದ ಪರೇಡ್ಗೆ ಆದೇಶಿಸಿದರು.

ಆರ್ಮಿ ಕಮಾಂಡರ್ ದರ್ಜೆಗೆ ಬಡ್ತಿಯ ಮೇಲೆ, ಅವರು ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆರ್ಮಿ ಟ್ರೈನಿಂಗ್ ಕಮಾಂಡ್ ಮತ್ತು ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಈಸ್ಟರ್ನ್ ಕಮಾಂಡ್ ಆಗಿ ಸೇವೆ ಸಲ್ಲಿಸಿದರು.

ಅವರನ್ನು 1 ಸೆಪ್ಟೆಂಬರ್ 2019 ರಂದು ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ (ಗಿಅಔಂಖ) ನೇಮಿಸಲಾಯಿತು ಮತ್ತು 31 ಡಿಸೆಂಬರ್ 2019 ರಂದು ಜನರಲ್ ಬಿಪಿನ್ ರಾವತ್ ಅವರನ್ನು ಅಆಖ ಆಗಿ ಮಾಡಿದಾಗ ಅಔಂಖ ಶ್ರೇಣಿಗೆ ಏರಿಸಲಾಯಿತು.

ನೇಮಕಾತಿ ದಿನಾಂಕ

ಲೆಫ್ಟಿನೆಂಟ್ 7 ಜೂನ್ 1982
ಕ್ಯಾಪ್ಟನ್ 7 ಜೂನ್ 1985
ಮೇಜರ್ 7 ಜೂನ್ 1991
ಲೆಫ್ಟಿನೆಂಟ್ ಕರ್ನಲ್31 ಡಿಸೆಂಬರ್ 2002
ಕರ್ನಲ್1 ಫೆಬ್ರವರಿ 2005
ಬ್ರಿಗೇಡಿಯರ್19 ಜುಲೈ 2010
ಮೇಜರ್ ಜನರಲ್ 1 ಜನವರಿ 2013
ಲೆಫ್ಟಿನೆಂಟ್ ಜನರಲ್ 10 ನವೆಂಬರ್ 2015
ಸಾಮಾನ್ಯ (ಅಔಂಖ)31 ಡಿಸೆಂಬರ್ 2019

ಜನರಲ್ ಎಂಎಂ ನರವಣೆ: ಗೌರವಗಳು ಮತ್ತು ಪದಕಗಳು

ನಾಲ್ಕು ದಶಕಗಳ ಕಾಲದ ವಿಶಿಷ್ಟ ಮಿಲಿಟರಿ ವೃತ್ತಿಜೀವನದಲ್ಲಿ, ಅಔಂಖ ಜನರಲ್ ಒಒ ನರವಾಣೆ ಅವರಿಗೆ ವಿವಿಧ ಪದಕಗಳು ಮತ್ತು ಗೌರವಗಳನ್ನು ನೀಡಲಾಗಿದೆ. ಇವುಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

1- ಪರಮ ವಿಶಿಷ್ಟ ಸೇವಾ ಪದಕ
2- ಅತಿ ವಿಶಿಷ್ಟ ಸೇವಾ ಪದಕ
3- ಸೇನಾ ಪದಕ
4- ವಿಶಿಷ್ಟ ಸೇವಾ ಪದಕ
5- ಸಾಮಾನ್ಯ ಸೇವಾ ಪದಕ
6- ವಿಶೇಷ ಸೇವಾ ಪದಕ
7- ಆಪರೇಷನ್ ಪರಾಕ್ರಮ್ ಪದಕ
8- ಸೈನ್ಯ ಸೇವಾ ಪದಕ
9- ವಿದೇಶ್ ಸೇವಾ ಪದಕ
10- ಸ್ವಾತಂತ್ರ್ಯ ಪದಕದ 50 ನೇ ವಾರ್ಷಿಕೋತ್ಸವ
11- 30 ವರ್ಷಗಳ ಸುದೀರ್ಘ ಸೇವಾ ಪದಕ
12- 20 ವರ್ಷಗಳ ಸುದೀರ್ಘ ಸೇವಾ ಪದಕ.
13- 9 ವರ್ಷಗಳ ಸುದೀರ್ಘ ಸೇವಾ ಪದಕ

ಜನರಲ್ ಎಂಎಂ ನರವಣೆ: ವೈಯಕ್ತಿಕ ಜೀವನ

ಚೀಫ್ ಆಫ್ ಆರ್ಮಿ ಸ್ಟಾಫ್ (ಅಔಂಖ) ವೀಣಾ ನರವಾಣೆ ಅವರನ್ನು ವಿವಾಹವಾಗಿದ್ದಾರೆ ಮತ್ತು ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ವೀಣಾ ನರವಾಣೆ ಅವರು 25 ವರ್ಷಗಳ ಅನುಭವ ಹೊಂದಿರುವ ಶಿಕ್ಷಕಿ ಮತ್ತು ಸೇನಾ ಪತ್ನಿಯರ ಕಲ್ಯಾಣ ಸಂಘದ ಮುಖ್ಯಸ್ಥರಾಗಿದ್ದಾರೆ.

- : ಶಿವರಾಜ ಸಾಹುಕಾರ್ ವಡಗೇರಾ

# ಉಪಾಸನೆಗೆ ಸಂಬಂಧಿಸಿದ ಕೃತಿಗಳು ಅಧ್ಯಾತ್ಮಶಾಸ್ತ್ರದ ದೃಷ್ಟಿಯಿಂದ ಯೋಗ್ಯ

ದತ್ತನ ಉಪಾಸನೆಯ ಹಿಂದಿನ ಶಾಸ್ತ್ರ !

ದೇವತೆಗಳ ಉಪಾಸನೆಯ ಹಿಂದಿನ ಶಾಸ್ತ್ರವು ನಮಗೆ ತಿಳಿದರೆ ಉಪಾಸನೆಯನ್ನು ಹೆಚ್ಚು ಶ್ರದ್ಧೆಯಿಂದ ಮಾಡಲು ಸಹಾಯವಾಗುತ್ತದೆ. ಶ್ರದ್ಧಾಯುಕ್ತವಾಗಿ ಮಾಡಿದ ಉಪಾಸನೆಯಿಂದ ಒಳ್ಳೆಯ ಫಲವು ದೊರೆಯುತ್ತದೆ. ಹಾಗೆಯೇ ಉಪಾಸನೆಗೆ ಸಂಬಂಧಿಸಿದ ಕೃತಿಗಳು ಅಧ್ಯಾತ್ಮಶಾಸ್ತ್ರದ ದೃಷ್ಟಿಯಿಂದ ಯೋಗ್ಯವಾಗಿರುವುದು ಅವಶ್ಯಕವಾಗಿರುತ್ತದೆ. ಏಕೆಂದರೆ ಇಂತಹ ಕೃತಿಯಿಂದಲೇ ಹೆಚ್ಚು ಫಲವು ದೊರೆಯುತ್ತದೆ. ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ದತ್ತನ ಉಪಾಸನೆಯ ಹಿಂದಿನ ಶಾಸ್ತ್ರ ಹಾಗೂ ಉಪಾಸನೆಗೆ ಸಂಬಂಧಿಸಿದ ಕೃತಿಗಳನ್ನು ಅಧ್ಯಾತ್ಮಶಾಸ್ತ್ರದ ದೃಷ್ಟಿಯಿಂದ ಯೋಗ್ಯ ರೀತಿಯಲ್ಲಿ ಹೇಗೆ ಮಾಡಬೇಕು ಎಂಬುದನ್ನು ಮುಂದೆ ನೀಡಲಾಗಿದೆ.

*ಪೂಜೆಯ ಆರಂಭಿಕ ಕೃತಿಗಳ ಶಾಸ್ತ್ರ !*

ದತ್ತನ ಪೂಜೆಯನ್ನು ಪ್ರಾರಂಭಿಸುವ ಮೊದಲು ಹಣೆಯ ಮೇಲೆ ಕಿರುಬೆರಳಿನ ಹತ್ತಿರದ ಬೆರಳಿನಿಂದ (ಅನಾಮಿಕದಿಂದ) ವಿಷ್ಣುವಿನಂತೆ ಎರಡು ನೇರ ರೇಖೆಗಳಲ್ಲಿ ಗಂಧವನ್ನು ಹಚ್ಚಿಕೊಳ್ಳಬೇಕು. ಈ ರೀತಿ ಗಂಧವನ್ನು ಹಚ್ಚಿಕೊಳ್ಳುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ದತ್ತತತ್ತ್ವದ ಲಾಭವಾಗುತ್ತದೆ. ಹಾಗೆಯೇ ಗಂಧದಲ್ಲಿನ ಸಾತ್ತ್ವಿಕತೆಯಿಂದ ಭಾವಜಾಗೃತಿಯಾಗಿ ಮನಸ್ಸು ಬೇಗನೆ ಏಕಾಗ್ರವಾಗುತ್ತದೆ. ಇದರಿಂದಾಗಿ ಪೂಜೆಯಿಂದ ಪ್ರಾಪ್ತವಾಗುವ ಚೈತನ್ಯವನ್ನು ಅಧಿಕ ಪ್ರಮಾಣದಲ್ಲಿ



ಗ್ರಹಣ ಮಾಡಲು ಸಾಧ್ಯವಾಗುತ್ತದೆ.

ದತ್ತನ ಪೂಜೆ ಮಾಡುವಾಗ ದತ್ತನಿಗೆ ಗಂಧವನ್ನು ಅನಾಮಿಕಾದಿಂದ (ಕಿರುಬೆರಳಿನ ಪಕ್ಕದ ಬೆರಳು) ಹಚ್ಚಬೇಕು. ಹಾಗೆಯೇ ಬಲಗೈಯ ಹೆಬ್ಬೆರಳು ಮತ್ತು ಅನಾಮಿಕಾವನ್ನು ಜೋಡಿಸಿದ ಚಿಟಿಕೆಯಿಂದ ದತ್ತನ ಚರಣಗಳಲ್ಲಿ ಮೊದಲು ಅರಿಶಿಣ ಆಮೇಲೆ ಕುಂಕುಮವನ್ನು ಅರ್ಪಿಸಬೇಕು.

ನೈರ್ಮಾಲ್ಯವನ್ನು ತೆಗೆಯುವಾಗಲೂ ಹೆಬ್ಬೆರಳು ಮತ್ತು ಅನಾಮಿಕ ಬೆರಳುಗಳನ್ನೇ ಉಪಯೋಗಿಸಬೇಕು. ಹೆಬ್ಬೆರಳು ಮತ್ತು ಅನಾಮಿಕಾ ಬೆರಳುಗಳನ್ನು ಜೋಡಿಸುವುದರಿಂದಾಗುವ ಮುದ್ರೆಯಿಂದ ಶರೀರದಲ್ಲಿನ ಅನಾಹತ ಚಕ್ರವು ಜಾಗೃತವಾಗಿ ಭಕ್ತಿಭಾವವು ನಿರ್ಮಾಣವಾಗಲು ಸಹಾಯವಾಗುತ್ತದೆ.

*ದತ್ತನಿಗೆ ಎಷ್ಟು ಊದುಬತ್ತಿಯಿಂದ ಮತ್ತು ಹೇಗೆ ಬೆಳಗಬೇಕು ?*

ವಿಶಿಷ್ಟ ದೇವತೆಗಳ ತತ್ತ್ವವು ವಿಶಿಷ್ಟ ಗಂಧದ ಕಡೆ ಬೇಗನೇ ಆಕರ್ಷಿತವಾಗುತ್ತದೆ. ಈ ತತ್ವಕ್ಕನುಸಾರ ದತ್ತನ ಪೂಜೆಯಲ್ಲಿ ಚಂದನ, ಕೇದಗೆ, ಮಲ್ಲಿಗೆ ಮತ್ತು ಜಾಜಿ ಈ ಪರಿಮಳದ ಊದುಬತ್ತಿಗಳನ್ನು ಉಪಯೋಗಿಸಿದರೆ ಹೆಚ್ಚಿನ ಪ್ರಮಾಣದಲ್ಲಿ ದತ್ತತತ್ತ್ವದ ಲಾಭವಾಗುತ್ತದೆ. ಆದುದರಿಂದ ದತ್ತನ ಪೂಜೆಯ ಸಂದರ್ಭದಲ್ಲಿ ಈ ಗಂಧದ ಊದುಬತ್ತಿಯನ್ನು ಉಪಯೋಗಿಸಿದರೆ ಹೆಚ್ಚಿನ ಪ್ರಮಾಣದಲ್ಲಿ ದತ್ತತತ್ತ್ವದ ಲಾಭವಾಗುತ್ತದೆ. ದತ್ತನೊಂದಿಗೆ ಇತರ ಎಲ್ಲ ದೇವತೆಗಳಿಗೆ ಎಷ್ಟು ಊದುಬತ್ತಿಯನ್ನು ಬೆಳಗಬೇಕು ಎನ್ನುವ ಶಾಸ್ತ್ರವು ಮುಂದಿನಂತಿದೆ. ಒಂದು ಎಂಬುದು ಅದ್ವೈತದ ಪ್ರತೀಕವಾದರೆ ಎರಡು ದ್ವೈತದ ಪ್ರತೀಕವಾಗಿದೆ. ಪ್ರಾಥ-'ಮಿಕ ಹಂತದಲ್ಲಿ ಉಪಾಸಕನು ದೇವರು ಮತ್ತು ತಾನು ಹೀಗೆ ದ್ವೈತದ ಸ್ಥಿತಿಯನ್ನು ಅನುಭವಿಸುತ್ತಿರುತ್ತಾನೆ; ಆದ್ದ-ರಿಂದ ಅವನು ಎರಡು ಊದುಬತ್ತಿಗಳನ್ನು ಬೆಳಗುವುದು ಹೆಚ್ಚು ಯೋಗ್ಯವಾಗಿದೆ. ಉಪಾಸಕನು ಭಕ್ತಿಯ ಮುಂದಿನ ಹಂತದಲ್ಲಿ ಒಂದು ಊದುಬತ್ತಿಯನ್ನು ಬೆಳಗಬಹುದು. ದೇವರಿಗೆ ಊದುಬತ್ತಿಯನ್ನು ಬೆಳಗುವಾಗ ಅದನ್ನು ತನ್ನ ಬಲಗೈಯ ತೋರುಬೆರಳು ಮತ್ತು ಹೆಬ್ಬೆರಳಿನಿಂದ ಹಿಡಿದು ಗಡಿಯಾರದ ಮುಳ್ಳು ತಿರುಗುವ ದಿಶೆಯಲ್ಲಿ ಮೂರು ಬಾರಿ ಬೆಳಗಬೇಕು.

-ಶ್ರೀ. ವಿನೋದ ಕಾಮತ, ವಕ್ತಾರರು, ಸನಾತನ ಸಂಸ್ಥೆ

# ನಿರ್ದೇಶಕ ಎ.ರಾಜಶೇಖರ ನಾಯಕರಿಗೆ ಸನ್ಮಾನ



ದೇವದುರ್ಗ: ರಾಯಚೂರು ಜಿಲ್ಲೆಯ ಆರ್ ಡಿಸಿಸಿ ಬ್ಯಾಂಕ್ ಒಟ್ಟು 13 ಸ್ಥಾನಗಳ ಪೈಕಿ ಏಳು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ದೇವದುರ್ಗದಿಂದ ಅವಿರೋಧವಾಗಿ ಆಯ್ಕೆಯಾಗಿರುವ ಜನಪ್ರಿಯ ನಾಯಕರು ಸಹಕಾರ ಕ್ಷೇತ್ರದ ಸರ್ಕಾರದಿಂದ ಸಹಕಾರ ರತ್ನ ರಾಜ್ಯ ಪ್ರಶಸ್ತಿ ವಿಜೇತರಾದ ಎ.ರಾಜಶೇಖರ ನಾಯಕರಿಗೆ ಶನಿವಾರದಂದು ಕಾಂಗ್ರೆಸ್ ಪಕ್ಷದ ಯುವ ಘಟಕದಿಂದ ಸನ್ಮಾನ ಮಾಡಿದರು.ಈ ಸಂದರ್ಭದಲ್ಲಿ ಕಾಂಗ್ರೆಸ್ ಯುವ ಘಟಕದ ತಾಲೂಕು ಕಾರ್ಯಾಧ್ಯಕ್ಷ ಅಬ್ದುಲ್ ಅಜೀಮ್,ಯುವ ಘಟಕದ ಸಂಘಟನ ಕಾರ್ಯದರ್ಶಿ ಅಮೀರ್ ಪಾಷ,ಪ್ರಧಾನ ಕಾರ್ಯದರ್ಶಿ ಖಾಜಾ ಪಾಷ,ಪಾಷ ಬುವಾಜಿ,ಹನುಮಂತ್ರಾಯ ಆಕಳಕುಂಪಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ಮಲೆನಾಡಿನಲ್ಲಿ ಹೆಚ್ಚಿದ ಶ್ರೀಗಂಧದ ದಂಧೆ

**ಮಲೆನಾಡ ಹೆಬ್ಬಾಗಿಲು ಶಿವಮೊಗ್ಗದಲ್ಲಿ ಖಾಕಿ ಪಡೆ ಭರ್ಜರಿ ಬೇಟೆಯಾಡಿದೆ. ಶ್ರೀಗಂಧ ದಂಧೆಕೋರನ ಬುಡವನ್ನೇ ನಡುಗಿಸಿ, ಕೋಟಿ ಕೋಟಿ ಮೌಲ್ಯದ ಮಾಲು ವಶಪಡಿಸಿಕೊಂಡಿದ್ದಾರೆ.**



ಶಿವಮೊಗ್ಗ ಮಲೆನಾಡಿನ ಹೆಬ್ಬಾಗಿಲು. ದಟ್ಟವಾಗಿರುವ ಪಶ್ಚಿಮಘಟ್ಟದಲ್ಲಿ ಅಪರೂಪದ ಸಸ್ಯಕಾಶಿ ಇಲ್ಲಿದೆ. ಇದರ ನಡುವೆ ಚಂದನವನ ಕೂಡಾ ಇಲ್ಲಿದೆ. ಹೀಗೆ ಪಶ್ಚಿಮಘಟ್ಟದ ಈ ಚಂದನವನಕ್ಕೆ ಖದೀಮರು ಕೈಹಾಕಿದ್ದರು. ಕೋಟಿ ಕೋಟಿ ಮೌಲ್ಯದ ಶ್ರೀಗಂಧದ ತುಂಡುಗಳನ್ನ ಅಕ್ರಮವಾಗಿ ಸಂಗ್ರಹಿಸಿದ್ರು. ಇದೀಗ, ಪೊಲೀಸ್ರು ಆ ಕೋಟೆಯನ್ನೇ ಬೇಟೆಯಾಡಿದ್ದಾರೆ. ಮಲೆನಾಡ ಹೆಬ್ಬಾಗಿಲು ಶಿವಮೊಗ್ಗದಲ್ಲಿ ಖಾಕಿ ಪಡೆ ಭರ್ಜರಿ ಬೇಟೆಯಾಡಿದೆ. ಶ್ರೀಗಂಧ ದಂಧೆಕೋರನ ಬುಡವನ್ನೇ ನಡುಗಿಸಿ, ಕೋಟಿ ಕೋಟಿ ಮೌಲ್ಯದ ಮಾಲು ವಶಪಡಿಸಿಕೊಂಡಿದ್ದಾರೆ. ಅಕ್ರಮವಾಗಿ ಶ್ರೀಗಂಧ ಅಡಗಿಸಿಟ್ಟಿದ್ದ ರೀತಿ ಕಂಡು ಪೊಲೀಸ್ರೇ ಶಾಕ್ ಆಗಿದ್ದಾರೆ. ಶಿವಮೊಗ್ಗ ನಗರದ ಗೋದಾಮಿನಲ್ಲಿ ಅನಾಮತ್ತು 910 ಕೆಜಿ ಶ್ರೀಗಂಧವನ್ನ ಅಕ್ರಮವಾಗಿ ಸಂಗ್ರಹಿಸಿದ್ರು. ಇಷ್ಟೊಂದು ಗಂಧವನ್ನ ಸಂಗ್ರಹಿಸಿದ್ದ ಆ ಮರಿವೀರಪ್ಪನ್ ಹೆಸ್ರು ಅಪ್ಸರ್.

ಶ್ರೀಗಂಧ ದಂಧೆಕೋರನ ಗೋದಾಮಿನ ಮೇಲೆ ದಾಳಿ

ಅರಣ್ಯ ಮತ್ತು ಪೊಲೀಸ್ ಇಲಾಖೆ ಇತಿಹಾಸದಲ್ಲಿ, ಅತೀ ದೊಡ್ಡ ಜಂಟಿ ಕಾರ್ಯಾಚರಣೆ ನಡೆದಿದೆ. ಸುಮಾರು 910 ಕೆಜಿ ಶ್ರೀಗಂಧವನ್ನು ಜಪ್ತಿ ಮಾಡಿ ದಾಖಲೆ ಬರೆದಿದ್ದಾರೆ. ಟಿಪ್ಪು ನಗರದ

ಅಪ್ಸರ್ನ ಈ ಅಕ್ರಮ ಕೋಟೆ ನೋಡಿದ್ರೆ, ಯಾರೊಬ್ಬರಿಗೂ ಡೌಟ್ ಬರ್ತಿರಲಿಲ್ಲ. ಗೋದಾಮು ಹೊರಗಿನಿಂದ ಶ್ರೀಗಂಧ ಇದೆಯೋ, ಇಲ್ಲವೋ ಎಂಬಂತಿತ್ತು. ಅಧಿಕಾರಿಗಳು ಒಳಗೆ ನುಗ್ಗುತ್ತಿದ್ದಂತೆ, ಚೀಲ, ಬಾಕ್ಸ್ಗಳಲ್ಲಿ ಸಂಗ್ರಹಿಸಿಟ್ಟ ರಾಶಿ ರಾಶಿ ಗಂಧದ ತುಂಡುಗಳು ಸಿಕ್ಕವು. ವಿಷ್ಯ ಏನಂದ್ರೆ, ಶ್ರೀಗಂಧದ ಮರಗಳನ್ನ ಕದಿಯುತ್ತಿದ್ದ ಕಳ್ಳರಿಂದ ಅಪ್ಸರ್ ಮಾಲನ್ನು ಸಂಗ್ರಹಿಸ್ತಿದ್ನಂತೆ. ಚೋರರೆಲ್ಲ ಈ ಅಪ್ಸರ್ಗೆ ಕದ್ದ ಶ್ರೀಗಂಧವನ್ನ ಕೊಡ್ತಿದ್ರಂತೆ. ಆದ್ರೆ, ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಗೂ ಈತ ಮಾಮೂಲಿ ಕೊಡ್ತಿದ್ದೇ ಅನ್ನೋ ವಿಷ್ಯವನ್ನ ಬಾಯ್ಬಿಟ್ಟಿರೋದು, ಹತ್ತಾರು ಪ್ರಶ್ನೆ ಹುಟ್ಟುಹಾಕಿದೆ.

ಇನ್ನು, ಮಲೆನಾಡಿನಲ್ಲಿ ಶ್ರೀಗಂಧದ ಸ್ಮಗ್ಲಿಂಗ್ ನಡೀತಿದ್ರು ಅಧಿಕಾರಿಗಳು ಸೈಲೆಂಟ್ ಆಗಿದ್ರು. ಆದ್ರೀಗ, ತುಂಗಾ ನಗರ ಪೊಲೀಸರ ಕಾರ್ಯಾಚರಣೆಗೆ, ಪ್ರಶಂಸೆ ವ್ಯಕ್ತವಾಗಿದೆ. ಏನೇ ಹೇಳಿ, ಮಲೆನಾಡ ಮಹಾಮನೆಯಲ್ಲಿ ಕಳ್ಳರು, ಶ್ರೀಗಂಧ ಮರಗಳ ಬುಡವನ್ನೇ ಕತ್ತರಿಸ್ತಿದ್ದಾರೆ. ಸದ್ಯ ಬಲೆಗೆ ಬಿದ್ದಿರುವ ಈ ಮರಿ ವೀರಪ್ಪನ್ಗೆ, ದೊಡ್ಡ ದೊಡ್ಡ ದಂಧೆಕೋರರ ಲಿಂಕ್ ಇರುವ ಸಾಧ್ಯತೆ ಇದೆ. ಹೀಗಾಗಿ, ಆರೋಪಿ ಇತಿಹಾಸವನ್ನ ಖಾಕಿ ಪಡೆ ಕೆದಕುತ್ತಿದೆ.

# ನಾಡ ದ್ರೋಹಿಗಳಿಗೆ ಕಠಿಣ ಶಿಕ್ಷೆಯಾಗಲಿ

ಕನ್ನಡಪರ ಸಂಘಟನೆಗಳು ಇಂತಹ ಸಂದರ್ಭದಲ್ಲಿ ಧ್ವನಿಮಾಡುವುದಲ್ಲ, ಜವಾಬ್ದಾರಿ ಹೊತ್ತ ಕನ್ನಡ ಸಾಹಿತ್ಯ ಲೋಕ ಇದೀಗ ಎದ್ದೇಳ ಬೇಕಾಗಿದೆ. ಹೋರಾಟ ಮಾಡಬೇಕಾಗಿದೆ.ಬೆಳಗಾವಿಯಲ್ಲಿ ಹಾಗೂ ಕೊಲ್ಲಾಪುರ ಮುಂತಾದ ಕಡೆ ಕೆಲವು ಪುಂಡರು ರಾಜಕೀಯ ಸಹಕಾರದಿಂದ ಗೊಂದಲ ಮೂಡಿಸಿ, ಗಲಭೆಗಳಿಗೆ ಕಾರಣರಾಗಿದ್ದಾರೆ. ಕನ್ನಡ ಧ್ವಜವನ್ನು ಸುಟ್ಟಿದ್ದು ಮಾತ್ರವಲ್ಲದೇ, ಪ್ರತಿಮೆಗಳಿಗೆ ಹಾನಿಯುಂಟು ಮಾಡಿದ್ದಾರೆ. ಕನ್ನಡ ನೆಲದ ಪ್ರಶ್ನೆ ಇದಾಗಿದೆ. ಹೊತ್ತಿ ಉರಿಯುವಾಗ ಕನ್ನಡದ ಸಾರಸ್ವತ ಲೋಕ ಮೌನಕ್ಕೆ ಶರಣಾಗುವುದು ನಾಚಿಕೆಗೇಡಿನ ಸಂಗತಿ. ಇನ್ನಾದರೂ ತಕ್ಷಣ ಹಿರಿಯ – ಕಿರಿಯ ಬರಹಗಾರರು, ಸಾಹಿತಿಗಳು ಬೀದಿಗಿಳಿದು ಹೋರಾಟಕ್ಕೆ ಮುಂದಾಗುವ ಅನಿವಾರ್ಯ ಎದುರಾಗಿದೆ, ಪರಿಸ್ಥಿತಿ ಇಂದು ಬಂದಿದೆ.

ತಮಗೆ ಸಂಬಂಧ ಇಲ್ಲ ಎನ್ನುವಂತೆ ಅಧಿಕಾರದಲ್ಲಿ ಇರುವ ರಾಜಕೀಯ ಪ್ರತಿನಿಧಿಗಳು, ಹಿರಿಯ ಸಾಹಿತಿಗಳು ಸರಕಾರಕ್ಕೆ ಸಲಹೆ ಸೂಚನೆ ನೀಡುವ ಮೂಲಕ ನಾಡ ದ್ರೋಹಿ ಪುಂಡರ ಉದ್ದಟತನ ತಡೆಯಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಮುಂದಾಗಬೇಕು.

ಕನ್ನಡ ನಾಡು ನುಡಿ, ನೆಲ ಭಾಷೆ, ಕನ್ನಡಿಗರ ಸ್ವಾಭಿಮಾನದ ಅಸ್ಮಿತೆಯನ್ನು ಪದೆ ಪದೆ ಕೆಣಕುತ್ತಿರುವ, ಕನ್ನಡಿಗರ ತಾಳ್ಮೆಯನ್ನು ಪರಿಕ್ಷಿಸುತ್ತಿರುವ ಎಮ್.ಇ.ಎಸ್ ಪುಂಡರ ಸೊಕ್ಕನ್ನು ಅಡಗಿಸಬೇಕು,

ನಾಡ ಧ್ವಜವನ್ನು ಅವಮಾನಿಸಿ ಸುಟ್ಟಂತಹ ಕನ್ನಡ ವಿರೋಧಿಗಳನ್ನು ಈ ಕೂಡಲೇ ಬಂಧಿಸಬೇಕು.

ಅವರಿಗೆ ಕಠಿಣ ಶಿಕ್ಷೆ ವಿಧಿಸಿ, ಗಡಿಪಾರು ಮಾಡಬೇಕು, ಕನ್ನಡ ನಾಡು–ನುಡಿಗಾಗಿ ಹೋರಾಟ ಮಾಡುವ ವ್ಯಕ್ತಿಗಳನ್ನು ರಾಜ್ಯ ಸರ್ಕಾರ ಗೌರವಿಸಬೇಕು. ನಿರಪರಾಧಿ, ಕನ್ನಡದ ಉಳಿವಿಗಾಗಿ ಹೋರಾಟ ಮಾಡುವ ವ್ಯಕ್ತಿಗಳನ್ನು ಬಂಧಿಸುವ ಕ್ರಮ ಸಮರ್ಥನೀಯವಲ್ಲ. ಆದಕಾರಣ ಕನ್ನಡಕ್ಕಾಗಿ ಹೋರಾಡುತ್ತಿರುವ ವ್ಯಕ್ತಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು.ನಾಡ ಭಾವುಟವನ್ನು ಸುಟ್ಟು ಹಾಕಿದ ಆರೊಪಿಗಳನ್ನು ಈ ತಕ್ಷಣವೇ ಬಂದಿಸಿ, ಕಠಿಣಾತಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು, ಕನ್ನಡ ಧ್ವಜಕ್ಕೆ ಅಪಮಾನ ಮಾಡಿರುವ ಘಟನೆ ಅತ್ಯಂತ ದುಷ್ಕೃತ್ಯ. ಧ್ವಜವನ್ನು ಸುಟ್ಟು ಹಾಕಿ ವಿಕೃತಿ ಮೆರೆದಿರುವುದು ನೀಚ,ಹೇಯ ಕೃತ್ಯ. ಅಖಂಡ ಕರ್ನಾಟಕದ ಅಸ್ಮಿತೆ ಸಾರುವ ನಮ್ಮ ಧ್ವಜದ ವಿಚಾರದಲ್ಲಿ ಈ ರೀತಿಯ ಘಟನೆ ಸಹಿಸಲು ಸಾಧ್ಯವಿಲ್ಲ.ಕನ್ನಡ ಧ್ವಜ ಕನ್ನಡಿಗರ ಸ್ವಾಭಿಮಾನದ ಸಂಕೇತ. ಕನ್ನಡ ಧ್ವಜಕ್ಕೆ ಅಪಮಾನವಾದರೆ, ಅದು ಕರ್ನಾಟಕದ ಅಸ್ಮಿತೆಗೆ ಧಕ್ಕೆಯಾದಂತೆ. ಇಂತಹ ಪವಿತ್ರ ಧ್ವಜವನ್ನು ಸುಟ್ಟಿರುವುದು ಯಾರೂ ಸಹಿಸಲಾಗದು.ಆದಕಾರಣ ಈ ವಿಚಾರವನ್ನು ಅತ್ಯಂತ ಗಂಭೀರವಾಗಿ ಕರ್ನಾಟಕ ಸರಕಾರ ಪರಿಗಣಿಸಬೇಕು. ಪರಿಗಣಿಸುವ ಮೂಲಕಕರುನಾಡ ವಿರೋಧಿಗಳಾದ ಎಮ್.ಇ.ಎಸ್.ಪುಂಡರ ಮದವನ್ನು ಕೊನೆಗಾಣಿಸಿ, ಇವರ ಮೇಲೆ ಸೂಕ್ತ ಕ್ರಮ ಕೈಗೊಂಡು, ಗಡಿ ಪಾರು ಮಾಡಬೇಕು.ಈ ಮೂಲಕ ಕನ್ನಡವನ್ನು ಉಳಿಸುವ ದಿಕ್ಕಿನಲ್ಲಿ ರಾಜ್ಯ ಸರ್ಕಾರ ಸೂಕ್ತ ಹೆಜ್ಜೆ ಇಡಲೇಬೇಕು.

–ಸಂಗಮೇಶ ಎನ್ ಜವಾದಿ. ಸಾಹಿತಿ,
ಪತ್ರಕರ್ತ, ಬೀದರ ಜಿಲ್ಲೆ.

# ಮುದಗಲ್ ಕೋಟೆಯ ಮಾನ ಹರಾಜು ಹಾಕಿದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು

ಮುದಗಲ್ ಹೆಸರು ಕೇಳಿದರೆ ಮೊದಲು ನೆನಪಿಗೆ ಬರುವದೇ ಕೋಟೆ ಮತ್ತು ಬೃಹತ್ಕಾರದ ಬಂಡೆಗಳು ಮುದಗಲ್ ಸುಮಾರು 1406 ಮತ್ತು ಅದರ ಹಿಂದಿನಿಂದಲೂ ಇತಿಹಾಸ ಹೊಂದಿದೆ. ಎರಡನೇ ಹರಿಹರನ ಮಗನಾದ ಒಂದನೇ ದೇವರಾಯ (1406–1422) ಮುದಗಲ್ ಗೆ ಸೈನ್ಯದೊಂದಿಗೆ ಮುತ್ತಿಗೆ ಹಾಕಿ ಆಕಸ್ಮಿಕವಾಗಿ ಅಕ್ಕಸಾಲಿಗನ ಮಗಳಾದ ಸುಂದರವಾದ ಯುವತಿಯ ಕಂಡು ಮನಸೋತನು ಆದರೆ ಆ ಸುಂದರ ಯುವತಿಯನ್ನು ವರಸಿಕೊಳ್ಳಲು ಒಂದನೇಯ ದೇವರಾಯ ವಿಫಲವಾಗುತ್ತಾನೆ. ರಾಯಚೂರಿನ ಒಂದು ಭಾಗವಾದ ದೋಬಾಬ್ ದಲ್ಲಿ ಆಳ್ವಿಕೆ ನಡೆಸುತ್ತಿದ್ದ ಫಿರೋಜ್ ಷಾ ನಿಗೆ ದೇವರಾಯ ಮಾಡಿದ ಆಕ್ರಮಣ ತಿಳಿಯುತ್ತದೆ ನಂತರ ಯುದ್ಧಗಳು ಪ್ರಾರಂಭವಾಗುತ್ತವೆ ಫಿರೋಜ್ ಷಾ ಯುದ್ಧದಲ್ಲಿ ಗೆಲ್ಲುತ್ತಾನೆ ನಂತರದ ದಿನಗಳಲ್ಲಿ ಫಿರೋಜ್ ಷಾ ಸಹೋದರ ಒಂದನೇ ಸಾಹೇಬ್ ಉದ್ ದೀನ್ (1422) ಹಾಗೂ ಒಂದನೇಯ ದೇವರಾಯನ ಸಹೋದರ ವೀರ ವಿಜಯರಾಯನ ನಡುವೆ ಯುದ್ಧ ಪ್ರಾರಂಭವಾಗುತ್ತದೆ 2ನೇ ದೇವರಾಯ ಮುದಗಲ್ ಪುನಃ ವಶಪಡಿಸಿ ಕೊಳ್ಳುತ್ತಾನೆ ನಂತರದ ದಿನಮಾನಗಳಲ್ಲಿ ಸಾಮ್ರಾಜ್ಯ ವಿಸ್ತರಣೆ ಗೆ ವಿಜಯನಗರ ಸಾಮ್ರಾಜ್ಯ. ಬಿಜಾಪುರದ ಆದಿಲ್ ಶಾಹಿಗಳು. ಬಹುಮನಿ ಸುಲ್ತಾನರು ನಡುವೆ ಯುದ್ಧಗಳು ಮುದಗಲ್. ಕೊಪ್ಪಳ. ರಾಯಚೂರು. ನ ಪ್ರದೇಶಗಳಲ್ಲಿ ನಡೆದಿವೆ.

ಮುದಗಲ್ ಕೋಟೆಯ ವಿಚಾರಕ್ಕೆ ಬರುವುದಾದರೆ ಮುದಗಲ್ ಕೋಟೆಯು ಬೆಟ್ಟದ ಮೇಲೆ ನೆಲೆಗೊಂಡಿರುವ ಕೋಟೆಯನ್ನು ಹೊಂದಿದೆ, ಇದು ಬಯಲು ಪ್ರದೇಶದ ಹೊರಗಿನ ಕೋಟೆಗಳಿಂದ ರಕ್ಷಿಸಲ್ಪಟ್ಟಿದೆ. ಹೊರಗಿನ ಕೋಟೆಗಳು ವಿಶಾಲವಾದ ಕಂದಕವನ್ನು ಒಳಗೊಂಡಿರುತ್ತವೆ, ಇದರ ಅಗಲವು ಕೆಲವು ಸ್ಥಳಗಳಲ್ಲಿ 50 ಗಜಗಳಷ್ಟು ತಲುಪುತ್ತದೆ. ಒಂದು ಸಾಲು ಬುರುಜುಗಳೊಂದಿಗೆ ಸ್ಕಾರ್ಪ್ ಮತ್ತು ಅದರ ನಂತರ, ಕಿರಿದಾದ ಮುಚ್ಚಿದ ಹಾದಿ ಮತ್ತು ಅಂತಿಮವಾಗಿ ಅತ್ಯಂತ ಬೃಹತ್ ಬುರುಜುಗಳೊಂದಿಗೆ ಕೌಂಟರ್ ಸ್ಕಾರ್ಪ್ ಅನ್ನು ಅನುಸರಿಸುತ್ತದೆ.









ಹಲವಾರು ಸ್ಥಳಗಳಲ್ಲಿ ಕಲ್ಲಿನ ಕೋರ್ಸ್‌ಗಳು ಹಿಂದೂ ಶೈಲಿಯಲ್ಲಿವೆ; ಆದರೆ ಕಮಾನಿನ ಆಕಾರದ ಪ್ಯಾರಪೆಟ್ ಡೆಸಿನ್‌ಗಳಲ್ಲಿ ಮುಸ್ಲಿಂ ಆಗಿದೆ. ಫತೇಹ್ ದಾರವಾಜಾದ ಎದುರಿನ ಬೃಹತ್ ಭದ್ರಕೋಟೆಯ ಮೇಲೆ ಮೂತಿಯ ಬಳಿ ಕನ್ನಡ ಶಾಸನವಿರುವ ಬಂದೂಕನ್ನು ಇರಿಸಲಾಗಿದೆ.ಈಗಾಗಲೇ ಉಲ್ಲೇಖಿಸಲಾದ ಬಾಲಾ–ಹಿಸಾರ್ (ಸಿಟಾಡೆಲ್), ಬಂದರಿನ ಒಳಭಾಗವನ್ನು ಸುತ್ತಮುತ್ತಲಿನ ದೇಶದಂತೆ ಉತ್ತಮ ನೋಟವನ್ನು ನೀಡುತ್ತದೆ. ಬೆಟ್ಟವು ಗೋಡೆಗಳು ಮತ್ತು ಬುರುಜುಗಳಿಂದ ಒಂದು ಹಂತದಲ್ಲಿ ಬಲಪಡಿಸಲ್ಪಟ್ಟಿದೆ, ಬೆಟ್ಟದ ಮಧ್ಯದಲ್ಲಿ ದೊಡ್ಡ ಭದ್ರಕೋಟೆಯೂ ಇದೆ. ಬೆಟ್ಟದ ಮೇಲೆ ಹಲವಾರು ನೈಸರ್ಗಿಕ ಗುಹೆಗಳು ಮತ್ತು ತಗ್ಗುಗಳಿವೆ ಮತ್ತು ಬಂದರಿನ ಪಶ್ಚಿಮ ಭಾಗದಲ್ಲಿ ಒಂದು ದೊಡ್ಡ ತೊಟ್ಟಿ ಇದೆ – ಸುಮಾರು 140 ಗಜಗಳಷ್ಟು ಉದ್ದ ಮತ್ತು 40 ರಿಂದ 50 ಗಜಗಳಷ್ಟು ಅಗಲವಿದೆ. ಯಾರೇ ಆಳ್ವಿಕೆ ನಡೆಸಿದರುಕೂಡ ಸ್ವಲ್ಪ ಘಾಸಿಗೊಳ್ಳದ ಮುದಗಲ್ ಕೋಟೆ ರಾಜರು ಪ್ರಕೃತಿ. ಕುಡಿಯುವ ನೀರು. ಸ್ನಾನಗೃಹ. ಚರಂಡಿ. ಸ್ವಚ್ಛತೆಗೆ ಬಹಳ ಒತ್ತು ಕೊಡುತ್ತಿದ್ದರು ನಾವು ಕಟ್ಟಿಸಿದ ಮನೆಗಳಿಗೆ ಸಾವು ಇದೆ ಆದರೆ ಕೋಟೆಗಳಿಗೆ ಸಾವಿಲ್ಲ ಇದನ್ನು ಕಾಪಾಡುವದು ನಮ್ಮ ಜವಾಬ್ದಾರಿ. ನಮ್ಮ ಸರಕಾರದ ಜವಾಬ್ದಾರಿ. ಅಧಿಕಾರಿಗಳ ಜವಾಬ್ದಾರಿ. ನಮ್ಮನ್ ಆಳುವ ಎಂ ಲ್ ಎ. ಎಂ ಪಿ. ಜಿಲ್ಲಾ ಉಸ್ತುವಾರಿಗಳ ಜವಾಬ್ದಾರಿ. ಈ ಕೋಟೆಯ ಒಳಗೆ ರಾಘವೇಂದ್ರ ಸ್ವಾಮಿ ಗುಡಿ ರಾಮನ ಗುಡಿ ಮತ್ತು ಮುಸ್ಲಿಂ ದರ್ಗಾ ಇದೆ ಪ್ರತಿವರ್ಷ ಮೊಹರಂ ಜಾತ್ರೆಯಾಗುತ್ತೆ. ರಾಯರ ಆರಾಧನೆಯು ಆಗುತ್ತೆ ಇಲ್ಲಿ ಯಾವುದೇ ರೀತಿಯ ಕೋಮು ಗಲಭೆಯಿಲ್ಲ ಹಾಗೆಯೇ ಕೋಟೆಯ ಸುತ್ತಮುತ್ತ ಸ್ಥಳಗಳಲ್ಲಿ ಆಗಾಗ ನಿಧಿಗಳ್ಳರ ಹಾವಳಿಯು ಇದೆ ಕೋಟೆಯ ದೊಡ್ಡ ತೊಟ್ಟಿಯಲ್ಲಿ ಸುಮಾರುವರ್ಷಗಳಿಂದ ಕಲುಶುತ ಚರಂಡಿ ನೀರು ನಿಂತ ನೀರಾಗಿದೆ ಲಕ್ಷಗಟ್ಟಲೆ ತರತರದ ವೈರಸ್ ಜೀವಿಗಳ ಉಗಮ ಸ್ಥಾನವಾಗಿದೆ ಇದರಿಂದ ಮಲೇರಿಯಾ. ಕಾಲರಾ. ಡೆಂಗೊ. ಚಿಕನ್ಗುನ್ಯಾ. ಮುಂತಾದ ರೋಗಗಳು ಬರುವಂತಾಗಿದೆ. ಕೋಟೆಯ ಮೇಲ್ಭಾಗಗಳಲ್ಲಿ ಮುಳ್ಳು ಕಂಟೆಗಳು ಬೆಳೆದು ನಿಂತಿವೆ ಕೋಟೆಯ ಒಳಗೆ ಮಲಮೂತ್ರ ವಿಸರ್ಜನೆ ಕುಡುಕರ ಅನೈತಿಕ ಚಟುವಟಿಕೆ ಮಾಡುವ ಸ್ಥಳವಾಗಿದೆ ಇಲ್ಲಿಯ ವರೆಗೂ ಕೋಟೆಯ ಅಭಿವೃದ್ಧಿಗೆ ಬಂದ ಏನಾಯಿತು ?ಯಾವ ನುಂಗಣ್ಣರ ಪಾಲಾಯಿತು ? ಶ್ರೀ ಶ್ರೀ ಶ್ರೀ ಮಾನ್ಯ ಡಿ ಎಸ್ ಹುಲಗೇರಿ ಜನಪ್ರಿಯ ಶಾಸಕರು ಮುದಗಲ್ ಎಂ ಲ್ ಎ ಎಂದು ಜನಪ್ರಿಯ ಪಡೆದ ಡಿ ಎಸ್ ಹುಲಗೇರಿ ಯವರೇ ನೀವು ಆಯ್ಕೆ ಆಗಿ ಬಂದಾಗ ಕೋಟೆಯನ್ನು ಪ್ರವಾಸಿ ತಾಣವನ್ನಾಗಿ ಮಾಡಿ ಕೋಟೆ ಉತ್ಸವ ಮಾಡುತ್ತೇನೆ ಅಂದ ಮಾತು ಮರೆತುಹೋಯಿತೇ ? ದಿನಾಲೂ ಮುದ ಗಲ್ ನ ತಮ್ಮ ಮನೆಯಿಂದ ಕೋಟೆ ಪಕ್ಕದ ರಸ್ತೆ ಇಳಕಲ್ ರೋಡ್ ಮುಖಾಂತರ ದಿನಾಲೂ ಅದೇ ರೋಡಿನ ಮುಖಾಂತರ ಹೋಗುತ್ತಾರೆ ಬರುತ್ತಾರೆ ಕೋಟೆಯ ವಾಸ್ತವ ಸ್ಥಿತಿ /ಚಿತ್ರಣ ನೀವು ನೋಡಿದ್ದೀರಾ ? ಇನ್ನು ಪುರಸಭೆ ಮುಖ್ಯಾಧಿಕಾರಿಗಳು ತಮಗೂ ಮುದಗಲ್ ನ ಹೃದಯ ಭಾಗದಲ್ಲಿರುವ ಕೋಟೆಗೂ ಯಾವುದೇ ಸಂಬಂಧ ವಿಲ್ಲದ ವರ್ತನೆ ರೀ ಮುಖ್ಯಾಧಿಕಾರಿಗಳೇ ಈ ಮುದಗಲ್ ಕೋಟೆ ಯಾವುದೇ ಪಾಕಿಸ್ತಾನ. ಚೈನಾ. ತಾಲಿಬಾನ್ ನಲ್ಲಿ ಇಲ್ಲ ಭಾರತದಲ್ಲಿದೆ ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮುದಗಲ್ ಪುರಸಭೆಯಿಂದ 200 ಮೀಟರ್ ಅಷ್ಟೇ ಗೊತ್ತಿಲ್ಲದಿದ್ದರೆ ವಾಸ್ತವ ಸ್ಥಿತಿನೋಡಿ ಇದೆ ರೀತಿ ಕೋಟೆಯ ವಿಚಾರದಲ್ಲಿ ನಿರ್ಲಕ್ಷವಹಿಸಿದರೆ ಮುಂದಿನ ದಿನಗಳಲ್ಲಿ ರಾಜಕೀಯ ನಾಯಕರಿಗೆ ಅಧಿಕಾರಿಗಳ ವಿರುದ್ಧ ಜನರು ತಕ್ಕ ಪಾಠ ಕಳಿಸುವದಂತು ನಿಜ.

–ವರದಿ ಬಸವರಾಜ್ ಬಡಿಗೇರ್

ಕರುನಾಡ ಕಂದ
ಸಂಪುಟ-1 | ಸಂಚಿಕೆ-5
ದಿನಾಂಕ: 01-01-2022 | ಪುಟಗಳು: 16

# ಬೆಳೆ ವಿಮೆ ಎಂಬುದು ರೈತರ ಪಾಲಿಗೆ ಓಸಿ ಆಟವಿದ್ದಂತೆ ರೈತ ಸಂಘದಿಂದ ಆರೋಪ

ಗದಗ ತಾಲ್ಲೂಕಿನ ವ್ಯಾಪ್ತಿಗೆ ಬರುವ 27 ಗ್ರಾಮ ಪಂಚಾಯಿತಿಗೆ ಸೇರಿದ 57 ಹಳ್ಳಿಗಳ ರೈತರು ತಾವು ಬಿತ್ತನೆ ಮಾಡಿದ ಬೆಳೆಗಳಿಗೆ 2019 ಹಾಗೂ 2020 ನೇ ಸಾಲಿನ ಮುಂಗಾರು ಹಾಗೂ ಹಿಂಗಾರಿ ಬೆಳೆಗಳಿಗೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಹೆಸರು, ಈರುಳ್ಳಿ ಮೆಣಸಿನಕಾಯಿ,ಶೇಂಗಾ,ಕಡ್ಲಿ,ಗೋಧಿ , ಜೋಳ ,ಕುಸುಬಿ ಹಾಗೂ ಇನ್ನೂ ಮುಂತಾದ ಬೆಳೆಗಳಿಗೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಬೆಳೆ ವಿಮೆ ಹಣವನ್ನು ತುಂಬಿದ್ದು .ಈಗ ಕಳೆದ ವರ್ಷದ 2019 – 2020 ಸಾಲಿನ ಬೆಳೆ ವಿಮೆ ಹಣ ಮಂಜೂರಾಗಿದ್ದು ಇದರಲ್ಲಿ ವಿಮಾ ಕಂಪೆನಿಯಾದ ಬಜಾಜ್ ಅಲಯನ್ಸ್ ಇನ್ಸೂರೆನ್ಸ್ ಕಂಪನಿ ಹಾಗೂ ಕೃಷಿ ಇಲಾಖೆಯ ಹಿರಿಯ ಅಧಿಕಾರಿಗಳು ಸೇರಿ ರೈತರಿಗೆ ಮಹಾ ಮೋಸ ಮಾಡಿದ್ದಾರೆ.ಆ ಮಹಾಮೋಸ ಏನಂತೀರಾ ? ತಾಲ್ಲೂಕಿನ ಒಟ್ಟು 27 ಗ್ರಾಮ ಪಂಚಾಯಿತಿಗೆ ಸೇರಿದ 57 ಗ್ರಾಮಗಳಲ್ಲಿ ಯಾವ ಗ್ರಾಮದ ಭೂ ಹಿಡುವಳಿ ಪ್ರದೇಶ ಕಡಿಮೆ ಇರುತ್ತದೆಯೋ ಅಂತಹ ಗ್ರಾಮವನ್ನು ಆಯ್ಕೆ ಮಾಡಿ ಉದಾಹರಣೆಗೆ ತಿಮ್ಮಾಪೂರ ಕೇವಲ 12 ನೂರು ಎಕರೆ ಜಮೀನು ಹೊಂದಿದೆ. ಅಂತಹ ಗ್ರಾಮದ ಬೆಳೆಗಳಿಗೆ ವಿಮಾ ಹಣವನ್ನು ಕ್ಲೇಮ್ ಮಾಡಿ ಉಳಿದ ಎಲ್ಲಾ ದೊಡ್ಡ ದೊಡ್ಡ ಹಿಡುವಳಿ ಪ್ರದೇಶದ ಗ್ರಾಮಗಳ ರೈತರು ತುಂಬಿದ ಕೋಟ್ಯಾಂತರ ರೂಪಾಯಿ ಹಣವನ್ನು ಕೊಳ್ಳೆ ಹೊಡೆಯುತ್ತಿದೆ.

ರೈತರು ತೀರ ಕಡಿಮೆ ಯಾವ ಬೆಳೆಗಳಿಗೆ ವಿಮಾ ಹಣವನ್ನು ತುಂಬಿರುತ್ತದೆ ಅದನ್ನು ನೋಡಿಕೊಂಡು ಅಂತಹ ಬೆಳೆಗೆ ವಿಮೆ ಹಣವನ್ನು ಬಿಡುಗಡೆಮಾಡಿ ರೈತರ ಮುಗಿಗೆ ತುಪ್ಪ ಸವರಿ ವಿಮೆ ಹಣವನ್ನು ಬಿಡುಗಡೆ ಮಾಡಿದರು ಎಂದು ಕೈತೊಳೆದುಕೊಳ್ಳುತ್ತಾರೆ.ಈ ಬೆಳೆ ವಿಮೆ ಹಣವನ್ನು ಬಿಡುಗಡೆ ಮಾಡುವುದು ಹೇಗಿದೆ ಎಂದರೆ ಓಸಿ ಆಟದಲ್ಲಿ 1 ರಿಂದ 100 ಸಂಖ್ಯೆಯಲ್ಲಿ ಯಾವ ಸಂಖ್ಯೆಗೆ ಕಡಿಮೆ ಜನರು ಕಡಿಮೆ ಹಣವನ್ನು ಕಟ್ಟಿರುತ್ತಾರೆ ಅಂತಹ ಸಂಖ್ಯೆಯನ್ನು ಓಪನ್ ಮಾಡಿ ಹಣವನ್ನು ಕೊಡುತ್ತಾರೆ ಹಂಗಿದೆ ಈ ಬೆಳೆ ವಿಮೆ



ಹಣ ಮಂಜೂರು ಮಾಡುವ ವ್ಯವಸ್ಥೆಯಾಗಿದೆ. ಗದಗ ತಾಲ್ಲೂಕಿನ ವ್ಯಾಪ್ತಿಗೆ 57 ಗ್ರಾಮಗಳು ಕಂದಾಯ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿ ಈ ವರ್ಷ ಕೇವಲ 17 ಗ್ರಾಮಗಳ ರೈತರಿಗೆ ಬೆಳೆ ವಿಮೆ ಹಣವನ್ನು ಬಿಡುಗಡೆ ಮಾಡುತ್ತಿದ್ದಾರೆ ಇನ್ನುಳಿದ 37 ಗ್ರಾಮ ರೈತರಿಗೆ 1 ರೂಪಾಯಿ ಬೆಳೆ ವಿಮೆ ಹಣ ಬಿಡುಗಡೆ ಮಾಡಿರುವುದಿಲ್ಲ . ಹಾಗೂ ಮುಂದಿನ ದಿನಗಳಲ್ಲಿ ಈ ನೀತಿಯನ್ನು ಕೈ ಬಿಟ್ಟು ಸರಿಸಮನಾಗಿ ಬೆಳೆ ವಿಮೆ ಹಣವನ್ನು ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವಿ ಆರ್ ನಾರಾಯಣರೆಡ್ಡಿ ಬಣದ ಗದಗ ಜಿಲ್ಲಾ ರೈತ ಸಂಘದ ಅಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ ಅವರು ಆರೋಪಿಸಿದ್ದಾರೆ. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮಧ್ಯಪ್ರವೇಶಿಸಿ ರೈತರಿಗೆ ಆದ ಈ ಅನ್ಯಾಯವನ್ನು ಸರಿಪಡಿಸಬೇಕು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.ಈ ಸಂದರ್ಭದಲ್ಲಿ ಗ್ರಾಮ ಘಟಕದ ಅಧ್ಯಕ್ಷರಾದ ಹುಚ್ಚೀರಪ್ಪ ಜೋಗಿನ, ಕೊಪ್ಪಳ ಜಿಲ್ಲಾ ರೈತ ಸಂಘದ ಜಿಲ್ಲಾ ಅಧ್ಯಕ್ಷ ಅಂದಪ್ಪ ಕೋಳೂರ, ಬಾಳಪ್ಪ ಗಂಗರಾತ್ರಿ, ಗಿರೀಶ್ ಗುಡ್ಲಾನೂರ ,ರಾಮಣ್ಣ ಖಂಡ್ರಿ ,ಶರಣಪ್ಪ ಜೋಗಿನ, ಮಾರುತಿ ಜೋಗಿನ, ಹಾಗೂ ಇನ್ನೂ ಮುಂತಾದ ರೈತ ಮುಖಂಡರು ಆಗ್ರಹಿಸಿದ್ದಾರೆ.

# ಸನ್ನಡತೆಯ ಜೀವನ

ಸಂಘಟನೆ ಇರುವುದು ನಮ್ಮ ಸ್ವಾರ್ಥಕ್ಕಾಗಿ ಅಲ್ಲ, ಸಮಾಜಕ್ಕಾಗಿ, ಸಮಾಜದ ಉನ್ನತಿಗಾಗಿ ದುಡಿಯುವ ಹಾಗೂ ನೋದವರ ರಕ್ಷಣೆ, ಸಂವಿಧಾನ ಬದ್ಧ ಹಕ್ಕಿಗಾಗಿ ಹೋರಾಟ ಮಾಡುವುದೇ ನಿಜವಾದ ಸಂಘಟನೆ.

ನಾವು ಯಾವುದೆ ಸಂಘಟನೆಯಲ್ಲಿ ಇರಲಿ, ಅದರ ಶ್ರೇಯಸ್ಸಿಗಾಗಿ ಚಿಂತನೆ ಮಾಡಬೇಕು, ಜನಪರ ಹೋರಾಟ ಮಾಡುವ ಮೂಲಕ ಜನರ ಕಷ್ಟಗಳಿಗೆ ಸ್ಪಂದನೆ ಮಾಡಿ, ಜನಸಾಮಾನ್ಯರ ಪ್ರೀತಿ ವಿಶ್ವಾಸ ಗೆಲ್ಲಬೇಕು, ಗೆದ್ದಾಗ ಮಾತ್ರ ನಾವು ಸಂಘಟನೆಯಲ್ಲಿ ಇದದ್ದು ಸ್ವಾರ್ಥಕವಾಗುತ್ತದೆ ಅಲ್ಲವೇ . ಹೀಗಾದಾಗ ಮಾತ್ರ ಜನರ ವಿಶ್ವಾಸ ಉಳಿಸಿಕೊಳ್ಳಲು ಸಾಧ್ಯ, ಇದುವೇ ನಿಜವಾದ ಸಂಘಟನೆಗಳ ಪ್ರಮುಖ ಧ್ಯೇಯ , ಮುಖ್ಯ ಗುರಿ, ಉದ್ದೇಶಯಾಗಿರುತ್ತದೆ ಎಂದರೆ ತಪ್ಪಾಗಲಾರದು. ಆದರೆ ಇತ್ತೀಚೆಗೆ ಸಂಘಟನೆಗಳು ಕೆಲ ಸ್ವಾರ್ಥ ವ್ಯಕ್ತಿಗಳ ಕಪಿಮುಷ್ಠಿಯಲ್ಲಿ ನರಳುತ್ತಿವೆ, ಬಂಧನವಾಗಿವೆ.ಅವರ ಅನುಕೂಲಕ್ಕಾಗಿ ಸಂಘವನ್ನು ಬಲಿಪಶು ಮಾಡುವ ವ್ಯವಸ್ಥಿತ ಷಡ್ಯಂತ್ರ ಯಶಸ್ವಿಯಾಗಿ ನಡೆಯುತ್ತಿದೆ, ನಡೆಸುತ್ತಿದ್ದಾರೆ. ಇದು ಎಲ್ಲೋ ಒಂದು ಕಡೆ ಸಂಘದ ಆಶಯಗಳನ್ನು ಮಿರಿ ಸಾಗುತ್ತಿರುವುದು ದೊಡ್ಡ ದುರಂತ. ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸಿ, ಸಂಘದ ನಿಯಮಗಳನ್ನು ಉಲ್ಲಂಘನೆ ಮಾಡುವ ಮೂಲಕ ದೇಶ, ನಾಡ ವಿರೋಧಿಗಳಿಗೆ ಕುಮ್ಮಕ್ಕು ಕೊಡುವ ವ್ಯಕ್ತಿ ಗಳಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ. ಶಾಂತಿಯುತವಾಗಿರುವ ವಾತಾವರಣವನ್ನು ಕಲ್ಮಶ ಮಾಡುತ್ತಿರುವ ಸನ್ನಿವೇಶ ಅಲ್ಲಲ್ಲಿ ನಾವೆಲ್ಲರೂ ದಿನನಿತ್ಯ ಕಾಣುತ್ತಿದ್ದೇವೆ. ಅದರ ಮುಂದುವರೆದ ಭಾಗವೇ ಕನ್ನಡ ನಾಡ ವಿರೋಧಿ ಕೃತ್ಯಗಳಲ್ಲಿ ಭಾಗವಹಿಸಿದ ಕೆಲ ಸಮಾಜ ದ್ರೋಹಿ ಸಂಘಟನೆಯ ಕಿಡಿಗೇಡಿಗಳು. ಈ ಕಿಡಿಗೇಡಿಗಳು ಕರುನಾಡಿನ ಬಗೆ ಕೆಟ್ಟದಾಗಿ ಮಾತನಾಡಿ,ಕನ್ನಡ ಧ್ವಜ ಸುಟ್ಟಿರುವುದು ಅವಿವೇಕದ ಹೀನ್, ಕುತಂತ್ರ ಕೃತ್ಯವಲ್ಲದೇ ಮತ್ತೇನು ? ಇದರ ಹಿಂದೆ ಯಾರಿದ್ದಾರೆ ಎಂದರೆ ಅದೇ ಸಮಾಜ ದ್ರೋಹಿ ಸಂಘನೆಯ ಸ್ವಾರ್ಥ ಹೀನ್ ವ್ಯಕ್ತಿಗಳು. ಇವರು ಸಮಾಜವನ್ನು ಸರಿದಾರಿಗೆ ತರುವಲ್ಲಿ ಶ್ರಮಿಸಬೇಕಾಗಿತ್ತು. ಆದರೆ ಇವರೇ ಹಿಂದೆ ನಿಂತು ಸಮಾಜವನ್ನು ಛಿದ್ರ ಹಾಗೂ ನಾಶ ಮಾಡಿ, ಅಶಾಂತಿಯ ವಿಷ ಬೀಜವನ್ನು ಬಿತ್ತುತ್ತಿರುವ ಅಯೋಗ್ಯರಿಗೆ ಬೆಂಬಲ ನೀಡುತ್ತಿರುವುದು ಕಾಣುತ್ತದೇವೆ, ಇದು ನಾಚಿಕೆಗೇಡಿನ ಸಂಗತಿ. ಸಂವಿಧಾನ ಬಾಹಿರ ಚಟುವಟಿಕೆಗಳಿಗೆ ಆಸ್ಪದ ನೀಡುತ್ತಿರುವ ಇಂತಹ ಸಮಾಜದ ದ್ರೋಹಿಗಳನ್ನು ಯಾವುದೇ ಮುಲಾಜಿಲ್ಲದೆ ಒದ್ದು ಜೈಲಿಗೆ ಹಾಕಬೇಕು. ಇಲ್ಲಿ ಆ ಜಾತಿ, ಈ ಜಾತಿ, ಇವನು – ಅವನು, ನಮ್ಮ ಪಕ್ಷದವರು ಎಂಬುದನ್ನು ನೋಡದೇ ಶಿಕ್ಷೆ ವಿಧಿಸುವ ನಿಟ್ಟಿನಲ್ಲಿ ನಾವೆಲ್ಲರೂ ಮುಂದಾಗುವುದು ಅತಿ ಅವಶ್ಯಕತೆ ಇದೆ. ಇಲ್ಲವಾದಲ್ಲಿ ಅಂದರೆ ಬರಲಿರುವ ಭವಿಷ್ಯದಲ್ಲಿ ದಿನಗಳಲ್ಲಿ ಭಯಾನಕ ಅನಾವುತಗಳ ದೃಶ್ಯವನ್ನು ನಾವು ನೋಡಲೇ ಬೇಕಾದ ಪ್ರಸಂಗ ಎದುರಾಗಬಹುದು. ಹಾಗಾಬಾರದು ಎಂಬುದೇ ನಮ್ಮೆಲ್ಲರ ಕಳಕಳಿ,ಆದಕಾರಣ ಇಂತಹ ಸಂದರ್ಭಗಳು ಮರುಕಳಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಅಂದರೆ ತಪ್ಪು ಮಾಡಿರುವ ಯಾವುದೇ ವ್ಯಕ್ತಿ ಯಾಗಿರಲಿ,ಎಂತಹದೇ ದೊಡ್ಡ ಸಂಘಟನೆಯ ಮುಖ್ಯಸ್ಥನಾಗಿರಲಿ, ತಪ್ಪು ಮಾಡಿದೇ ಆದಲ್ಲಿ, ಅವನಿಗೆ ಕಠಿಣ –ಕಠೋರವಾದ ಶಿಕ್ಷೆಗೆ ಒಳಪಡಿಸಬೇಕು. ಅಂದಾಗ ಮಾತ್ರ ಸಮಾಜ ಸರಿ ದಿಕ್ಕಿನಲ್ಲಿ ಸಾಗಲು ಖಂಡಿತಾ ಸಾಧ್ಯವಾಗುತ್ತದೆ. ಅದೇ ರೀತಿ ಸಹ ಸಂಘಟನೆಗಳ ಪ್ರಮುಖ ಪದಾಧಿಕಾರಿಗಳು ಒಳ್ಳೆಯ ದಾರಿಯಲ್ಲಿ ನಡೆಯುವ, ಸದಾಶಯದ ಸನ್ನಡತೆ

ಇಟ್ಟುಕೊಂಡು ಒಳ್ಳೆಯ ಕೆಲಸ ಕಾರ್ಯಗಳು ಸಾಧ್ಯವಾಗುತ್ತದೆ ಮತ್ತು ಮಾಡುತ್ತಾರೆ.

ಕ್ರಮ ಕೈಗೊಳ್ಳಬೇಕು: ಕನ್ನಡಪರ ಸಂಘಟನೆಗಳು ಇಂತಹ ಸಂದರ್ಭದಲ್ಲಿ ಧ್ವನಿಮಾಡುವುದಲ್ಲ, ಜವಾಬ್ದಾರಿ ಹೊತ್ತ ಕನ್ನಡ ಸಾಹಿತ್ಯ ಲೋಕ ಇದೀಗ ಎದ್ದೇಳ ಬೇಕಾಗಿದೆ. ಹೋರಾಟ ಮಾಡಬೇಕಾಗಿದೆ.ಬೆಳಗಾವಿಯಲ್ಲಿ ಹಾಗೂ ಕೊಲ್ಲಾಪುರ ಮುಂತಾದಕಡೆ ಕೆಲವು ಪುಂಡರು ರಾಜಕೀಯ ಸಹಕಾರದಿಂದ ಗೊಂದಲ ಮೂಡಿಸಿ, ಗಲಭೆಗಳಿಗೆ ಕಾರಣರಾಗಿದ್ದಾರೆ. ಕನ್ನಡ ಧ್ವಜವನ್ನು ಸುಟ್ಟದ್ದು ಮಾತ್ರವಲ್ಲದೇ, ಪ್ರತಿಮೆಗಳಿಗೆ ಹಾನಿಯುಂಟು ಮಾಡಿದ್ದಾರೆ. ಕನ್ನಡ ನೆಲದ ಪ್ರಶ್ನೆ ಇದಾಗಿದೆ. ಹೊತ್ತಿ ಉರಿಯುವಾಗ ಕನ್ನಡದ ಸಾರಸ್ವತಲೋಕ ಮೌನಕ್ಕೆ ಶರಣಾಗುವುದು ನಾಚಿಕೆಗೇಡಿನ ಸಂಗತಿ. ಇನ್ನಾದರೂ ತಕ್ಷಣ ಹಿರಿಯ – ಕಿರಿಯ ಬರಹಗಾರರು, ಸಾಹಿತಿಗಳು ಬೀದಿಗಿಳಿದು ಹೋರಾಟಕ್ಕೆ ಮುಂದಾಗುವ ಅನಿವಾರ್ಯ ಎದುರಾಗಿದೆ, ಪರಿಸ್ಥಿತಿ ಇಂದು ಬಂದಿದೆ.

ತಮಗೆ ಸಂಬಂಧ ಇಲ್ಲ ಎನ್ನುವಂತೆ ಅಧಿಕಾರದಲ್ಲಿ ಇರುವ ರಾಜಕೀಯ ಪ್ರತಿನಿಧಿಗಳು, ಹಿರಿಯ ಸಾಹಿತಿಗಳು ಸರಕಾರಕ್ಕೆ ಸಲಹೆ ಸೂಚನೆ ನೀಡುವ ಮೂಲಕ ನಾಡ ದ್ರೋಹಿ ಪುಂಡರ ಉದ್ದಟತನ ತಡೆಯಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಮುಂದಾಗಬೇಕು.

ಕನ್ನಡ ನಾಡು ನುಡಿ, ನೆಲ ಭಾಷೆ, ಕನ್ನಡಿಗರ ಸ್ವಾಭಿಮಾನದ ಅಸ್ಮಿತೆಯನ್ನು ಪದೆ ಪದೆ ಕೆಣಕುತ್ತಿರುವ, ಕನ್ನಡಿಗರ ತಾಳ್ಮೆಯನ್ನು ಪರಿಕ್ಷಿಸುತ್ತಿರುವ ಎಮ್.ಎಸ್ ಪುಂಡರ ಸೊಕ್ಕನ್ನು ಅಡಗಿಸಬೇಕು,

ನಾಡ ಧ್ವಜವನ್ನು ಅವಮಾನಿಸಿ ಸುಟ್ಟಂತಹ ಕನ್ನಡ ವಿರೋಧಿಗಳನ್ನು ಈ ಕೂಡಲೇ ಬಂಧಿಸಬೇಕು.

ಅವರಿಗೆ ಕಠಿಣ ಶಿಕ್ಷೆ ವಿಧಿಸಿ, ಗಡಿಪಾರು ಮಾಡಬೇಕು, ಕನ್ನಡ ನಾಡು–ನುಡಿಗಾಗಿ ಹೋರಾಟ ಮಾಡುವ ವ್ಯಕ್ತಿಗಳನ್ನು ರಾಜ್ಯ ಸರ್ಕಾರ ಗೌರವಿಸಬೇಕು. ನಿರಪರಾಧಿ, ಕನ್ನಡದ ಉಳಿವಿಗಾಗಿ ಹೋರಾಟ ಮಾಡುವ ವ್ಯಕ್ತಿಗಳನ್ನು ಬಂಧಿಸುವ ಕ್ರಮ ಸಮರ್ಥನೀಯವಲ್ಲ. ಆದಕಾರಣ ಕನ್ನಡಕ್ಕಾಗಿ ಹೋರಾಡುತ್ತಿರುವ ವ್ಯಕ್ತಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು.ನಾಡ ಭಾವುಟವನ್ನು ಸುಟ್ಟು ಹಾಕಿದ ಆರೋಪಿಗಳನ್ನು ಈ ತಕ್ಷಣವೇ ಬಂದಿಸಿ, ಕಠಿಣಾತಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು, ಕನ್ನಡ ಧ್ವಜಕ್ಕೆ ಅಪಮಾನ ಮಾಡಿರುವ ಘಟನೆ ಅತ್ಯಂತ ದುಷ್ಕೃತ್ಯ. ಧ್ವಜವನ್ನು ಸುಟ್ಟು ಹಾಕಿ ವಿಕೃತಿ ಮೆರೆದಿರುವುದು ನೀಚ,ಹೇಯ ಕೃತ್ಯ. ಅಖಂಡ ಕರ್ನಾಟಕದ ಅಸ್ಮಿತೆ ಸಾರುವ ನಮ್ಮ ಧ್ವಜದ ವಿಚಾರದಲ್ಲಿ ಈ ರೀತಿಯ ಘಟನೆ ಸಹಿಸಲು ಸಾಧ್ಯವಿಲ್ಲ.ಕನ್ನಡ ಧ್ವಜ ಕನ್ನಡಿಗರ ಸ್ವಾಭಿಮಾನದ ಸಂಕೇತ. ಕನ್ನಡ ಧ್ವಜಕ್ಕೆ ಅಪಮಾನವಾದರೆ, ಅದು ಕರ್ನಾಟಕದ ಅಸ್ಮಿತೆಗೆ ಧಕ್ಕೆಯಾದಂತೆ. ಇಂತಹ ಪವಿತ್ರ ಧ್ವಜವನ್ನು ಸುಟ್ಟಿರುವುದು ಯಾರೂ ಸಹಿಸಲಾಗದು.ಆದಕಾರಣ ಈ ವಿಚಾರವನ್ನು ಅತ್ಯಂತ ಗಂಭೀರವಾಗಿ ಕರ್ನಾಟಕ ಸರಕಾರ ಪರಿಗಣಿಸಬೇಕು. ಪರಿಗಣಿಸುವ ಮೂಲಕಕರುನಾಡ ವಿರೋಧಿಗಳಾದ ಎಮ್.ಇ. ಎಸ್.ಪುಂಡರ ಮದವನ್ನು ಕೊನೆಗಾಣಿಸಿ, ಇವರ ಮೇಲೆ ಸೂಕ್ತ ಕ್ರಮ ಕೈಗೊಂಡು, ಗಡಿ ಪಾರು ಮಾಡಬೇಕು.ಈ ಮೂಲಕ ಕನ್ನಡವನ್ನು ಉಳಿಸುವ ದಿಕ್ಕಿನಲ್ಲಿ ರಾಜ್ಯ ಸರ್ಕಾರ ಸೂಕ್ತ ಹೆಜ್ಜೆ ಇಡಲೇಬೇಕು.

ಸನ್ನಡತೆಯ ಜೀವನ – ಸನ್ನಡತೆಯೆಂಬುದು ಒಂದು ವಿಶೇಷ ಒಳ್ಳೆಯ ಗುಣ ಲಕ್ಷಣ ಹೊಂದಿರುವ, ಹೊಂದಿದ ವ್ಯಕ್ತಿ, ಆತ ತಾನಾಗಿಯೂ ಹಾಗೂ ತನ್ನ ಮೂಲಕವೂ ಸರ್ವವಿಧದಲ್ಲೂ ಉತ್ತಮ ಮನುಷ್ಯನಾಗಿರುವ ವ್ಯಕ್ತಿತ್ವ ಅವನಲ್ಲಿ ಕಾಣುತ್ತವೆ.

ಬಾಹ್ಯ ಶುಚಿತ್ವ ಅಷ್ಟೇ ಅಲ್ಲ,ಅಂತರಂಗದ ಶುಚಿತ್ವ ಕೂಡ ಅಷ್ಟೇ ಮುಖ್ಯ. ಅಹಿಂಸೆ ಮತ್ತು ಇತರ ಸುಗುಣಗಳ ಮೂಲಕ

ನಿಸ್ವಾರ್ಥ ಜೀವನ ನಾವೆಲ್ಲರೂ ವೃದ್ಧಿಗೊಳಿಸಿಕೊಳ್ಳಬೇಕು. ಅಮಲೇರಿಸುವ ಪದಾರ್ಥಗಳಿಂದ ದೂರವಿರುವುದ್ದು, ಆಂತರಿಕ ಶುಚಿತ್ವವನ್ನು ಸಾಧಿಸುವುದು ಕಲಿಯಬೇಕು.ಸರ್ವರ ಬಗ್ಗೆಯೂ, ಸರ್ವ ವಿಷಯಗಳ ಬಗ್ಗೆಯೂ ಗೌರವದ ಭಾವನೇ ಹೊಂದಬೇಕು. ಯಾವುದೇ ಜೀವಿಯನ್ನು ಹಿಂಸೆ ಮಾಡಬಾರದು ಮತ್ತು ಜೀವಕ್ಕೇ ಆಗಲೀ, ಭಾವನೆಗಳಿಗೇ ಆಗಲೀ, ಯಾವುದೇ ವಿಧವಾದ ನೋವನ್ನು ಉಂಟುಮಾಡಬಾರದು. ಹಿರಿಯರನ್ನು ಮತ್ತು ಗುರುಗಳನ್ನು ಪೂಜ್ಯಭಾವದಿಂದ ಕಾಣಬೇಕು. ಪೂಜ್ಯಭಾವ ಹೊಂದುವಂತಹ ಗುಣ ಮತ್ತು ನಿಸ್ವಾರ್ಥದಿಂದ ಮತ್ತೊಬ್ಬರಿಗೆ ಪ್ರೀತಿ ಹಂಚಬೇಕು. ಅದೇ ರೀತಿ ಪ್ರಮಾಣಿಕತೆ ಪ್ರತಿ ವ್ಯಕ್ತಿಯಲ್ಲಿಯೂ ಇರಬೇಕು ಜೊತೆಗೆ ಸ್ವಯಂ ತನ್ನೊಂದಿಗೂ, ತನ್ನ ಕುಟುಂಬದೊಂದಿಗೂ,ತನ್ನಸ್ನೇಹಿತರೊಂದಿಗೂ ಮತ್ತು ಇಡೀ ಮನುಜಕುಲದೊಂದಿಗೂ ಪ್ರಾಮಾಣಿಕವಾಗಿ ಹಾಗೂ ವಿಶ್ವಾಸದಿಂದ ವರ್ತಿಸುವುದು ಕಲಿಯಬೇಕು. ಸದುದ್ದೇಶ – ಮಾನಸಿಕ ಮತ್ತು ಸಮಚಿತ್ತದಿಂದೊಡಗೂಡಿದ ನೈತಿಕ ಬೆಳವಣಿಗೆಗೆ ಬದ್ಧವಾಗಿರಬೇಕು, ನುಡಿದಂತೆ – ನಡೆಯುವುದು, ಇನ್ನೊಬ್ಬರಿಗೆ ನೋವಾಗದಂತೆ, ಉತ್ತೇಕ್ತೆಯಿಲ್ಲದಂತೆ, ಸತ್ಯದ ಪಥದಲ್ಲಿ ಸಾಗುವುದು.ಸಮಚಿತ್ತತೆ, ಅಥವಾ ಲಾಭಾಲಾಭಗಳನ್ನು, ಹೊಗಳಿಕೆ ಮತ್ತು ತೆಗಳಿಕೆಗಳನ್ನು, ಜಯಾಪಜಯಗಳನ್ನು ನಿರ್ಲಿಪ್ತತೆಯಿಂದ ಸ್ವೀಕರಿಸಲು ಕಲಿಯುವುದು ಆಗಬೇಕು. ತನಗೂ ಮತ್ತು ಇತರರಿಗೂ ಸಮಾನಭಾವವನ್ನೇ ತೋರ್ಪಡಿಸುವ ಗುಣ. ಸಮಚಿತ್ತತೆ ಸೌಜನ್ಯ, ಸಮಭಾವದ ಜೀವನ,ಸಕಲ ಜೀವಿಗಳನ್ನೂ ಲೇಸನ್ನೇ ಬಯಸುವ ಸನ್ನಡತೆ , ಶುದ್ಧಮನಸ್ಸಿನ ಶಾಂತಭಾವದ ದಯಾಮೂರ್ತಿ – ಯಾವುದೇ ಭ್ರಮೆ, ಮಂಕುತನ ಅಥವಾ ಕಿರಿಕಿರಿಗಳಿಂದ ದೂರ ಇರುವ ಮನಸ್ಥಿತಿಯ ಮೇಧಾವಿಯ ಗುಣಗಳನ್ನು ಹೊಂದಬೇಕು.

ಇನ್ನು ಪರೋಪಕಾರಿಯಾಗಿ ಸಕಲರಿಗೂ ಒಳ್ಳೆಯದು ಬಯಸುತ್ತಾ, ನಿಸ್ವಾರ್ಥ ಸೇವಾ ಕಾರ್ಯಗಳನ್ನು ಮಾಡುವುದು ಸೇರಿದಂತೆ ಹತ್ತು ಹಲವಾರು ಮೌಲ್ಯಾಧಾರಿತ ಜೀವನ ಕ್ರಮಗಳನ್ನು ಅಳವಡಿಸಿಕೊಂಡು ಸನ್ನಡತೆಯ ಜೀವನವನ್ನು ನಾವೆಲ್ಲರೂ ಸಾಗಿಸಬೇಕಾಗಿದೆ. ಈ ದಿಸೆಯಲ್ಲಿ ನಾವು ನಮ್ಮ ನಮ್ಮ ಹಠವನ್ನು ಬಿಟ್ಟು, ನಮ್ಮ ಅಹಂಕಾರವನ್ನು ತೇಜಿಸಿ, ಆದರ್ಶ ಮಾನವರಾಗಿ ಬದುಕೋಣ, ಇತರರಿಗೆ ಸ್ಫೂರ್ತಿಯಾಗಿ ಜೊತೆಗೆ ಮಾದರಿಯಾಗಿ ಬಾಳೋಣ.

ಶಿಕ್ಷೆ ಆಗಲೇಬೇಕು – ನೀಡಲೇಬೇಕು – ಪ್ರತಿಮೆಗಳನ್ನು ವಿರೂಪಗೊಳಿಸಿದ ಎಲ್ಲ ಕಿಡಿಗೇಡಿಗಳ ಮೇಲೂ ಗೂಂಡಾಕಾಯ್ದೆಯಡಿ ಪ್ರಕರಣ ದಾಖಲಿಸಿ ಶಿಕ್ಷಿಸಬೇಕು. ಈ ಕೂಡಲೇ ಕರ್ನಾಟಕದಲ್ಲಿ ಇಂತಹ ನಾಡ ದ್ರೋಹಿ ಸಂಘಟನೆಗಳು ನಿಷೇಧಿಸಬೇಕು. ಮತ್ತು ಸಂಘಟನೆಗಳ ಮುಖಂಡರನ್ನು ಗಡೀಪಾರು ಮಾಡಬೇಕು. ಬೆಳಗಾವಿಯಲ್ಲಿ, ಬೆಂಗಳೂರಿನಲ್ಲಿ ಮತ್ತು ರಾಜ್ಯದ ವಿವಿಧೆಡೆ ಬಂಧನಕ್ಕೆ ಒಳಗಾಗಿರುವ ಎಲ್ಲ ಕನ್ನಡಪರ ಕಾರ್ಯಕರ್ತರನ್ನೂ ಕೂಡಲೇ ಬಿಡುಗಡೆ ಮಾಡಬೇಕು.ಮಹಾರಾಷ್ಟ್ರದಲ್ಲಿ ಕನ್ನಡ ಬಾವುಟಕ್ಕೆ ಬೆಂಕಿ ಇಟ್ಟ, ಕನ್ನಡಿಗರ ಮೇಲೆ, ಕನ್ನಡಿಗರ ಆಸ್ತಿಪಾಸ್ತಿ ಮೇಲೆ ದಾಳಿ ನಡೆಸುತ್ತಿರುವ ಸಮಾಜ ದ್ರೋಹಿ ಶಕ್ತಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ ರಾಜ್ಯ ಸರ್ಕಾರ, ಕೇಂದ್ರ ಸರಕಾರದ ಮೇಲೆ ನಿರಂತರ ಒತ್ತಡ ಹಾಕಿಸಿ, ಆರೋಪಿಗಳಿಗೆ ಶಿಕ್ಷೆ ಆಗಲೇಬೇಕು – ನೀಡಲೇಬೇಕು.

ಕೊನೆಯ ಮಾತು :

ಬನ್ನಿ ಬಂದುಗಳೆ, ಎಲ್ಲರೂ ಒಗ್ಗಟ್ಟಿನಿಂದ, ಒಂದಾಗಿ, ಜತೆಯಾಗಿ. ನಾಡದ್ರೋಹಿ, ದೇಶದ್ರೋಹಿ, ಸಮಾಜಘಾತಕ ಶಕ್ತಿಗಳ ವಿರುದ್ಧ ನಿರ್ಣಾಯಕ ಹೋರಾಟ ನಡೆಸೋಣ. ನಮ್ಮ ನಾಡು, ಸಮಾಜ ದ್ರೋಹಿಗಳ ಬೀಡಾಗುವುದನ್ನು ತಪ್ಪಿಸೋಣ,

ಸನ್ನಡತೆಯನ್ನು ಅಳವಡಿಸಿಕೊಂಡು ಎಲ್ಲರೂ ನಮ್ಮವರೆಂದು ಭಾವಿಸೋಣ, ಒಂದೇ ಕುಟುಂಬದ ಕುಡಿಗಳೆಂದು ತಿಳಿದು

ಅಣ್ಣತಮ್ಮರಂತೆ ಬದುಕೋಣ.

ಎಚ್ಚರಿಕೆ ಮಾತು : ದ್ವೇಷ, ಹಗೆತನ, ಅಹಂಕಾರ, ಅಸೂಯೆ, ಮದ್, ಮತ್ಸರಗಳಿಗೆ ತಿಲಾಂಜಲಿ ನೀಡಿ, ನಾನು ನನ್ನದು ನನ್ನಿಂದ ಎನ್ನುವ ಮಾತುಗಳು ಖಂಡಿತಾ ಆಡದೇ, ಬೇಡವೇ ಬೇಡ, ಸೌಹಾರ್ದಯುತವಾಗಿ ಬಾಳೋಣ ಇತರರಿಗೆ ಬಾಳಲು ಸ್ವಚ್ಛಂದ ವಾತಾವರಣ ನಿರ್ಮಾಣ

ಮಾಡಿಕೊಡೋಣ.ಇದೆ ಮಾನವೀಯತೆಯ ಮೌಲ್ಯಧಾರಿತ ಮನುಷ್ಯತ್ವದ ಸನ್ನಡತೆಯ ಜೀವನ.

**ಲೇಖಕರು – ಸಂಗಮೇಶ ಎನ್ ಜವಾದಿ. ಸಾಹಿತಿ, ಪತ್ರಕರ್ತ, ಬೀದರ ಜಿಲ್ಲೆ.**

ಕರುನಾಡ ಕಂದ
ಸಂಪುಟ–1 | ಸಂಚಿಕೆ–5
ದಿನಾಂಕ: 01–01–2022 | ಪುಟಗಳು: 16

## ವಿಶ್ವಗುರು ಬಸವಣ್ಣನವರಿಗೆ ಅವಮಾನ : ಅಖಿಲ ಭಾರತ ವೀರಶೈವ ಮಹಾಸಭಾ ಖಂಡನೆ – ಪ್ರತಿಭಟನೆ



ಭದ್ರಾವತಿ: ಮಹಾ ಮಾನವತಾವಾದಿ, ಸಮಾನ ಸಮತೆಯ ಸಮಾಜ ನಿರ್ಮಾಣದ ಹರಿಕಾರ, ವಿಶ್ವ ಗುರು ಬಸವಣ್ಣನವರ ಭಾವಚಿತ್ರಕ್ಕೆ ಮಸಿ ಬಳೆದು ಅವಮಾನಿಸಿದ ಘಟನೆ ಸೋಮವಾರ ಖಾನಾಪೂರ ತಾಲ್ಲೂಕಿನ ಹಲಸಿ ಗ್ರಾಮದಲ್ಲಿ ನಡೆದಿರುವ ಘಟನೆ ಖಂಡಿಸಿ ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ತಾಲ್ಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ವಿಶ್ವ ಗುರು ಬಸವಣ್ಣನವರ ಭಾವಚಿತ್ರಕ್ಕೆ ಪುಂಡರು ಮಸಿ ಬಳೆದು ಅವಮಾನಿಸಿರುವುದು ಖಂಡನೀಯ. ಅಲ್ಲದೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನವರ ಪ್ರತಿಮೆ ಭಗ್ನಗೊಳಿಸಿರುವ ಕಿಡಿಗೇಡಿಗಳ ವಿರುದ್ಧವೂ ಸಹ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನಾ ನಿರತರು ಸರ್ಕಾರಕ್ಕೆ ಆಗ್ರಹಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಅಧ್ಯಕ್ಷೆ ನಂದಿನಿ ಮಲ್ಲಿಕಾರ್ಜುನ ನೇತೃತ್ವ ವಹಿಸಿದ್ದರು. ತಹಶೀಲ್ದಾರ್ ಆರ್. ಪ್ರದೀಪ್‌ರವರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಮಹಿಳಾ ಘಟಕದ ಅಧ್ಯಕ್ಷೆ ರೂಪ ನಾಗರಾಜ್, ಯುವ ಘಟಕದ ಅಧ್ಯಕ್ಷ ಮಂಜುನಾಥ್, ಜೇಡಿಕಟ್ಟೆ ಶ್ರೀ ಮರುಳಸಿದ್ದೇಶ್ವರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ಸಿದ್ದಲಿಂಗಯ್ಯ, ಮಹಾಸಭಾ ಉಪಾಧ್ಯಕ್ಷ ವಾಗೀಶ್, ಪ್ರಧಾನ ಕಾರ್ಯದರ್ಶಿ ಬಿ.ಎಸ್ ಮಹೇಶ್‌ಕುಮಾರ್, ಸಹ ಕಾರ್ಯದರ್ಶಿ ಬಾರಂದೂರು ಮಂಜುನಾಥ್, ನಿರ್ದೇಶಕ ಜಗದೀಶ್ ಪಾಟೀಲ್, ಮಹಿಳಾ ಘಟಕದ ಉಪಾಧ್ಯಕ್ಷೆ ಶೋಭಾ ಪಾಟೀಲ್, ಕಾರ್ಯದರ್ಶಿ ಕವಿತಾ ಸುರೇಶ್, ಜಿಲ್ಲಾ ನಿರ್ದೇಶಕಿ ಎಸ್. ಪೂರ್ಣಿಮಾ, ಯುವ ಘಟಕದ ಉಪಾಧ್ಯಕ್ಷರಾದ ರುದ್ರೇಶ್, ಮಹಾದೇವ, ಕಾರ್ಯದರ್ಶಿ ಆನಂದ್, ಸಹ ಕಾರ್ಯದರ್ಶಿ ಚೇತನ್, ಖಜಾಂಚಿ ರಮೇಶ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

## 59ನೇ ಅಖಿಲ ಭಾರತ ಗೃಹರಕ್ಷಕ ದಳದ ದಿನಾಚರಣೆ



ಭದ್ರಾವತಿ: ಶಿವಮೊಗ್ಗ ನಗರದ ಡಿಎಆರ್ ಸಭಾಂಗಣದಲ್ಲಿ 59ನೇ ವರ್ಷದ ಅಖಿಲ ಭಾರತ ಗೃಹರಕ್ಷಕ ದಳದ ದಿನಾಚರಣೆ ಕಾರ್ಯಕ್ರಮವನ್ನು ಡಿಎಆರ್ ಡಿವೈಎಸ್ಪಿ ಕೃಷ್ಣಮೂರ್ತಿ ಉದ್ಘಾಟಿಸಿದರು.

ಮಾಜಿ ಉಪ ಸಮಾದೇಷ್ಟರಾದ ಬಸವಣ್ಣಪ್ಪ ಪಾಟೀಲ್ ರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಎರಡನೇ ಮಹಾಯುದ್ಧದಲ್ಲಿ ಬಹಳಷ್ಟು ಜನರು ಅಸುನಿಗಿದರು. ಅವರಲ್ಲಿ ಹಲವು ಜನರ ಪ್ರಥಮ ಚಿಕಿತ್ಸೆಯ ಆರೈಕೆಯ ಮೂಲಕ ಜನರ ಪ್ರಾಣವನ್ನು ಉಳಿಸುವ ನಿಟ್ಟಿನಲ್ಲಿ ನಿಷ್ಕಾಮ ಸೇವಾ ಸಂಸ್ಥೆ ಅಸ್ಥಿತ್ವಕ್ಕೆ ಬಂತು. ಅಂದಿನ ಬ್ರಿಟಿಷ್ ಗೌವರ್ನರ್ ಆಗಿದ್ದ ಮುರಾರ್ಜಿ ದೇಸಾಯಿ ರವರು ಸ್ವಾತಂತ್ರ್ಯ ನಂತರ 1962 ರಲ್ಲಿ ಪ್ರಕೃತಿ ವಿಕೋಪ, ಪ್ರವಾಹ ಹಾಗೂ ತುರ್ತು ಸಂದರ್ಭದಲ್ಲಿ ಸಾರ್ವಜನಿಕರ ಆಸ್ತಿ ಪಾಸ್ತಿಗಳ ರಕ್ಷಣೆಗಾಗಿ ರಚನೆಗೊಂಡ ನಿಷ್ಕಾಮ ಸೇವಾ (ನಿಸ್ವಾರ್ಥ ಸೇವೆ) ತಂಡವೇ ಗೃಹರಕ್ಷಕದಳ. ತುರ್ತು ಸಂದರ್ಭಗಳಲ್ಲಿ ಪ್ರಕೃತಿ ವಿಕೋಪಗಳಾದ ಭೂಕಂಪ, ಪ್ರವಾಹ, ಮಾನವ ನಿರ್ಮಿತ ಗಲಾಟೆ, ಕರ್ಫ್ಯೂ, ಸಾರ್ವಜನಿಕರ ಆಸ್ತಿ ಪಾಸ್ತಿಗಳ ರಕ್ಷಣೆಗಾಗಿ ನಿಸ್ವಾಥ–ರ್ವಾಗಿ ಗೃಹರಕ್ಷಕರು ಸೇವೆ ಸಲ್ಲಿಸುವರು ಎಂದು ಹೇಳಿದರು.

59ನೇ ಅಖಿಲ ಭಾರತ ಗೃಹರಕ್ಷಕ ದಳದ ದಿನಾಚರಣೆ ಅಂಗವಾಗಿ ಸಂಸ್ಥೆಗೆ ಸೇರಿ 25 ವರ್ಷ ಪುರೈಸಿದವರಿಗೆ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು. ಜಿಲ್ಲೆಯ ಎಲ್ಲಾ ಘಟಕದ ಘಟಕಾಧಿಕಾರಿಗಳಿಗೆ ನೆನೆಪಿನ ಕಾಣಿಕೆ ನೀಡಿ ಹಾಗೂ ವೃತ್ತಿಪರ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ, ಪದಕ ಪಡೆದ ಎಲ್ಲರಿಗೂ ಗೌರವಿಸಲಾಯಿತು. ಜಿಲ್ಲಾ ಸಮಾದೇಷ್ಟರು ಹಾಗೂ ಜಿಲ್ಲಾ ಹೆಚ್ಚುವರಿ ರಕ್ಷಣಾಧಿಕಾರಿ ಟಿ.ಶೇಖರ್ ರವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಮಾಜಿ ಸಮಾದೇಷ್ಟರಾದ ಎಸ್.ಶಿವಕುಮಾರ್, ಬಂಧಿಖಾನೆಯ ಅಧಿಕಾರಿಗಳು, ಜಿಲ್ಲಾ ಸಹಾಯಕ ಬೋಧಕ ಹೆಚ್.ದಿನೇಶ್, ಜಿಲ್ಲೆಯ ಎಲ್ಲಾ ಘಟಕಾಧಿಕಾರಿಗಳು, ಜಿಲ್ಲಾ ಕಚೇರಿಯ ಅಧಿಕಾ–ರಿಗಳು ಮತ್ತು ಸಿಬ್ಬಂದಿ, ಎಲ್ಲಾ ಘಟಕಗಳ ಓಅಔ ಅಧಿಕಾರಿಗಳು ಹಾಗೂ ಗೃಹರಕ್ಷಕರು ಉಪಸ್ಥಿತರಿದ್ದರು.

## ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಅನ್ನಧಾತನ ತಲೆ ಕೆಡಸಿದ ಕೊಳೆಯುವ ರೋಗ...

ರೈತರು ಪ್ರತಿ ವರ್ಷ ಒಂದಿಲ್ಲದೆ ಒಂದು ಸಂಕಷ್ಟಕ್ಕೆ ಈಡಾಗುತ್ತಾರೆ. ದುರಾದೃಷ್ಟವಶಾತ್ ಈ ವರ್ಷವು ಅಕಾಲಿಕ ಮಳೆಯಿಂದ ರೈತರು ತತ್ತರಿಸಿಹೋಗಿದ್ದಾರೆ. ಮತ್ತೇ ಇದೀಗ ರೈತ ಸಮುದಾಯ ಕೊಳೆಯುವ ಹಾಗೂ ಬೆಂಕಿರೋಗದ ಬಾಧೆಗೆ ಸಿಲುಕಿ ಪೆಟ್ಟು ಮೇಲೆ ಪೆಟ್ಟು ತಿನ್ನುತ್ತಿದ್ದಾರೆ. ಹೌದು ಕುಂದಗೋಳ ತಾಲೂಕಿನಾದ್ಯಂತ ಬೆಳೆದ ಮೆಣಸಿನಕಾಯಿ ಬೆಳೆಗೆ ಕೊಳೆಯುವ ರೋಗ ಮತ್ತು ಬೆಂಕಿರೋಗ ಕಾಡುತ್ತಿದೆ. ಅಂದರೆ ಮೆಣಸಿನ ಕಾಯಿಗಳಿಗೆ ಬೆಂಕಿ ಇಂದ ಸುಟ್ಟ ತರಹ ಆಗಿ ನಂತರ ಮೆಣಸಿನ ಕಾಯಿ ಅಲ್ಲೇ ಒಣಗಿ ಉದರಿಬಿಳುತ್ತದೆ. ಆ ಮೆಣಸಿನಕಾಯಿ ಯಾವ ಉಪಯೋಗಕ್ಕೂ ಬರುವದಿಲ್ಲ. ಮೊನ್ನೆ ತಾನೆ ಅಕಾಲಿಕ ಮಳೆಯಿಂದ ಚೆತರಿಕೊಳ್ಳುತ್ತಿರುವ ರೈತನಿಗೆ ಇ ರೋಗದ ಬಾದೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ. ಇನ್ನೊಂದು ತಿಂಗಳಲ್ಲಿ ಮೆಣಸಿನ ಫಸಲು ಕೈಗೆ ಬರುತ್ತದೆ ಎಂದು ಕುಷಿಯಲ್ಲಿದ್ದ ರೈತನಿಗೆ ಇ ರೋಗದಿಂದ ನಿರಾಸೆ ಮತ್ತು ಸಂಕಟ ಉಂಟಾಗಿದೆ.

ಕೆಂಪು ಮೆಣಸಿನಕಾಯಿಗೆ ಎರಡು ವರ್ಷದಿಂದ ಬಂಗಾರದ ಬೇಡಿಗೆ ಇದೆ, ಕಳೆದ ವರ್ಷ ಕ್ವಿಂಟಾಲ್ ಗೆ ಸುಮಾರು ಇಪ್ಪತ್ತುಸಾವಿರ ರೂಪಾಯಿ ಗಿಂತಲೂ ಅಧಿಕ ಬೆಲೆಯಲ್ಲಿ ಮೆಣಸಿನ ಕಾಯಿಗಳು ಮಾರಾಟವಾಗಿವೆ. ಆದ್ದರಿಂದ ರೈತರು ಈ ಭಾರಿ ಮೆಣಸಿನ ಕಾಯಿ ಬೆಳೆಯನ್ನು ಪ್ರತಿ ವರ್ಷಕ್ಕಿಂತಲೂ ಹೆಚ್ಚು ಬೆಳೆದಿದ್ದಾರೆ.ಈ ವರ್ಷವೂ ಮೆಣಸಿನಕಾಯಿಯ ಬೆಲೆ ಬಂಗಾರದ ಬೆಲೆಯಂತೆಯೇ ಇದೆ, ಇಂದಿನ ಮಾರುಕಟ್ಟೆಯ ಬೆಲೆಯ ಪ್ರಕಾರ ಕೆಂಪು ಮೆಣಸಿನ ಕಾಯಿ ಒಂದು ಕ್ವಿಂಟಾಲ್ಗೆ ನಲವತ್ತು ಸಾವಿರ ರೂಪಾಯಿ ಆಗಿದೆ. ಕಷ್ಟ ಪಟ್ಟು ಮುಂಗಾರಿನಲ್ಲಿ ನಾಟಿ ಮಾಡಿ ತಾಯಿ ಪುಟ್ಟ ಮಗುವನ್ನು ಪೋಷಿಸಿದಂತೆ ರೈತರು ಸಸಿಗಳನ್ನು ಬೆಳೆಸುತ್ತಾರೆ. ಕೈಗೆ ಫಸಲು ಬರುವ ಸಮಯದಲ್ಲಿ ಈ ರೋಗದ ಬಾಧೆಯಿಂದ ಬೆಳೆಗಳು ಭಾಗಶಃ ನಾಶವಾಗಿದವೆ, ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿ ಕುಗ್ಗಿ ಹೋಗಿದ್ದಾರೆ.

ಬ್ಯಾಡಗಿ ಕೃಷಿ ಮಾರುಕಟ್ಟೆಗೆ ಈ ಭಾಗದಿಂದ ಅಂದರೆ ಕುಂದಗೋಳ, ಅಣ್ಣಿಗೇರಿ, ಗದಗ, ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕುಗಳಿಂದ ಮೆಣಸಿನಕಾಯಿ ಏತೆಚ್ಚವಾಗಿ ರವಾನೆ ಆಗುತ್ತದೆ. ಇಲ್ಲಿಯ ಮೆಣಸಿನಕಾಯಿಗಳು ಬ್ಯಾಡಗಿ ಕೃಷಿ ಮಾರುಕಟ್ಟೆಯಲ್ಲಿ ತನ್ನದೇ ಆದ ಬೇಡಿಕೆ ಪಡೆದಿವೆ. ಮಾರುಕಟ್ಟೆ ವ್ಯಾಪಾರಸ್ಥರು ಇ ಭಾಗದ ಕಡೆಯಿಂದ ಬರುವ ಮೆಣಸಿನ ಕಾಯಿಗೆ ಬಕ ಪಕ್ಷಿಯಂತೆ ಕಾದು ಕುಳಿತಿರುತ್ತಾರೆ. ಏಕೆಂದರೆ ಇಲ್ಲಿಯ ಮೆಣಸಿನಕಾಯಿ ಹೆಚ್ಚಿನ ಖಾರ ಹಿಡಿದು ಕೊಂಡು, ಕಡು ಕೆಂಪು ಬಣ್ಣವನ್ನು ಹೊಂದಿ ಸ್ವಾದಿಷ್ಟಕರ ವಾಗಿರುತ್ತದವೆ. ಹಾಗಾಗಿ ಇ ಪ್ರದೇಶದ ಮೆಣಸಿನ ಕಾಯಿಗಳು ಬ್ಯಾಡಗಿ ಮೆಣಸಿನಕಾಯಿ ಎಂಬ ಹೆಗ್ಗುರುತಿಗೆ ಪಾತ್ರವಾಗಿವೆ.



ಪ್ರತಿ ವರ್ಷ ಹುಬ್ಬಳ್ಳಿಯ ಮೂರುಸಾವಿರ ಮಠದ ಮೈದಾನದಲ್ಲಿ ನಡೆಯುವ ಮೆಣಸಿನಕಾಯಿ ಮೇಳದಲ್ಲಿ ಇ ಪ್ರದೇಶದ ಮೆಣಸಿನಕಾಯಿಗಳು ತನ್ನದೇ ಆದ ಛಾಪು ಮೂಡಿಸಿವೆ. ಇಲ್ಲಿಯ ಮೆಣಸಿನ ಕಾಯಿಗಳನ್ನು ಕೊಳ್ಳಲು ಜನರು ಮುಗಿಬೀಳುತ್ತಾರೆ, ಹೋಟೆಲ್ಲಿನ ಮಾಲೀಕರು ಅದರಲ್ಲೂ ಸಾವಜಿ ಹೋಟೆಲ್ಲಿನವರು ತಮ್ಮ ಹೋಟೆಲಿನ ಖಾರಕ್ಕೊಸ್ಕರ ಕ್ವಿಂಟಾಲ್ ಗಟ್ಟಲೆ ಖರೀದಿಸುತ್ತಾರೆ. ಆದರೆ ಈ ವರ್ಷ ಅಕಾಲಿಕ ಮಳೆ ಮತ್ತು ಇ ರೋಗದ ಭಾದೆಯಿಂದ ಎಲ್ಲರಿಗೂ ಖಾರದ ಬೆಲೆಯ ರುಚಿ ತಟ್ಟಬಹುದು.

ಅಕಾಲಿಕ ಮಳೆಯಿಂದ ಮತ್ತು ರೋಗದ ಬಾಧೆಯಿಂದ ಸರಿ ಸುಮಾರು ಪ್ರತಿಶತ 65 ರಿಂದ 70 ರಷ್ಟು ಮೆಣಸಿನ ಬೆಳೆ ಹಾನಿಗೊಳಗಾಗಿದೆ. ಇದನ್ನು ವಿಮಾ ಕಂಪನಿಗಳು ಸರ್ವೇ ಯನ್ನು ಆರಂಭಿಸಿವೆ. ರೈತರು ಕೃಷಿಯಲ್ಲಿ ಯಾವುದಾದರೂ ಒಂದು ಸಂಕಷ್ಟಕ್ಕೆ ಗುರಿಯಾಗಿ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ವೆಸಾಮಾನ್ಯ ವಾಗಿದೆ.

ಪ್ರವೀಣ್ ಎಸ್ ಕಾಲವಾಡಮಠ
ಕುಂದಗೋಳ

* ರೈತ ಬಸಣ್ಣ ಮಜ್ಜಿಗುಡ್ಡ – ಸಾಲಾ ಸುಲಾ ಮಾಡಿ ನಾವು ಭೂಮಿ ತಾಯಿಯನ್ನು ನಂಬಿ ಬಿತ್ತನೆ ಮಾಡಿದ್ದೆವು. ಪೀಕೂ ಚೆನ್ನಾಗಿ ಬೆಳೆದಿದ್ದು ಆದ್ರೆ ಈಗ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ ಎಂದರು

* ರೈತ ಮಲ್ಲೇಶಪ್ಪ ಬಿಸೇರೊಟ್ಟಿ – ನಮಗೆ ಮೆಣಸಿನ ಕಾಯಿ ಎಂಬುದು ಅತಿ ಅಮೂಲ್ಯ ವಾದ ಬೆಳೆಯಾಗಿದೆ ಇದರಿಂದ ರೈತರು ತಮ್ಮ ತಮ್ಮ ಕಷ್ಟಗಳನ್ನು ಪರಿಹಾರ ಮಾಡಿಕೊಳ್ಳುತ್ತಾರೆ. ಇದು ಲಾಭದ ಬೆಳೆ ಆದರೆ ಅಕಾಲಿಕ ಮಳೆ ಇಂದ ಈ ರೋಗ ಉಲ್ಬಣಿಸಿದೆ. ಮತ್ತು ರೈತರ ಬದುಕು ಸಂಕಸ್ಟಕ್ಕೆ ಸಿಲುಕಿದೆ ಎಂದರು.

* ಔಷಧ ವಿತರಕರು ಚನ್ನಬಸಯ್ಯ ದುಂಡೈನವರಮಠ – ಅತಿಯಾದ ಮತ್ತು ಅಕಾಲಿಕ ಮಳೆ ಇ ರೋಗಕ್ಕೆ ಕಾರಣ ಮುಖ್ಯವಾಗಿ ಮೆಣಸಿನ ಕಾಯಿ ಬೆಳೆಗೆ ಸಾಧಾರಣ ತೇವಾಂಶ ಇರಬೇಕು. ಅತಿ ತೇವಾಂಶದಿಂದ ಬೆಳೆ ಕೊಳೆಯಲು ಆರಂಭಿಸುತ್ತದೆ. ಇದಕ್ಕೆ ಔಷಧ ಸಿಂಪಡಣೆ ಮಾಡಬೇಕು ಆದರೆ ಅದು ತೀವ್ರವಾದ ಪ್ರಭಾವ ಬೀರುವುದಿಲ್ಲ.ಇದಕ್ಕೆ ಪ್ರಕೃತಿಯೇ ಸಹಾಯ ಮಾಡಬೇಕು ಎಂದರು.

**–ಪ್ರವೀಣ್ ಕಾಲವಾಡಮಠ**

## ಶಿಥಿಲಾವಸ್ಥೆಗೆ ತಲುಪಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಮಿನಿ ಕಲ್ಯಾಣ ಮಂಟಪ ಭವನ

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕಲ್ಲೂರ ರೋಡ್ ಗ್ರಾಮದ ಡಾ. ಬಿ.ಆರ್. ಅಂಬೇಡ್ಕರ್ ಅವರ ಮಿನಿ ಕಲ್ಯಾಣ ಮಂಟಪ ಭವನ ಶಿಥಿಲಾವಸ್ಥೆಗೆ ತಲುಪಿದೆ, ಅನೇಕ ವರ್ಷಗಳಿಂದ ಈ ಬಗ್ಗೆ ಗಮನ ಹರಿಸುತ್ತಿಲ್ಲ ಅದರಿಂದ ಇಲ್ಲಿನ ಸಮುದಾಯದವರಿಗೆ ಮದುವೆ,ಇತರೆ ಕಾರ್ಯಕ್ರಮ, ಸಮಾರಂಭ ಮಾಡಲು ತುಂಬಾ ತೊಂದರೆ ಆಗುತ್ತಿದೆ. ಇದರ ಕು–ರಿತು 4–5 ಬಾರಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಸಮಸ್ಯೆ ಹೇಳಿದರೂ ಬಗೆಹ–ರಿಸುತ್ತಿಲ್ಲ. ಸಂಬಂಧಿಸಿದ ಅಧಿಕಾರಿಗಳು

ಈ ಸಮಸ್ಯೆಯನ್ನು ತಕ್ಷಣವೇ ಪರಿಹ–ರಿಸಬೇಕು . ಎಂದು ಮಹಾನಾಯಕ ಬಿ.ಆರ್. ಅಂಬೇಡ್ಕರ್ ಸಂಘದ ಮೂಲಕ ಆಗ್ರಹಿಸಿದ್ದಾರೆ.



ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ಪರಿಶಿಷ್ಟ ಜಾತಿ–ಪಂಗಡದ ನಿರುದ್ಯೋಗಿ ಯುವಕ ಯುವತಿಯರಿಗೆ ವಿವಿಧ ಸ್ವಯಂ ಉದ್ಯೋಗ



ಏನಿದು ಸಮೃದ್ಧಿ ಯೋಜನೆ!?

ದೇಶದಲ್ಲೆ ಪ್ರಪ್ರಥಮ ಬಾರಿಗೆ ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು (ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮವು, ಸಮೃದ್ಧಿ ಯೋಜನೆಯಡಿಯಲ್ಲಿ 2018ರಲ್ಲಿ ವಿನೂತನ ರೀತಿಯ ಫ್ಲಗ್ ಅಂಡ್ ಪ್ಲೇ ಮಾಡಲ್ ಮಾದರಿಯ ಮೂಲಕ ಉದ್ಯಮಶೀಲತೆ ಅಭಿವೃದ್ಧಿಯನ್ನು ಉತ್ತೇಜಿಸಲು ಸಮೃದ್ಧಿ ಯೋಜನೆಯನ್ನು ಶುರ ುಮಾಡಲಾಯಿತು ಮುಖ್ಯವಾಗಿ ಯುವಕರಲ್ಲಿ ಮುಖ್ಯವಾಗಿ ಪರೀಶಿಷ್ಟ ಜಾತಿ ನಿರುದ್ಯೋಗಿ ಯುವಕ –ಯುವತಿಯರಿಗೆ ವಿವಿಧ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ಹಾಗೂ ಲಾಭದಾಯಕವಾಗಿ ನಡೆಸಲು ಅಗತ್ಯವಾದ ಉದ್ಯಮಶೀಲತಾ ತರಬೇತಿ / ವೃತ್ತಿ ಕೌಶಲ್ಯ ತರಬೇತಿಯನ್ನು ನೀಡಿ ಮಾರುಕಟ್ಟೆ ವ್ಯವಸ್ಥೆಯೊಂದಿಗೆ ಘಟಕಗಳನ್ನು ಸೃಷ್ಟಿಸಲು ವ್ಯವಸ್ಥೆ ಮಾಡಲಾಗುತ್ತದೆ)

ಈ ಯೋಜನೆಯ ಮುಖ್ಯ ಭಾಗವಾಗಿ ರಾಜ್ಯದ್ಯಂತ ವಿವಿಧ 2 ಟೈರ್ ಮತ್ತು 3 ಟೈರ್ ಜಿಲ್ಲೆಗಳಿಂದ ಆಯ್ಕೆಯಾದ ಫಲಾನುಭವಿಗಳು ಮತ್ತು ಫ್ರಾಂಚೈಸರ್ಗಳಿಂದ ಸಕಾರಾತ್ಮಕ ಪ್ರತಿಕ್ರಿಯೆ ಸಿಕ್ಕಿದೆ.

40 ಕ್ಕೂ ಅಧಿಕ ಫ್ರಾಂಚೈಸರ್ಗಳೊಂದಿಗೆ ಇಲಾಖೆಯು ಸುಮಾರು 900 ಮಳಿಗೆಗಳನ್ನು ಕಾರ್ಯಗತಗೊಳಿಸಿದ್ದು ಸುಮಾರು 350 ಮಳಿಗೆಗಳು ಪೈಪ್‌ಲೈನ್‌ನಲ್ಲಿವೆ., ರಾಜ್ಯದ್ಯಂತ 1250 ಮಳಿಗೆಗಳನ್ನು ಸ್ಥಾಪಿಸುವಲ್ಲಿ ಹೊಸ ಬೆಂಬಲವನ್ನು ತಲಪಿದೆ.

ಈಗಾಗಲೇ ಈ ಯೋಜನೆಯ ಮೂಲಕ ಸಾವಿರಾರು ಯುವಕರು ಪ್ರಯೋಜನ ಪಡೆದಿರುವುದು ಸುಳ್ಳಲ್ಲ. ಮುಖ್ಯವಾಗಿ ಹೇಳುವುದಾದರೆ ನಂದಿನಿ, ಪಾರಾಗಾನ್, ಪ್ರೆಸ್ಟಿಜ್ ಶೋ ರೂಂ. ಹಂಪ್ಟಿ ಡಂಪ್ಟಿ ಮಕ್ಕಳ ಬಟ್ಟೆ ಮಳಿಗೆ, ಚೆರಿ ಏಜನ್ಸಿ, ಸ್ಪಿಡ್ ಫೋರ್ಸ್ ( 2 ವೀಲರ್ ಮತ್ತು ಸಲಕರಣೆಗಳ ಮಾಳಿಗೆ), ಫಿಜಿಟಾಲ್ (ಎಲೆಕ್ಟ್ರಾನಿಕ್ ಶೋರೂಂ )

ಹೇಗೆ ನಡೆಯಿತು ಫಲಾನುಭವಿಗಳ ಹೆಸರು ಮತ್ತು ಆಯ್ಕೆ ಪ್ರಕ್ರಿಯೆ

ಒಟ್ಟು 30000 ಯುವಕ ಯುವತಿಯರು ಈ ಯೋಜನೆಗೆ ಅರ್ಜಿ ಸಲ್ಲಿಸಲಾಗಿತ್ತು ಇದರಲ್ಲಿ ಒಟ್ಟು 20000 ರಾಜ್ಯದ್ಯಂತ ಫಲಾನುಭವಿಗಳ ಮೊದಲ ಮಟ್ಟದ ಹೆಸರು ಸಿದ್ಧಗೊಳಿಸಲಾಯಿತು. ಇದಾದ ನಂತರ ಇಲಾಖೆಯು ಅರ್ಜಿದಾರರ ವಯಸ್ಸು, ವಿದ್ಯಾಭ್ಯಾಸ, ಆರ್ಥಿಕ ಸಬಲತೆ ಒಳಗೊಂಡಂತೆ ಇತರ ಆಯ್ಕೆ ಮಾನದಂಡದ ಮೇಲೆ ಒಟ್ಟು 1500 ಫಲಾನುಭವಿಗಳಿಗೆ ಇಲಾಖೆಯಿಂದ 10 ಲಕ್ಷ ರೂಪಾಯಿ ಅನುದಾನ ನೀಡಲಾಯಿತು.

ಮುಖ್ಯವಾಗಿ ಈ ಅನುದಾನದ ಹಣ ಅರ್ಜಿದಾರರು ತಾವು ನಡೆಸುವ ವಿವಿಧ ರೀತಿಯ ಫ್ರಾಂಚೈಸಿಗಳ ಒಳಾಂಗಣ ವಿನ್ಯಾಸ, ಬೇಕಾಗುವಂತಹ ಸಾಮಾಗ್ರಿಗಳಿಗೆ ಇಲಾಖೆಯಿಂದ ಆ ಫ್ರಾಂಚೈಸಿಗಳಿಗೆ ಹಣ ಪಾವತಿ ಮಾಡಲಾಗಿದ್ದು ಇದು ಪಾರದರ್ಶಕವಾಗುವುದರೊಂದಿಗೆ ಎಲ್ಲಿಯೂ ಅವ್ಯವಹಾರವಾಗುವುದಿಲ್ಲ ಅನ್ನುವ ನಿಟ್ಟಿನಲ್ಲಿ ಈ ಯೋಜನೆ ಜಾರಿಗೆ ತಂದಿದ್ದು

ಸಮೃದ್ಧಿ ಯೋಜನೆ ಫಲಾನುಭವಿಗಳು ಏನು ಹೇಳುತ್ತಾರೆ

ಇಂದು ಓದಿದ ಎಲ್ಲರಿಗೂ ಕೆಲಸ ಸಿಗುವುದು ಕಷ್ಟವಿರುವ ಈಗಿನ ಕಾಲದಲ್ಲಿ ಈ ಯೋಜನೆಯು ಯುವಕರ ಬಾಳಲ್ಲಿ ಆಶಾಕಿರಣವಾಗಿರುವುದು ಸುಳ್ಳಲ್ಲ, ಇವರ ಹೆಸರು ಸಿದ್ದಾರ್ಥ ಓದಿದ್ದು ಬಿಎಸ್‌ಸಿ ಮತ್ತು ಎಂಎಡ್ ವಿದ್ಯಾವಂತರಾದರು ಎಷ್ಟೊ ಕಡೆ ಸಂದರ್ಶನ ಕೊಟ್ಟರು ಒಂದಿಲ್ಲ ಒಂದು ಕಾರಣದಿಂದ ಅವರಿಗೆ ಕೆಲಸ ಆಗಲಿಲ್ಲ,ಮನೆಯಲ್ಲಿ ಬಡತನ ಆಗ 2018 ರಲ್ಲಿ ಸ್ನೇಹಿತರ ಒತ್ತಾಯದ ಮೇರೆಗೆ ಆನ್‌ಲೈನ್ ಮೂಲಕ ಅರ್ಜಿ ಹಾಕಿದ್ದು ಅಷ್ಟೆ ಮುಂದೆ ನಡೆದಿದ್ದು ಎಲ್ಲವೂ ವಿಸ್ಮಯ ಎಂದು ಹೇಳುತ್ತಾರೆ.

ಸಾವಿರಾರು ಅರ್ಜಿದಾರರಲ್ಲಿ ಇವರದ್ದು ಆಯ್ಕೆ ಆಗುವ ಮೂಲಕ ಇವರಿಗೆ ಬಾಲ್ಯದಿಂದ ಇಷ್ಟವಿದ್ದ ಸ್ವಂತ ಉದ್ದಿಮೆ ನಡೆಸುವ ಕನಸು ಸಹಾಕರವಾಯಿತು ಇವರನ್ನು ಚೆರಿ ಏಜೆನ್ಸಿ ಆಯ್ಕೆ ಮಾಡಿ ತರಬೇತಿ ನೀಡಿ ಈಗ ತಮ್ಮದೆ ರೀಟೆಲ್ ಶೋರೂಂ ಶುರುಮಾಡಿದ್ದಾರೆ ಮುಖ್ಯವಾಗಿ ಇವರ ಶೋರೂಂನಲ್ಲಿ ಟೈರ್, ವೀಲ್ ಬಾಲೆನ್ಸಿಂಗ್ ಮಾಡುವ ಮೂಲಕ ಆದಾಯ ಪಡೆಯುತ್ತಿದ್ದಾರೆ.

ಇದರ ಜೊತೆಗೆ ತಮ್ಮದೆ ಸ್ವಂತ ನಂದಿನಿ ಪಾರ್ಲರ್ ಹೊಂದಿರುವ ಸತೀಶ್ ಹೇಳುವ ಪ್ರಕಾರ ಪ್ರತಿಯೊಬ್ಬರು ಸರ್ಕಾರಿ ಕೆಲಸ ಎಲ್ಲರಿಗೂ ಸಿಗುವುದು ಕಷ್ಟ ನಾವೆಲ್ಲರೂ ನಮ್ಮದೆ ಆದ ಸ್ವಂತ ಉದ್ದಿಮೆಯನ್ನು ಮಾಡಿಕೊಳ್ಳಬೇಕು. ನನಗೆ ಅತಿ ಹೆಚ್ಚು ಖುಷಿ ತಂದಿರುವ ವಿಷಯ ಏನಂದರೆ ನಾನು ಯಾರು ಅಧಿಕಾರಿಗಳ ಕೈಯಲ್ಲಿ ಇಲ್ಲ ಕಷ್ಟ ಪಟ್ಟಷ್ಟು ಲಾಭ ಪಡೆಯಬಹುದು,

ಹಂಪ್ಟಿ ಡಂಪ್ಟಿ ಮಕ್ಕಳ ಬಟ್ಟೆ ಮಳಿಗೆ ನಡೆಸುತ್ತಿರುವ ಸತೀಶ್ ಅವರ ಪ್ರಕಾರ ಬಾಲ್ಯದಿಂದಲೂ ನನಗೆ ಮಕ್ಕಳೆಂದರೆ ಬಹಳ ಇಷ್ಟವಿತ್ತು ಆರ್ಥಿಕ ಸಂಕಷ್ಟದಿಂದ ನಾನು ಸ್ವಂತ ಉದ್ದಿಮೆ ಅನ್ನುವುದು ಕನಸಾಗಿತ್ತು ಆದರೆ



ಈಗ ನನ್ನ ಸ್ವಂತ ಮಕ್ಕಳ ಬಟ್ಟೆ ಮಳಿಗೆ ನೋಡಿದರೆ ಖುಷಿಯಾಗುತ್ತದೆ ಅಂದರು.

ಹೆಚ್ಚಿನ ಯುವಕ ಯುವತಿಯರು ಕೇವಲ ಓದಿನಲ್ಲಿ ಚುರುಕಿದ್ದು, ಸ್ವಂತ ಉದ್ದಿಮೆ ನಡೆಸುವ ಬಗ್ಗೆ ಅಷ್ಟು ಗಮನಹರಿಸದಿರುವ ಈ ಕಾಲದಲ್ಲಿ ಈ ಯೋಜನೆಯ ಮೂಲಕ ಸರ್ಕಾರದ ಈ ಸವಲತ್ತು ಪಡೆದು ಮಾದರಿ ಜೀವನ ನಡೆಸುತ್ತಿರುವುದ ಸಂತಸದ ವಿಷಯವೇ ಸರಿ.

# ಸಮಾಜ ಸೇವೆಗಾಗಿ ತಮ್ಮನ್ನು ತಾವೇ ತೊಡಗಿಸಿಕೊಂಡ ಶಿವಕುಮಾರಗೌಡ ಕಾಗನೂರುರವರು



ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಕಾಗನೂರು ಗ್ರಾಮದ ದಿವಂಗತ ಗೌಡ್ರು ಪಕೀರ ಗೌಡ ಹಾಗೂ ಗೌಡ್ರು ಈರಮ್ಮನವರ ಮಗನಾದ ಶಿವಕುಮಾರಗೌಡ ಕಾಗನೂರು ಇವರು ಬಡತನದಲ್ಲಿ ಹುಟ್ಟಿ ಬಡತನದಲ್ಲಿ ಬೆಳೆದು ಬಂದವರು. ಬಡತನದ ಕಾರಣಕ್ಕೆ ಅವರ ಪದವಿಯ ವಿದ್ಯಾಭ್ಯಾಸ ಅರ್ಧಕ್ಕೆ ನಿಂತಿತು ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸುಮಾರು 14 ವರ್ಷಗಳ ಕಾಲ ತಮ್ಮನ್ನು ತಾವು ನಿರಂತರವಾಗಿ ಸಮಾಜಸೇವೆಗಾಗಿ ಮುಡಿಪಾಗಿದ್ದಾರೆ.ಅಂಗನವಾಡಿ ಕಾರ್ಯಕರ್ತರ ಪರವಾಗಿ ಬಿಸಿಯೂಟ ಕಾರ್ಯಕರ್ತರ ಪರವಾಗಿ ವಿದ್ಯಾರ್ಥಿ

ಸಂಘಟನೆಯ ನಾಯಕನಾಗಿ ಹೋರಾಟ ಮಾಡುತ್ತಾ ತಮ್ಮ ಕುಟುಂಬದ ನಿರ್ವಹಣೆಗಾಗಿ ಡಿಟಿಎಚ್ ಮೆಕ್ಯಾನಿಕ್ ಆಗಿ ಕೆಲಸ ಮಾಡುವುದರ ಜೊತೆಗೆ ತರಕಾರಿ ವ್ಯಾಪಾರವನ್ನು ಮಾಡುತ್ತಾ ಹಾಗೂ ಬಿಲ್ಡಿಂಗ್ ಪೇಂಟಿಂಗ್ ಕೆಲಸವನ್ನು ಮಾಡುತ್ತಾ ಇನ್ನು ಇತ್ಯಾದಿ ಕೆಲಸಗಳನ್ನು ಮಾಡುತ್ತಾ ಅದರಲ್ಲಿ ಬಂದ ಹಣದಿಂದ ಸರಳವಾಗಿ ಜೀವನ ನಡೆಸುತ್ತಾ ಉಳಿದ ಹಣದಲ್ಲಿ ಸಮಾಜ ಸೇವೆಯನ್ನು ಮಾಡುತ್ತಾ ಮಲ್ಲಿಗೆ ನಾಡಿನ ಜನರ ಮನಸ್ಸಲಿ ಮನೆ ಮಾಡಿದ್ದಾರೆ ರೈತರ ಸಮಸ್ಯೆಗಳ ಪರವಾಗಿ ಹೋರಾಟವನ್ನು ಮಾಡಿದವರು ಬಡವರ ನೋವು–ನಲಿವುಗಳಿಗೆ ಸ್ಪಂದಿಸಿದವರು ಕೋವಿಡ್ ಸಮಯದಲ್ಲಿ ಅನೇಕ ಜನರಿಗೆ ತಮ್ಮ ಮನೆಯಲ್ಲಿಯೇ ಅಡುಗೆಯನ್ನು ಮಾಡಿಕೊಂಡು ಬಂದು ಪಟ್ಟಣದಲ್ಲಿರುವ ನಿರ್ಗತಿಕರಿಗೆ ಹಂಚಿದವರು.ಹಾಗೂ ಪತ್ರಕರ್ತರಾಗಿ ಸಮಾಜದಲ್ಲಿ ನಡೆಯುವ ಸಮಸ್ಯೆಗಳ ಕುರಿತು ಸುದ್ದಿ ಮಾಡುವುದರ ಜೊತೆಗೆ ಕೋವಿಡ್ ಸಮಯದಲ್ಲಿ ಕ್ವಾರಂಟೈನ್ ಕೇಂದ್ರಗಳಿಗೆ ಅಲ್ಲಿಯ ಜನಗಳಿಗೆ ಸಿಗಬೇಕಾದ ಆಹಾರ ಔಷಧಗಳ ಬಗ್ಗೆ ರಿಯಾಲಿಟಿ ಚೆಕ್ ಮಾಡಿ ಸಂತ್ರಸ್ತರ ಮನವಿಗೆ ಸ್ಪಂದಿಸಿದವರು. ಮಧ್ಯರಾತ್ರಿ ಸಮಯದಲ್ಲಿ ಅನಾರೋಗ್ಯದ ವಿಚಾರವಾಗಿ ಯಾರೇ ಫೋನ್ ಮಾಡಿ ಕರೆದರೂ ಕೂಡಾ ನಿದ್ದೆಯಿಂದ ಎದ್ದು ಕೂಡಲೇ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಕೊಡಿಸಿ ಮಾನವೀಯತೆ ಮೆರೆದವರು. ಸಂತೆಗಳಿಗೆ ಹೋಗಿ ತರಕಾರಿಯ ವ್ಯಾಪಾರವನ್ನು ಮಾಡಿ ಅದರಲ್ಲಿ ಬಂದ ಲಾಭದಲ್ಲಿ ತಮ್ಮ ಕುಟುಂಬದ ನಿರ್ವಹಣೆಯನ್ನು ಮಾಡಿ ಉಳಿದ ಹಣವನ್ನು ಸಮಾಜಸೇವೆಗೆ ಇಟ್ಟುಕೊಂಡು ಬಂದವರು ಸಾಯಂಕಾಲದ ಸಮಯ ತಮ್ಮ ಮನೆಯ ಮುಂದೆ ಗೋಬಿಮಂಚೂರಿ ಅಂಗಡಿಯನ್ನ ತೆರೆದು ಅಲ್ಪ ಸ್ವಲ್ಪ ವ್ಯವಹಾರವನ್ನು ಮಾಡಿ ಅದರಲ್ಲಿ ಬಂದ ಸ್ವಲ್ಪ ಲಾಭವನ್ನು ಸರ್ಕಾರ ಕಲಿಕಾ ಸಾಮಗ್ರಿಗಳನ್ನು ಕೊಡುವುದಕ್ಕೆ ಉಪಯೋಗಿಸುತ್ತಾ ಸರಕಾರಿ ಶಾಲೆಯ ಬಗ್ಗೆ ಕಾಳಜಿಯನ್ನು ಮೆರೆಯುತ್ತಾ ಜೊತೆಯಲ್ಲಿ ಪುಸ್ತಕ ಬರೆಯುವ ಹವ್ಯಾಸವನ್ನು ರೂಡಿಸಿಕೊಂಡು ಈಗಾಗಲೇ ಇವರು ಮೂರು ಪುಸ್ತಕಗಳನ್ನು ಬರೆದಿದ್ದಾರೆ ಮೊದಲ ಪುಸ್ತಕ "ನಾ ಕಂಡ ವ್ಯಕ್ತಿ ಮತ್ತು ವ್ಯಕ್ತಿತ್ವ"ಎರಡನೆಯ ಪುಸ್ತಕ "ಮರಳಿ ಮನೆಗೆ ಬಾ ಅಪ್ಪಾಜಿ" ಮೂರನೇ ಪುಸ್ತಕ "ನಾ ಕಂಡ ಸಮಾಜ ಮತ್ತು ಸಮಸ್ಯೆಗಳು" ಸಾಹಿತ್ಯದ ಮುಖಾಂತರ ಸಮಾಜದಲ್ಲಿರುವ ಸಮಸ್ಯೆಗಳನ್ನು ಕುರಿತಾಗಿ ಜನರಿಗೆ ತಿಳಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದಲ್ಲದೆ ಇಲ್ಲಿಯವರೆಗೂ ಸುಮಾರು 4000 ಪುಸ್ತಕಗಳನ್ನು ಉಚಿತವಾಗಿ ಹಂಚಿದ್ದಾರೆ. ಆದರೆ ಇತ್ತೀಚೆಗೆ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ಅಗಲಿಕೆ ಇವರ ಮನಸ್ಸನ್ನು ಬಹಳಷ್ಟು ಕಾಡಿದ ಕಾರಣ ಅವರು ಮಾಡಿದ ಕಾರ್ಯ ಸಾಧನೆಗಳನ್ನು ನೋಡಿ ನಾನೂ ಕೂಡ ಅಪ್ಪು ನಡೆದ ದಾರಿಯಲ್ಲಿ ನಡೆಯಬೇಕು ಎನ್ನುವ ಕಾರಣಕ್ಕೆ ನಿರ್ಧಾರವನ್ನು ಮಾಡಿ ತಮ್ಮ ಜೀವನ ಮಾಡಿ ಉಳಿದ ಹಣದ ಜೊತೆಗೆ ತಾವೇ ಬರೆದು ಉಚಿತವಾಗಿ ಹಂಚಿದ್ದ ಪುಸ್ತಕಗಳನ್ನು ಹೊರತು ಪಡಿಸಿ ಉಳಿದ ಪುಸ್ತಕಗಳನ್ನು ಬೀದಿ ಬೀದಿಯಲ್ಲಿ ಅಲೆದಾಡಿ ಮಾರಿ ಬಂದ ಹಣದಿಂದ ಸರಕಾರಿ ಶಾಲೆಯನ್ನು ಉಳಿಸಿ ಸರ್ಕಾರಿ ಶಾಲೆಯನ್ನು ಬೆಳೆಸಿ ಎನ್ನುವ ಅಭಿಯಾನವನ್ನು ಕೈಗೆತ್ತಿಕೊಂಡಿದ್ದಾರೆ. ಸರಕಾರಿ ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿಗಳಾದ ನೋಟ್ಬುಕ್ ಸ್ಕೆಚ್ ಪೆನ್ ಅಂಕಲಿಪಿ ಇತ್ಯಾದಿ ಕಲಿಕಾ ಸಾಮಗ್ರಿಗಳನ್ನು ಉಚಿತವಾಗಿ ಕೊಡುವುದರ ಜೊತೆಗೆ ಮಕ್ಕಳಿಗೆ ಶಾಲೆಯ ಬಗ್ಗೆ ಶಿಕ್ಷಕರ ಬಗ್ಗೆ ಕಲಿಕೆಯ ಬಗ್ಗೆ ಅರಿವನ್ನು ಮೂಡಿಸುತ್ತಾ ಪ್ರತಿಯೊಂದು ಶಾಲೆಗಳಿಗೆ ಹೋಗಿ ಪಾಲಕ–ಪೋಷಕರಿಗೆ ಶಿಕ್ಷಕರ ಮೇಲಿನ ಗೌರವವನ್ನು ಕೊಡುವುದು ಹೇಗೆ ಮಕ್ಕಳಿಗೆ ಮನೆಯಲ್ಲಿ ಪಾಠ ಕಲಿಸುವುದು ಹೇಗೆ ಮಕ್ಕಳ ಕಲಿಕೆಯಲ್ಲಿ ತಂದೆತಾಯಿಗಳ ಪಾತ್ರದ ಬಗ್ಗೆ ಇತ್ಯಾದಿ ವಿಚಾರಗಳ



ಬಗ್ಗೆ ಶಾಲೆಯ ಎಸ್ಡಿಎಂಸಿ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಅವರು ಮಾಡಬೇಕಾದ ಕೆಲಸಗಳ ಬಗ್ಗೆ ತಿಳಿಸುತ್ತಾ ಸರ್ಕಾರಿ ಶಾಲೆ ಉಳಿಸಿ ಸರ್ಕಾರಿ ಶಾಲೆ ಬೆಳೆಸಿ ಅಭಿಯಾನ ಮಾಡುತ್ತಾ ಸದಾಕಾಲ ಸರ್ಕಾರಿ ಶಾಲೆಯ ಬಗ್ಗೆ ಕಾಳಜಿ ಹೊಂದಿದ್ದಾರೆ ಇದಲ್ಲದೆ ಪುಸ್ತಕ ಓದು ಅಭಿಯಾನ ಮಾಡಿ ಪುಸ್ತಕದ ಬಗ್ಗೆ ಅರಿವು




ಮೂಡಿಸುವ ಕಾರ್ಯ.ಪರಿಸರ ಉಳಿಸಿ ಅಭಿಯಾನ. ಸ್ವಚ್ಚತೆ ಯ ಬಗ್ಗೆ ಗ್ರಾಮದ ಜನರಲ್ಲಿ ತಿಳುವಳಿಕೆ ಮೂಡಿಸುವ ಕಾರ್ಯಕ್ರಮ ಮಾಡುತ್ತಿದ್ದಾರೆ. ಇವರ ಕಾರ್ಯಕ್ಕೆ ಪರಮಪೂಜ್ಯ ಸದ್ಗುರುಗಾಡಿತಾತ ಶಿವಶರಣರು ಚೌಕಿಮಠ ಕೊಂಬಳಿ ಇವರ ಸಾನಿಧ್ಯ ಸಹಕಾರ ಆಶೀರ್ವಾದ ಇದೆ.ಶಿವಕುಮಾರ ಮಾಡುವ ಸಮಾಜಮುಖಿ ಕಾರ್ಯಗಳಿಗೆ ಶ್ರೀಗಳು ಬೆಂಬಲಿಸಿ ಹರಸಿ ಹಾರೈಸಿದ್ದಾರೆ. ಇದರ ಜೊತೆಗೆ ಇವರ ಸ್ನೇಹಿತ ವರ್ಗ ಶಿವಪುತ್ರಪ್ಪ ಹೊಸಳ್ಳಿ,ರವಿಗೌಡ. ಗಣೇಶ್.ತಳವಾರ ವೀರೇಶ್. ಶಿವಾನಾಯ್ಕ ಗೋಪಿ ಸೋಮ್ಯಾನಾಯ್ಕ ಸ್ನೇಹಿತರ ಬಳಗದಲ್ಲಿ ಕೋಡಿಹಳ್ಳಿ ಕೊಟ್ರೇಶ್ ಮಲ್ಲಿಗೆ ಯೋಗ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರು ಇತರರು ಕೂಡ ಹೆಜ್ಜೆ ಹಾಕಿದ್ದಾರೆ.ಇವರ ಈ ಎಲ್ಲಾ ಕಾರ್ಯಗಳಿಗೆ ಮನೆಯವರ ಸಂಪೂರ್ಣ ಸಹಕಾರದೊಂದಿಗೆ ನಿತ್ಯ ನಿರಂತರವಾಗಿ ಸಾಗುತ್ತಿದೆ. ಯಾರಿಗಾದರೂ ಏನಾದರೂ ಕೊಟ್ಟರೆ ನಮಗೇನು ಬರತ್ತೆ ಎನ್ನುವ ಈ ಕಾಲದಲ್ಲೂ ಶಿಕ್ಷಣದ ಮಹತ್ವ ಸಾರುತ್ತಾ ತಮ್ಮ ಅಮೂಲ್ಯ ಸಮಯ ಹಾಗೂ ತಮ್ಮ ಕಷ್ಟಾರ್ಜಿತವಾದ ಒಂದು ಪಾಲು ಹಣವನ್ನು ಸಮಾಜದ ಒಳಿತಿಗಾಗಿ ವಿನಿಯೋಗಿಸುತ್ತಿರುವ ಇವರಿಗೆ ಇನ್ನೂ ಹೆಚ್ಚಿನ ಬಲ ತುಂಬಲು ಸರ್ಕಾರ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳು ಮುಂದೆ ಬರಲಿ ಎಂದು ನಮ್ಮ ಕರುನಾಡ ಕಂದ ಪತ್ರಿಕಾ ಬಳಗದ ಪರವಾಗಿ ಶುಭ ಹಾರೈಸುತ್ತೇವೆ.

ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ವನ್ಯಜೀವಿಯಾದ ಕರಡಿಯನ್ನು ಕೊಂದು ಪರಾರಿಯಾಗಿದ್ದ ಆರೋಪಿಗಳ ಬಂಧನ

ಕೊರಟಗೆರೆ : ತಾಲ್ಲೂಕಿನ ಚನ್ನರಾಯನದುರ್ಗ ಹೋಬಳಿಯ ಗೌಜಗಲ್ ಗ್ರಾಮದಲ್ಲಿ ದಿನಾಂಕ : 10/12/2021 ರಂದು ಬೆಳಗ್ಗೆ 9:00 ಗಂಟೆಯ ಸಮಯದಲ್ಲಿ ಗೌಜಗಲ್ ಗ್ರಾಮದ ಚಿಕ್ಕಬಸವಯ್ಯ ಬಿನ್ ಚನ್ನಬಸವಯ್ಯ ನ ಮನೆಯ ಮೇಲೆ ಕೊರಟಗೆರೆ ಅರಣ್ಯಧಿಕಾರಿಗಳು ದಾಳಿಯನ್ನು ನೆಡೆಸಿ ಒಂದು ಕೆಜಿ 50 ಗ್ರಾಂ ಕರಡಿಯ ಮಾಂಸವನ್ನು ವಶಪಡಿಸಿಕೊಂಡು ನಂತರ ಸದರಿ ಕಾಡು ಪ್ರಾಣಿಯ(ಕರಡಿ)ಯ ಮಾಂಸವೆಂದು ದೃಡೀಕರಿಸಲು ಸುತ್ತ ಮುತ್ತಲಿನ ಸ್ಥಳವನ್ನು ಪರಿಶೀಲಿಸಿ ಹುಡುಕಾಡಿ ನಿರಂತರ ಪ್ರಯತ್ನದಿಂದ ದಿನಾಂಕ : 11/12/2021 ರಂದು ಬೆಳಗ್ಗೆ 11:00 ಗಂಟೆಗೆ ಗೌಜಗಲ್ಲು ಗ್ರಾಮದ ಸರ್ವೇ ನಂಬರ್ 17 ರ ಗೋವಿಂದಪ್ಪನ ಜಮೀನಿನ ಬಂಡೆಯ ಮೇಲೆ ಕಾಡು ಪ್ರಾಣಿಯಾದ ಕರಡಿಯ ದೇಹವನ್ನು ಕತ್ತರಿಸಿದ ಮಾಂಸವನ್ನಾಗಿ ಪರಿವರ್ತಿಸಿರುವ ಕೃತ್ಯ ನಡೆದ ಸ್ಥಳ ವನ್ನು ಪತ್ತೆ ಮಾಡಿ ಪರಿಶೀಲಿಸಿದಾಗ ಕರಡಿಯ ಮಾಂಸವನ್ನು ಕತ್ತರಿಸಿರುವ ದೇಹದ ಕೆಲವು ಭಾಗಗಳಾದ ಮುಂಗಾಲು,ನಾಲಿಗೆ,ತುಂಡಾಗಿದ್ದ ಬಾಲ ಮತ್ತು ಕೃತ್ಯಕ್ಕೆ ಬಳಸಿರುವ ಮಚ್ಚು ಸ್ಥಳದಲ್ಲಿ ದೊರೆತಿದೆ.

ಕಾಡು ಪ್ರಾಣಿಯ ದೇಹದ ಭಾಗವನ್ನ ಪರಿಶೀಲಿಸಿ ಕರಡಿ ಎಂದು ದೃಢೀಕರಿಸಿ ಕೊಂಡ ಹಿನ್ನೆಲೆಯಲ್ಲಿ ಚಿಕ್ಕಬಸಯ್ಯ ಬಿನ್ ಚನ್ನಬಸಯ್ಯ ಗ್ರಾಮ ಇವರ



ಮೇಲೆ ವನ್ಯಜೀವಿ ಅಪರಾಧ ದೂರು ಪ್ರಕರಣವನ್ನು ದಾಖಲಿಸಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧಿಗಳಾದ ಜಿ.ಎನ್ ಯತೀಶ್ ಬಿನ್ ನಾಗರಾಜ್, ನಾಗರಾಜು ಬಿನ್ ಕುಂಭಣ್ಣ,ಶ್ರೀಧರ್ ಬಿನ್ ನರಸರಾಜು,ರಾಮಯ್ಯ ಬಿನ್ ನರಸಿಂಹಯ್ಯ,ರಾಜಣ್ಣ ಬಿನ್ ಲಕ್ಷ್ಮಿನರಸಪ್ಪ ಮತ್ತು ಚಿಕ್ಕಬಸವಯ್ಯ ಬಿನ್ ಚನ್ನಬಸವಯ್ಯ ಈ ಎಲ್ಲ ಆರೋಪಿಗಳ ಮೇಲೆ ಮಾನ್ಯ ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಲಾಗಿರುತ್ತದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ಮಾಹಿತಿ ಹಾಗೂ ಚಿಕ್ಕಬಸವಯ್ಯ ಬಿನ್ ಚನ್ನಬಸವಯ್ಯ ಗೌಜಗಲ್ ಗ್ರಾಮ ಇವರ ದೂರವಾಣಿ ಮೊಬೈಲ್ ಸಿ.ಡಿ.ಆರ್. ಮಾಹಿತಿಯನ್ನು ಪಡೆದು ಪ್ರಕರಣಕ್ಕೆ ಸಂಬಂಧಿಸಿರುವ ಆರೋಪಿಗಳನ್ನು ಪತ್ತೆ ಮಾಡಿ ವಿಚಾರಣೆಯನ್ನು ನಡೆಸಲಾಗಿದ್ದು ಪ್ರಕರಣದಲ್ಲಿ ಆಸಾಮಿಗಳು ಭಾಗಿಯಾಗಿರುವುದು ಒಪ್ಪಿಕೊಂಡಿರುತ್ತಾರೆ.

ಕಾಡುಪ್ರಾಣಿಯಾದ ಕರಡಿಯು ವನ್ಯ ಜೀವಿ ಸಂರಕ್ಷಣಾ ಕಾಯಿದೆ 1972 ರ ಪ್ರಕಾರ ಶೆಡ್ಯೂಲ್ಡ್ –1 ರ ಭಾಗ–1 ರಲ್ಲಿ ಸೇರಿದ್ದು ಕರಡಿಯನ್ನು ಸಾಯಿಸುವುದೇ ಆಗಲಿ ಮಾಂಸವನ್ನು ಉಪಯೋಗಿಸುವ ಕೃತ್ಯವು ಸಂಜ್ಞೆಯ ಅಪರಾಧವಾಗಿದ್ದು ಪ್ರಯುಕ್ತ ಸದರಿ ಕೃತ್ಯವು ವನ್ಯಜೀವಿ ಸಂರಕ್ಷಣಾ ಕಾಯಿದೆ 1972 ರ ಸೆಕ್ಷನ್ 2(20),9,39,48,51,51(ಂ) ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.

ವನ್ಯಜೀವಿ ಅಪರಾಧ ವರದಿ ಸಂಖ್ಯೆ 05/2021–22 ರ ದಿನಾಂಕ : 12/12/2021 ರ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲ ಆರೋಪಿಗಳನ್ನು ಹೆಚ್.ನಾಗರಾಜು ಉಪ ವಲಯ ಅರಣ್ಯಧಿಕಾ–ರಿ,ಅರಣ್ಯ ರಕ್ಷಕ ಮಂಜುನಾಥ್ ಬಿ.ಸಿ. ರಘು ಕೆ.ಆರ್. ವೆಂಕಟರಾಮ್,ನರಸಿಂಹಯ್ಯ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸುತ್ತ ಸದರಿ ಪ್ರಕರಣದ ಬಂಧಿತ ಆರೋಪಿಗಳನ್ನು 16/12/2021 ರಿಂದ 29/12/2021 ರವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಬೇಕೆಂದು ನ್ಯಾಯಾಲಯಕ್ಕೆ ಮನವಿ ಮಾಡಿ ಕೊಂಡಿದ್ದಾರೆ.

**ವರದಿ : ನರೇಂದ್ರ ಕುಮಾರ್.ಕೊರಟಗೆರೆ**

## ಶರಾವತಿ ಹಿನ್ನೀರಿನಲ್ಲಿ ನೆಡೆದ ವಿಶೇಷ ಕಪ್ಪೆ ಹಬ್ಬ



ವಿನಾಶದ ಅಂಚಿನಲ್ಲಿರುವ ಪ್ರಾಣಿ–ಪಕ್ಷಿಗಳ ರಕ್ಷಣೆಗಾಗಿ ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಸರ್ಕಾರ ನಾನಾ ರೀತಿಯ ಹಬ್ಬ ಆಚರಿಸುವುದು ಸಾಮಾನ್ಯ. ಆದರೆ ಇದೀಗ ಕಪ್ಪೆ ಹಬ್ಬ ಆಚ–ರಿಸುವ ಮೂಲಕ ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಕಪ್ಪೆಗಳ ಉಳಿವಿಗಾಗಿ ಅರಿವು ಮೂಡಿಸುವ ಕೆಲಸಕ್ಕೆ ಸರ್ಕಾರ ಮುಂದಾಗಿದೆ.

ಸೃಷ್ಟಿ ಎಂಬ ಕೌತುಕದಲ್ಲಿ ಪ್ರತಿಯೊಂದು ಜೀವಿಗೂ ಅದರದ್ದೇ ಆದ ಮಹತ್ವದ ಸ್ಥಾನ ಇದೆ. ಇದರಿಂದ ಉಭಯವಾಸಿ ಎನಿಸಿಕೊಂಡಿರುವ ಕಪ್ಪೆಯೂ ಹೊರತಾಗಿಲ್ಲ. ಆದರೆ ಹವಾಮಾನ ವೈಪ–ರೀತ್ಯ, ವಿಪರೀತ ರಾಸಾಯನಿಕಗಳ ಬಳಕೆ, ಅರಣ್ಯ ನಾಶ, ಜಲ ಮೂಲಗಳ ಒತ್ತುವರಿ ಇವೇ ಮೊದಲಾದ ಕಾರಣಕ್ಕೆ ಕಪ್ಪೆ ಸಂಕುಲ ಈಗ ಅಪಾಯಕ್ಕೆ ಸಿಲುಕಿದೆ. ಇಂತಹ ಸಂದರ್ಭದಲ್ಲಿ ಕಪ್ಪೆಯ ಮಹತ್ವದ ಬಗ್ಗೆ ಯುವ ಜನತೆ ಹಾಗೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಕರ್ನಾಟಕ ಅರಣ್ಯ ಇಲಾಖೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಲಿಂಗನಮಕ್ಕಿ ಜಲಾಶಯದ ಹಿನ್ನೀರಿನ ಮುಪ್ಪಾನೆ ಪ್ರಕೃತಿ ಶಿಬಿರದಲ್ಲಿ ಎರಡು ದಿನ ರಾಜ್ಯಮಟ್ಟದ ಕಪ್ಪೆ ಹಬ್ಬವನ್ನು ಇದೇ ಮೊದಲ ಬಾರಿಗೆ ಆಯೋಜಿಸಿದೆ.

ಅರಣ್ಯ ಇಲಾಖೆ ಈ ತನಕ ದೊಡ್ಡ ಪ್ರಾಣಿಗಳ ರಕ್ಷಣೆಗೆ ಗಮನ ಹರಿಸುತ್ತಾ ಬಂದಿದೆ. ಆದರೆ ಇದೀಗ ಸಣ್ಣ ಜೀವಿಯಾದ ಕಪ್ಪೆಯ ರಕ್ಷಣೆ ಬಗ್ಗೆ ಗಮನ ಹರಿಸುವ ನಿಟ್ಟಿನಲ್ಲಿ ಇದೇ ಮೊದಲ ಬಾರಿಗೆ ಕಪ್ಪೆ ಹಬ್ಬ ಆಯೋಜಿಸಿದೆ. ಮುಂದಿನ ದಿನಗಳಲ್ಲಿ ಕೊಪ್ಪಳ ಭಾಗದಲ್ಲಿ ತೋಳ ಹಬ್ಬ, ದಕ್ಷಿಣ ಕನ್ನಡದಲ್ಲಿ ಕಾಂಡ್ಲಾ ಹಬ್ಬ, ಉತ್ತರ ಕನ್ನಡ ಭಾಗದಲ್ಲಿ ಆಮೆ ಹಬ್ಬ, ಮೈಸೂರಿನ ಕಾವೇರಿ ನದಿ ತೀರ ಪ್ರದೇಶದಲ್ಲಿ ಕಣ್ಮರೆಯಾಗುತ್ತಿರುವ ಮಹಶೀರ್ ಮೀನಿನ ಪ್ರಬೇಧ ರಕ್ಷಣೆಗೆ ಮಹಶೀರ್ ಹಬ್ಬ ಮೊದಲಾದವುಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಕಪ್ಪೆ ಎಂದರೆ ಕೇವಲ ಪಶ್ಚಿಮಘಟ್ಟಕ್ಕೆ ಬರಬೇಕು ಎಂದೇನಿಲ್ಲ. ಹಾಗೆ ನೋಡಿದರೆ ಕಪ್ಪೆ ರಕ್ಷಣೆಗೆ ಹುಲಿ ರಕ್ಷಣೆಗೆ ಬೇಕಾದಷ್ಟು ಜಾಗವೂ ಬೇಕಾಗಿಲ್ಲ. ಮನೆ ಬಾಗಿಲಲ್ಲೇ ಕಾಣುವ ಕಪ್ಪೆಯನ್ನು ಉಳಿಸುವ ಕೆಲಸವಾದರೂ ಸಾಕು. ಈ ನಿಟ್ಟಿನಲ್ಲಿ ಕಪ್ಪೆಗಳ ಮಹತ್ವದ ಬಗ್ಗೆ ಅರಿವು ಮೂಡಿಸಿದರೆ ಮುಂದೆ ಇದರ ರಕ್ಷಣೆ ಸಾಧ್ಯವಾಗುತ್ತದೆ. ಆದರೆ ರಾಜ್ಯದಲ್ಲಿ ಕಪ್ಪೆಗಳ ಸ್ಥಿತಿಗತಿ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ದೇಶದಲ್ಲಿ ಇನ್ನೂ ಬಹಳಷ್ಟು ಕಪ್ಪೆಗಳ ಪ್ರಬೇಧ ಬೆಳಕಿಗೆ ಬಂದಿಲ್ಲ. ಆದರೆ ನಗರೀಕರಣ ಹಾಗೂ ಕೆರೆಗಳ ನಾಶದಿಂದಾಗಿ ಕಪ್ಪೆ ಸಂಕುಲಕ್ಕೆ ಅಪಾಯ

ಎದುರಾಗಿದೆ ಎಂದು ತಜ್ಞರು ಹೇಳುತ್ತಾರೆ. ಇನ್ನು ಅರಣ್ಯದ ನಡುವೆ ಆಯೋಜಿಸಿರುವ ಕಪ್ಪೆ ಹಬ್ಬಕ್ಕೆ ಯುವ ಜನತೆ, ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಪರಿಸರಾಸಕ್ತರು ಹೆಚ್ಚಿನ ಆಸಕ್ತಿಯಿಂದ ಪಾಲ್ಗೊಂಡಿದ್ದಾರೆ.

ಕಪ್ಪೆಯ ಕುರಿತು ತಜ್ಞರ ಉಪನ್ಯಾಸದ ಜೊತೆಗೆ ರಾತ್ರಿ ವೇಳೆ ಶರಾವತಿ ಅರಣ್ಯ ಭಾಗದಲ್ಲಿ ಕಾಣಸಿಗುವ ವಿವಿಧ ಪ್ರಬೇಧದ ಕಪ್ಪೆಗಳನ್ನು ಗುರುತಿಸುವ ಕೆಲಸವನ್ನೂ ಮಾಡುತ್ತಿದ್ದಾರೆ. ಇದರಿಂದಾಗಿ ಕಪ್ಪೆಯ ಜೀವನ ಕ್ರಮ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಕಪ್ಪೆಯ ಮಹತ್ವ ಅರಿಯಲು ಸಾಧ್ಯವಾಗಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ಎನ್. ಎಸ್. ಎಸ್ ಯೋಜನಾಧಿಕಾರಿಗಳಾದ ಡಾಕ್ಟರ್ ನಾಗರಾಜ್ ಪರಿಸರ ಅವರು ಹಾಗೂ ಶಿಬಿರಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ.

**–ಬೊಮ್ಮಲಿಂಗಯ್ಯ**

## ಬಂಜಾರ ಸಮುದಾಯದ ಹೆಣ್ಣು ಮಕ್ಕಳ ಅತ್ಯಾಚಾರ ಪ್ರಕರಣ ಖಂಡಿಸಿ ಪ್ರತಿಭಟನೆ




ಭದ್ರಾವತಿ: ರಾಜ್ಯದಲ್ಲಿ ಇತ್ತೀಚೆಗೆ ಬಂಜಾರ ಸಮುದಾಯದ ಪರಿಶಿಷ್ಟ ಜಾತಿಗೆ ಸೇರಿದ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿದ್ದು, ನಾಗರೀಕ ಸಮಾಜ ತಲೆತಗ್ಗಿಸುವಂತಾಗಿದೆ. ಇಂತಹ ಅತ್ಯಾಚಾರ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿ ತಾಲ್ಲೂಕು ಬಂಜಾರ ಯುವಕರ ಸಂಘದ ವತಿಯಿಂದ ತಾಲ್ಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ್ ತಾಲ್ಲೂಕಿನ ಹುಲ್ಲೂರ ತಾಂಡದ ಬಂಜಾರ ಸಮುದಾಯದ ಅಪ್ರಾಪ್ತ ಬಾಲಕಿ ರಂಜಿತಾ ರಾಥೋಡ್ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿರುವ ಘಟನೆಯನ್ನು ತೀವ್ರವಾಗಿ ಖಂಡಿಸಿದ ಪ್ರತಿಭಟನಾಕಾರರು ಇತ್ತೀಚೆಗೆ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅದರಲ್ಲೂ ಬಂಜಾರ ಸಮುದಾಯದ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿರುವುದು ವಿಷಾದನೀಯ ಬೆಳವಣಿಗೆಯಾಗಿದೆ ಎಂದರು.

ಅತ್ಯಾಚಾರ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಅತ್ಯಾಚಾರಿಗಳಿಗೆ ಕೂಡಲೇ ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕು. ಆ ಮೂಲಕ ಸಮಾಜದಲ್ಲಿ ಎಚ್ಚ–ರಿಕೆ ಮೂಡಿಸುವಂತಾಗಬೇಕು. ರಂಜಿತಾ ರಾಥ–'ೋಡ್ ಮೇಲಿನ ಅತ್ಯಾಚಾರ ಕೊಲೆ ಪ್ರಕರಣದಲ್ಲಿ ತಪ್ಪಿತಸ್ಥರಾಗಿರುವವರನ್ನು ಈ ಕೂಡಲೇ ಬಂಧಿಸಿ ಗಲ್ಲು ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದರು.

ರಾಜ್ಯ ಸರ್ಕಾರ ರಂಜಿತಾ ರಾಥ–'ೋಡ್ ಬಾಲಕಿಯ ಕುಟುಂಬಕ್ಕೆ ತಕ್ಷಣವೇ ಆರ್ಥಿಕ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಜೊತೆಗೆ ಪ್ರಕರಣದ ತಪ್ಪಿತಸ್ಥರಿಗೆ 20 ಲಕ್ಷ ರೂ. ದಂಡ ವಿಧಿಸಿ ನೊಂದಿರುವ ಕುಟುಂಬಕ್ಕೆ ಸಂಪೂರ್ಣ ಆಶ್ರಯ ನೀಡುವ ಮೂಲಕ ಕಾನೂನಿನ ರಕ್ಷಣೆ ಒದಗಿಸಬೇಕೆಂದು ಒತ್ತಾಯಿಸಿದರು.

ಬಂಜಾರ ಸಮುದಾಯದ ಮಂಜು ಮಹಾರಾಜ ಸ್ವಾಮೀಜಿಯವರ ನೇತೃತ್ವದಲ್ಲಿ ತಾಲ್ಲೂಕು ಬಂಜಾರ ಯುವಕರ ಸಂಘದ ಅಧ್ಯಕ್ಷ ಕೃಷ್ಣಾನಾಯ್ಕ, ಪ್ರಮುಖರಾದ ಗಿರೀಶ್, ಚಂದ್ರನಾಯ್ಕ, ಸಂತೋಷ್, ಪ್ರವೀಣ್‌ಕುಮಾರ್, ಭೋಜ್ಯನಾಯ್ಕ, ವೇವೇಶ, ನಾಗನಾಯ್ಕ, ಮಂಜಾನಾಯ್ಕ, ರಮೇಶ್, ಕಾಂತ ದಿನೇಶ್, ಮಂಜುಳ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**–ಕೆ.ಆರ್ ಶಂಕರ್**

ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ಶಿಕ್ಷಣ ಮತ್ತು ಆರೋಗ್ಯದಿಂದ ದೇಶದ ಪ್ರಗತಿ




ವೈ.ಎನ್.ಹೊಸಕೋಟೆ: ದೇಶದ ಪ್ರಗತಿಗೆ ಮತ್ತು ಮುಂದಿನ ಪೀಳಿಗೆಯ ಉತ್ತಮ ಭವಿಷ್ಯ ಕ್ಕೆ ಆರೋಗ್ಯ ಮತ್ತು ಶಿಕ್ಷಣ ಅತ್ಯಗತ್ಯ ಎಂದು ಪಾವಗಡ ತಾಲೂಕು ಸಮಗ್ರ ಸೇವಾ ಅಭಿವೃದ್ಧಿ ಟ್ರಸ್ಟ್ ಮಾರ್ಗದರ್ಶಕರಾದ ಎಸ್. ಆರ್.ರಾಘವೇಂದ್ರ ತಿಳಿಸಿದರು.

ಗ್ರಾಮದ ಶ್ರೀ ಕನ್ನಿಕಾಪರಮೇಶ್ವರಿ ಕಲ್ಯಾಣಮಂಟಪದಲ್ಲಿ ಬೆಂಗಳೂರಿನ ಸಂಜೀವಿನಿ ಆಸ್ಪತ್ರೆ ಮತ್ತು ಪಾವಗಡ ತಾಲೂಕು ಸಮಗ್ರ ಸೇವಾ ಅಭಿವೃದ್ಧಿ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಾವಗಡ ತಾಲೂಕು ಗಡಿ ಪ್ರದೇಶವಾಗಿದ್ದು, ಇಲ್ಲಿನ ಜನತೆಯ ಅನಾರೋಗ್ಯಕ್ಕೆ ತುತ್ತಾದರೆ ತುರ್ತುಚಿಕಿತ್ಸೆಗೆ ಬೆಂಗಳೂರಿನ ಆಸ್ಪತ್ರೆಗಳಿಗೆ ಹೋಗುವ ಪರಿಸ್ಥಿತಿ ಇದೆ. ಆಯುಷ್ಮಾನ್ ಭಾರತ್ ಹಾಗೂ ಬಿಪಿಎಲ್ ಪಡಿತರ ಚೀಟಿ ಉಪಯೋಗಿಸಿ ಸೂಕ್ತ ಚಿಕಿತ್ಸೆ ನೀಡುವ ಆಸ್ಪತ್ರೆಗಳಲ್ಲಿ ಒಂದಾದ ಸಂಜೀವಿನಿ ಆಸ್ಪತ್ರೆಯ ವೈದ್ಯರ ತಂಡವನ್ನು ಇಂದು ಹೊಸಕೋಟೆ ಗ್ರಾಮಕ್ಕೆ ಕರೆತಂದು ಜನರು ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. ಎಲ್ಲಾ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಮುಖಂಡರಾದ ಟಿ.ಉಮೇಶ್ ಮಾತನಾಡಿ ಪಾವಗಡ ತಾಲೂಕು ಸಮಗ್ರ ಅಭಿವೃದ್ಧಿ ಟ್ರಸ್ಟ್ ಹಲವಾರು ಗ್ರಾಮೀಣ ಪ್ರದೇಶದ ಜನಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ. ತಾಲೂಕಿನ ಸಮಗ್ರ ಅಭಿವೃದ್ಧಿ ಅವರ ಗುರಿಯಾಗಿದೆ. ಈ ನಿಟ್ಟಿನಲ್ಲಿ ಇನ್ನಷ್ಟು ಉತ್ತಮ ಕಾರ್ಯಗಳನ್ನು ಮಾಡಲಿ ಎಂದರು.

ಕಾರ್ಯಕ್ರಮದಲ್ಲಿ ಸಂಘಟನಾ ಕಾರ್ಯದರ್ಶಿ ಶಶಾಂಕ್ ಮಾತನಾಡಿ ವೈ.ಎನ್.ಹೊಸಕೋಟೆ ಸರ್ಕಾರಿ ಆಸ್ಪತ್ರೆ ಮತ್ತು ಜಾಲೋಡಿನ ಸರ್ಕಾರಿ ಶಾಲೆಯಲ್ಲಿ ಒಂದೊಂದು ಶುದ್ಧ ಕುಡಿಯುವ ನೀರಿನ ಘಟಕವನ್ನು ಟ್ರಸ್ಟ್ ನ ವತಿಯಿಂದ ನಿರ್ಮಿಸಲಾಗುವುದು. ಇದೇ ಸಂದರ್ಭದಲ್ಲಿ .ಟ್ರಸ್ಟ್ ನಾ ನಿರ್ದೇಶಕರು ಸದಸ್ಯರು ಊರಿನ ಮುಂಖಡರು ಹಾಗೂ ಆಸ್ಪತ್ರೆ ಸಿಬ್ಬಂದಿ ಹಾಜರಿದ್ದರು

# ಮರಳಿ ಮಾತೃ ಧರ್ಮಕ್ಕೆ ಬರುವಂತೆ ಮಾಡಲು ಪ್ರತಿ ಜಿಲ್ಲೆಯಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚನೆ: ಶ್ರೀ ಸಿದ್ದಲಿಂಗ ಸ್ವಾಮೀಜಿ




ಕಲಬುರಗಿ:ವಿಧಾನ ಸಭೆ ಅಧಿವೇಶನದಲ್ಲಿ ರಾಜ್ಯ ಬಿಜೆಪಿ ಸರ್ಕಾರ ಮತಾಂತರ ನಿಷೇಧ ಕಾಯ್ದೆಯನ್ನು ಮಂಡನೆ ಮಾಡಿದ್ದು ಸ್ವಾಗತಾರ್ಹ. ಹಿಂದುಗಳ ನಿರೀಕ್ಷೆಯಂತೆ ಹಲವು ದಿನಗಳ ಬೇಡಿಕೆ ಈಡೇರಿದೆ. ಇದರ ಅಂಗವಾಗಿ ಶ್ರೀ ರಾಮ ಸೇನೆಯ ವತಿಯಿಂದ ಮತಾಂತರಗೊಂಡವರನ್ನು ಮರಳಿ ಮಾತೃ ಧರ್ಮಕ್ಕೆ ಕರೆತರುವ ನಿಟ್ಟಿನಲ್ಲಿ ಪ್ರತಿ ಜಿಲ್ಲೆಯಲ್ಲಿ 10 ಜನರ ಟಾಸ್ಕ್ ಫೋರ್ಸ್ ಸಮಿತಿಯನ್ನು ರಚನೆ ಮಾಡಲಾಗುತ್ತದೆ ಎಂದು ಶ್ರೀ ರಾಮ ಸೇನೆಯ ರಾಜ್ಯ ಗೌರವಾಧ್ಯಕ್ಷ ಅಂದೋಲಾದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಹೇಳಿದ್ದಾರೆ.

ಅವರು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ರಾಜ್ಯ ಸರ್ಕಾರ ಮತಾಂತರ ಕಾಯ್ದೆ ಜಾರಿಯಾದ ಮೇಲೂ ಸರ್ಕಾರದ ಕಣ್ಣು ತಪ್ಪಿಸಿ, ಮತಾಂತರ ಮಾಡುವ ದುಷ್ಟ ಶಕ್ತಿಗಳು ಇವೆ. ಅವುಗಳನ್ನು ತಪ್ಪಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತದ ಸಹಯೋಗದೊಂದಿಗೆ ಈ ಸಮಿತಿ ಕೆಲಸ ಮಾಡಲಿದೆ ಎಂದರು. ಹಿಂದೂ ಸಂಘಟನೆಗಳ ಹಲವಾರು ಹೋರಾಟದ ಪರಿಣಾಮವಾಗಿ ಇಂದು ರಾಜ್ಯ ಬಿಜೆಪಿ ಸರ್ಕಾರ ಐತಿಹಾಸಿಕ ನಿರ್ಣಯವನ್ನು ಕೈಗೊಂಡಿದ್ದು, ಇದಕ್ಕೆ ನಾವು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಎಂದರು.

ಪ್ರತಿ ವರ್ಷಕ್ಕೆ 8 ಲಕ್ಷ ಜನ ಮತಾಂತರಗೊಳ್ಳುತ್ತಿದ್ದರು. ಅದನ್ನು ತಡೆಯುವುದಕ್ಕೆ ಈ ಕಾಯ್ದೆ ಅನುಕೂಲವಾಗಲಿದೆ. ಕರ್ನಾಟಕ ವಿರೋಧ ಪಕ್ಷದ ನಾಯಕರು ಈ ಕಾಯ್ದೆಯನ್ನು ಸ್ವಾಗತಿಸುವ ಬದಲು, ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಡಿ.ಕೆ.ಶಿವಕುಮಾರ ಅವರು ಕೂಡ ಒಬ್ಬ ಹಿಂದು, ಅವರು ಈ ಕಾಯ್ದೆಯನ್ನು ಸ್ವಾಗತಿಸುವ ಬದಲು, ಹರಿದು ಹಾಕಿದ್ದು, ಇಟಲಿ ರಾಣಿಯನ್ನು ಓಲೈಸುವ ಭರದಲ್ಲಿ, ಕೋಟ್ಯಾಂತರ ಹಿಂದುಗಳ ಭಾವನೆಗೆ ಹಾಗೂ ಸದನಕ್ಕೆ ಅಗೌರವ ತೋರಿದ್ದಾರೆ ಎಂದರು.

ಶ್ರೀ ರಾಮ ಸೇನೆಯವತಿಯಿಂದ ಇಂದಿನಿಂದಲೇ, ಯಾವ ಧರ್ಮಕ್ಕೆ ಬಲವಂತವಾಗಿ ಮತಾಂತರಗೊಂಡಿದ್ದಾರೆಯೋ, ಅವರನ್ನು ಮರಳಿ ವಾಪಸ್ ಕರೆತರುವ ಕೆಲಸವಾಗಲಿದೆ. ಇನ್ನೂ ಕಲಬುರಗಿಯಲ್ಲಿ ಶಿವಕುಮಾರ ಹಂಗರಗಿ ಹಾಗೂ ಅಖಿಲೇಶ ಒಡೆಯರ ಅವರನ್ನು ಈ ಟಾಸ್ಕ್‌ಫೋರ್ಸ ಸಮಿತಿಗೆ ನೇಮಕ ಮಾಡಲಾಗಿದೆ ಎಂದು ತಿಳಿಸಿದರು. ಮಹೇಶ ಗೊಬ್ಬುರ, ಮಹೇಶ ಕೆಂಭಾವಿ, ಈಶ್ವರ ಹಿಪ್ಪರಗಿ, ಸಂತೋಷ ಹಿರೇಮಠ,ಶರಣಪ್ಪ ರೆಡ್ಡಿ ಸೇ–ರಿದಂತೆ ಅನೇಕರು ಇದ್ದರು.

–ಚಂದ್ರ ಶಾ ಗೌಡ.

# ಹೀಗೊಂದು ಮಾನ್ಯ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೊಂದು ಮನವಿ ಪತ್ರ



ಮಾನ್ಯರೆ,

ಈ ಮನವಿ ಪತ್ರದ ಮೂಲಕ ನಾವು ದಲಿತ ಅಲ್ಪಸಂಖ್ಯಾತ ಶೋಷಿತ ಸಮುದಾಯಗಳ ಒಕ್ಕೂಟ ಸಿಂಧನೂರು ತಮ್ಮಲ್ಲಿ ಒತ್ತಾಯಿಸುವ ಅದೇನೆಂದರೆ ನೈಸರ್ಗಿಕವಾದ ಮರಳನ್ನು ರಾತ್ರೋರಾತ್ರಿ ಅಕ್ರಮವಾಗಿ ಸಾಗಿಸುತ್ತಿರುವುದು ಸಿಂಧನೂರಿನಲ್ಲಿ ರಾಜಾರೋಷವಾಗಿ ಬಿಟ್ಟಿದೆ. ಜಿಲ್ಲೆಯೂ ಸೇರಿದಂತೆ ನಮ್ಮ ಸಿಂಧನೂರು ತಾಲ್ಲೂಕಿನಲ್ಲಿ ಬಹಿರಂಗವಾಗಿ ಪೋಲಿಸರ ಮತ್ತು ಅಧಿಕಾರಿಗಳ ಹೆಸರೇಳಿಕೊಂಡು ಹಾಗೂ ಮರಳಿಗೆ ಸಂಬಂಧಿಸಿದ ಇಲಾಖೆಯವರಿಗೆ ಹಾಗೂ ಪೋಲಿಸ್ ನವರಿಗೆ ಪ್ರತಿ ತಿಂಗಳು ಮಾಮೂಲಿಯನ್ನು ನೀಡುವುದರ ಮೂಲಕ ನಾವು ಅಕ್ರಮ ಮರಳನ್ನು ಬೇರೆ ಕಡೆ ಮಾರಾಟ ಮಾಡುತ್ತಿದ್ದೇವೆ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದಾರೆ. ಟಿಪ್ಪರ್ ಲಾರಿ ಟ್ರಾಕ್ಟರ್ ಗಳಲ್ಲಿ ತಾಲ್ಲೂಕಿನ ಹಳ್ಳ ನದಿ ದಂಡೆ ಪ್ರದೇಶಗಳಾದ ಕೆಂಗಲ್ ಅಲಬನೂರು ಗಿಣಿವಾರ ವಳಬಳ್ಳಾರಿ ಗೋನ್ವಾರ್ ಮಾಡಿಸಿರುವ ಸಿಂಗಾಪುರ ಮುಕ್ಕುಂದಾ ಆಯನೂರು ಸೇರಿದಂತೆ ಅಕ್ಕಪಕ್ಕದ ತಾಲ್ಲೂಕುಗಳಿಂದ ಮರಳು ದಂಧೆ ಜೋರಾಗಿ ನಡೆಯುತ್ತಿದ್ದು ಇಲ್ಲಿನ ಮರಳಿಗೆ ಬೆಂಗಳೂರು ನಗರ ಸೇರಿದಂತೆ ತಾಲ್ಲೂಕಿನಲ್ಲಿ ಹೆಚ್ಚಿನ ಬೇಡಿಕೆಯಿದ್ದು ಮರಳು ಬಂಗಾರವಾಗಿ ಮಾರ್ಪಟ್ಟಿದೆ.

ಇದನ್ನೇ ಬಂಡವಾಳ ಮಾಡಿಕೊಳ್ಳಲು ಪೋಲಿಸರ ಕೃಪಾಕಟಾಕ್ಷದಿಂದ ತಿಂಗಳು ವಂತಿಗೆ ನೀಡಿ ರಾಜಾರೋಷವಾಗಿ ಅಕ್ರಮ ಮರಳು ದಂಧೆ ನಡೆಯುತ್ತಿದ್ದು ಈ ಮರಳು ದಂಧೆಗೆ ತಾಲ್ಲೂಕಿನಲ್ಲಿ ಅನೇಕ ಜನ ಬಲಿಯಾದ ಉದಾಹರಣೆಗಳು ಇನ್ನೂ ನಮ್ಮ ಕಣ್ಣುಂದಿವೆ. ಕೂಡಲೇ ಜಿಲ್ಲಾಡಳಿತ ಹಾಗೂ ಜಿಲ್ಲಾ ಗಣಿ ಮತ್ತು ಭೂವಿಜ್ಞಾನ ಇಲಾಖೆ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳು ಅಕ್ರಮ ಮರಳು ದಂಧೆಗೆ ಕಡಿವಾಣ ಹಾಕಲು ಮುಂದಾಗಬೇಕು. ನೈಸರ್ಗಿಕ ಭೂಸಂಪನ್ಮೂಲವನ್ನು ರಕ್ಷಿಸಿ ಸರಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿರುವುದನ್ನು ತಪ್ಪಿಸಬೇಕೆಂದು ನಮ್ಮ ಒಕ್ಕೂಟದ ವಿನಂತಿಯಾಗಿದೆ.

ಬೇಡಿಕೆಗಳು :

1.ಸಿಂಧನೂರಿನಲ್ಲಿ ಅಕ್ರಮವಾಗಿ ಹಗಲು ರಾತ್ರಿ ಮರಳು ಸಾಗಾಣಿಕೆ ಮಾಡುವ ದಂಧೆಕೋರರನ್ನು ಬಂಧಿಸಿ ಕಾನೂನು ಕ್ರಮ ತೆಗೆದುಕೊಳ್ಳಬೇಕು.

2.ಅಕ್ರಮ ಮರಳು ತಡೆಗಟ್ಟುತ್ತೇವೆ ಎಂಬ ಸೋಗಿನಲ್ಲಿ ಕೆಲವು ಯುವಕರು ಅಕ್ರಮ ಮರಳು ದಂಧೆಕೋರರ ಜೊತೆಗೆ ಶಾಮೀಲಾಗಿರುವುದನ್ನು ತನಿಖೆ ನಡೆಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು.

3. ಸಿಂಧನೂರು ವಲಯದ ಕಂದಾಯ ಅಧಿಕಾ–ರಿಗಳು ಎಲ್ಲ ಪೊಲೀಸ್ ಅಧಿಕಾರಿಗಳು ಸೇರಿದಂತೆ ಕೆಳಹಂತದ ಪೊಲೀಸರ ದೂರವಾಣಿ ಕರೆ ತನಿಖೆ ನಡೆಸಿ ಕಚೇರಿಗೆ ದಂಧೆಕೋರರು ಬಂದು ಹೋಗಿರುವ ವಿಡಿಯೋ ದೃಶ್ಯಗಳನ್ನು ಸಂಗ್ರಹಿಸಿ, ಗುರುತಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಕೂಡಲೇ ನ್ಯಾಯಾಂಗ ತನಿಖಾ ತಂಡವನ್ನು ರಚಿಸಬೇಕು.

ಹೀಗೆ ಮೇಲಿನ ಮನವಿಯನ್ನು ಇಂದು ಸಿಂಧನೂರಿಗೆ ಆಗಮಿಸಿದ ಮಾನ್ಯ ಎಸ್ ಪಿಯವ–ರಿಗೆ ದಲಿತ ಅಲ್ಪಸಂಖ್ಯಾತ ಶೋಷಿತ ಸಮುದಾಯಗಳ ಒಕ್ಕೂಟದಿಂದ ಮನವಿಯನ್ನು ನಿಡಲಾಯಿತು.

ಈ ಸಂದರ್ಭದಲ್ಲಿ ಒಕ್ಕೂಟದ ಸಂಚಾಲಕರಾದ ಎಂ.ಗಂಗಾಧರ ಮಾತನಾಡಿದರು. ಸಂಚಾಲಕರಾದ, ವಿಜಯಕುಮಾರ್, ಮಾಬುಸಾಬ ಬೆಳ್ಳಟ್ಟಿ, ಸೈಯದ್ ರಬ್ಬಾನಿ ಜಾಗೀರದಾರ, ಹೆಚ್.ಆರ್.ಹೊಸಮನಿ, ನಾಗಪ್ಪ ಉಮಲೂಟಿ, ದೌವಲಸಾಬ ಮುದಗಲ್ ಸೇ–ರಿದಂತೆ ಇತರರು ಇದ್ದರು.



ಕರುನಾಡ ಕಂದ
ಸಂಪುಟ-1 | ಸಂಚಿಕೆ-5
ದಿನಾಂಕ: 01-01-2022 | ಪುಟಗಳು: 16

# ಶ್ರೀಲಂಕಾ ದೇಶದಲ್ಲಿ ಕಲಾವಿದ ಗವಿಶಿದ್ಧಯ್ಯ ಜ ಹಳ್ಳಿಕೇರಿಮಠ ರವರಿಗೆ ಗ್ಲೋಬಲ್ ಐಕಾನಿಕ್ ಅವಾರ್ಡ್ ಪ್ರಧಾನ




ಗದಗ. ಶ್ರೀಲಂಕಾ ದೇಶದ ಕೊಲಂಬೊ ನಗರದ ಮೂವಿನೆಕ್ ಕಾನ್ಫರೆನ್ಸ ಹಾಲ್ ನಲ್ಲಿ ಇಂಟ-ರ್ ನ್ಯಾಶನಲ್ ಕಲ್ಚರಲ್ ಪೆಸ್ಟ್ ಕೌನ್ಸಿಲ್ ಮತ್ತು ಗ್ಲೋಬಲ್ ಪೀಸ್ ಪೌಂಡಿಶನ್ ಸಮಿತಿ ವತಿಯಿಂದ ನಡೆದ 27ನೇ ಅಂತರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ಸಮಾರಂಭದಲ್ಲಿ ನೂರಾರು ಶಿಕ್ಷಣ ಸಂಸ್ಥೆಗಳ ಮೂಲಕ ಸಹಸ್ರಾರು ವಿದ್ಯಾರ್ಥಿಗಳಿಗೆ ಉಚಿತ ಜನಪದ ಕೂಗು ಶಿಕ್ಷಣ ನೀಡುವ ಜೊತೆಗೆ ನಾಡು ನುಡಿಯ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಾ ತಮ್ಮ ಕೃಷಿಯ ಬದುಕಿನೊಂದಿಗೆ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ಖ್ಯಾತ ಜನಪದ ಕಲಾವಿದ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಜಂತಲಿ ಶಿರೂರು ಗ್ರಾಮದ ಶ್ರೀ ಗವಿಶಿದ್ಧಯ್ಯ ಜ ಹಳ್ಳಿಕೇ-ರಿಮಠ ರವರ ಜೀವಮಾನದ ಸಾಧನೆಯನ್ನು ಪರಿಗಣಿಸಿ ಗ್ಲೋಬಲ್ ಐಕಾನಿಕ ಪ್ರಶಸ್ತಿ ಒಲಿದಿದೆ.

ಗಮನಸೆಳೆದ ಜನಪದ ಹಾಡುಗಳು..

ಶ್ರೀಲಂಕಾ ದೇಶದಲ್ಲಿ ನಡೆದ ಅಂತರಾಷ್ಟ್ರೀಯ ಸಾಂಸ್ಕೃತಿಕ ಉತ್ಸವದಲ್ಲಿ ಗವಿಶಿದ್ಧಯ್ಯ ಜ ಹಳ್ಳಿಕೇ-ರಿಮಠ ರವರು ಹಾಡಿದ ಲಾವಣಿ,ರಂಗಗೀತೆ, ಸುಗ್ಗಿ ಪದಗಳು,ಹಂತಿಪದಗಳು ಸೇರಿದಂತೆ ವಿವಿಧ ಪ್ರಕಾರದ ಜನಪದ ಗೀತೆಗಳು ಕೇಳಿಬಂದವಲ್ಲದೇ ಕನ್ನಡದ ಸ್ವಾಭಿಮಾನದ ಗೀತೆಗಳು ಎಲ್ಲರ ಗಮನಸೆಳೆದು ಕುಣಿಯುವಂತೆ ಮಾಡಿದವು.

ಈ ಸಂದರ್ಭದಲ್ಲಿ ಪರಮ ಪೂಜ್ಯ ಶ್ರೀ ಮಲಯ ಶಾಂತಮುನಿ ಶ್ರೀಗಳು ಶಿವಗಂಗೆ,ಕೂಕನೂರು ಅನ್ನದಾನೇಶ್ವರ ಮಠದ ಪೂಜ್ಯ ಶ್ರೀ ಮಹಾದೇವ ದೇವರು,ಈಅಅ ಚೇರ್ಮನ್ ಕೆ.ಪಿ ಮಂಜುನಾಥ ,ಖ್ಯಾತ ಉದ್ಯಮಿಗಳಾದ ಆಂಜನೇಯ, ಮುನಿರ್ ಬಾಬ್, ಸಾಹಿತಿ ಷಣ್ಮುಖಯ್ಯ ತೋಟದ, ಖ್ಯಾತ ಜನಪದ ಕಲಾವಿದ ಗೋನಾಸ್ವಾಮಿ,ಚಲನಚಿತ್ರ ನಿರ್ದೇಶಕ ಯಾಕುಬ್ ಮಲ್ವಾಡಿ,ವಿಶ್ವನಾಥ, ಎನ್ ಜಿ ಒ ಒಕ್ಕೂಟದ ಜಯಲಕ್ಷ್ಮಿ ಬಾಯಿ,ಸಾಹಿಗಳಾದ ಬಿ.ಎನ್ ಹೊರಪೇಟಿ,ಜನಪದ ಕಲಾವಿದ ಮೆಹಬೂಬ್ ಕಿಲ್ಲೆದಾರ,ಎನ್ ಗುರ್ಲೆಕೊಪ್ಪ ಸೇರಿದಂತೆ ಶ್ರೀಲಂಕಾ ದೇಶದ ಕವಿಗಳು,ಕಲಾವಿದರು ಪಾಲ್ಗೊಂಡಿದ್ದರು.

## ಮೇರುನಟ.ಪುನಿತ್ ರಾಜಕುಮಾರ್‌ಗೆ ನುಡಿನಮನ

# ಉದ್ಯಮಿ ಎಂ.ಐ.ಇಬ್ರಾಹಿಂಅಲಿ ಇವರಿಗೆ ರಕ್ತರಾತ್ರಿ ಚಾಲನಾ ಕಾರ್ಯಕ್ರಮದಲ್ಲಿ ಆತ್ಮೀಯ ಸನ್ಮಾನ






ಗಂಗಾವತಿ: ಇಲ್ಲಿನ ಪಬ್ಲಿಕ್ ಕ್ಲಬ್ ಆವರಣದಲ್ಲಿ ದಿ.ನಾಗರಾಜ್ ನಾಗಪ್ಪ ಶಿರವಾರ ನಗರ ಮತ್ತು ಗ್ರಾಮೀಣಾಭಿವೃದ್ಧಿ ಕಲಾ ಸಂಸ್ಥೆಯಿಂದ ಪ್ರದರ್ಶಿಸಲ್ಪಟ್ಟ ರಕ್ತರಾತ್ರಿ ನಾಟಕ ಚಾಲನಾ ಕಾರ್ಯಕ್ರಮದಲ್ಲಿ ಉದ್ಯಮಿ ಎಂ.ಐ.ಇಬ್ರಾಹಿಂಅಲಿ ಬೆಂಗಳೂರ ಇವರು ಸೇರಿದಂತೆ ಅನೇಕ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಮಿಡಿಯಕ್ಲಬ್ ಅಧ್ಯಕ್ಷ ರಾಮಮೂರ್ತಿ ನವಲಿ, ಕೊಪ್ಪಳ ಜಿಲ್ಲಾ ಕಸಾಪ ಅಧ್ಯಕ್ಷ ಶರಣೇಗೌಡ ಮಾಲಿಪಾಟೀಲ್, ಹಿರಿಯ ಇತಿಹಾಸ ಸಂಶೋಧಕ ಡಾ.ಶರಣಬಸಪ್ಪ ಕೋಲ್ಕಾರ್, ಸಾಹಿತಿಗಳಾದ ಎಸ್.ವಿ.ಪಾಟೀಲ್ ಗುಂಡೂರು, ಕರುಣಾವಾಣಿ ಪತ್ರಿಕೆ ಸಂಪಾದಕರಾದ ಡಾ.ಸಿ.ಮಹಾಲಕ್ಷ್ಮೀ ಕೇಸರಹಟ್ಟಿ, ಕಾರ್ಯಕ್ರಮದ ರೂವಾರಿ ವಿರುಪಾಕ್ಷಪ್ಪ ಶಿರವಾರ ಸಿನಿ ಕಲಾವಿದ ವಿಷ್ಣುತೀರ್ಥ ಜೋಷಿ ಇವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಗಂಗಾವತಿ ತಾಲೂಕಾ ಅಧ್ಯಕ್ಷ ನಾಗರಾಜ್ ಹೆಚ್.ಇಂಗಳಗಿ, ಹಾರ್ಮೋನಿಯಂ ಮೇಷ್ಟ್ರು ಕುರುಗೋಡು ಚನ್ನಪ್ಪ, ಪ್ರಾಚಾರ್ಯ ಬಸಪ್ಪ ನಾಗೋಲಿ, ಹೊಮ್ಮಿನಾಳ್ ಮಹಂತಯ್ಯ, ಯಂಕಪ್ಪ ಸಿ.ವಕೀಲರು, ಬಂಡ ಆದೇಪ್ಪ, ಪಂಪಯ್ಯಸ್ವಾಮಿ, ಜಂಬುನಾಥ ಐಲಿ, ಸಿದ್ದಪ್ಪ ನಾಯಕ ಸೇರಿದಂತೆ ಇತರರಿದ್ದರು.

ಇದಕ್ಕೂ ಮುನ್ನಾ ಇತ್ತೀಚಿಗೆ ಅಗಲಿದ ಮೇರುನಟ ಪುನೀತ್ ರಾಜುಕುಮಾರ್ ಅವ-ರಿಗೆ ಗಾಯಕ ಪಂಪಾಪತಿ ಇಂಗಳಗಿ ನುಡಿನಮನ ಸಲ್ಲಿಸಿದರು.

# ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಸಂವಿಧಾನ ಮತ್ತು ವಾಸ್ತವ !

ನಮ್ಮ ಭಾರತದ ಸಂವಿಧಾನವು ಮೂರು ಅಂಗಗಳಿಂದ ಕೂಡಿದೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಈ ಮೂರು ಅಂಗಗಳ ಮೂಲಕವೇ ನಮ್ಮ ದೇಶದ ಆಡಳಿತ ಸುವ್ಯವಸ್ಥಿತವಾಗಿ ಸಾಗಬೇಕಿದೆ. ಆದರೆ ವಾಸ್ತವದಲ್ಲಿ ಇದಕ್ಕೆ ತದ್ವಿರುದ್ಧ ಘಟನೆಗಳನ್ನು ನಾವು ಕಾಣುತ್ತೇವೆ. ಇದು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯ ಮತ್ತು ಸಂವಿಧಾನಕ್ಕೆ ಮಾಡುತ್ತಿರುವ ಅಪಚಾರವಾಗಿದೆ.

ಮೂರು ಅಂಗಗಳಲ್ಲಿ ಪ್ರಮುಖವಾದದ್ದು, ಶಾಸಕಾಂಗ. ಸಾಮಾನ್ಯ ಜನರಿಂದ ವೋಟಿನ ಹಕ್ಕುಗಳ ಮೂಲಕ ಚುನಾಯಿತರಾದ ಪ್ರತಿನಿಧಿಗಳು ಹಾಗೂ ರಚನೆಗೊಂಡ ಸರ್ಕಾರ ಈ ದೇಶದ ಕಟ್ಟಕಡೆಯ ಪ್ರಜೆಗೂ ಮೂಲ ಸೌಕರ್ಯಗಳು ದೊರೆಯುವಂತೆ ಶಾಸನಗಳನ್ನು ರೂಪಿಸುವುದೇ ಇದರ ಬಹುಮುಖ್ಯ ಕಾರ್ಯವಾಗಿದೆ, ಆದರೆ ಪ್ರಸ್ತುತ ದಿನಮಾನಗಳಲ್ಲಿ ಶಾಸಕಾಂಗಕ್ಕೆ ಪ್ರತಿನಿಧಿಗಳನ್ನು ಜನರು ವೋಟಿನ ಜೊತೆಗೆ ನೋಟಿನ ಮೂಲಕ ಆಯ್ಕೆ ಮಾಡುತ್ತಾರೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಈ ಹಿಂದೆಯೇ ಹೇಳಿದ್ದರು "ನಿಮಗೆ ವೋಟಿನ ಹಕ್ಕನ್ನು ನೀಡಿದ್ದೇನೆ. ನಿಮಗೆ ಸರಿಯಾದ ವ್ಯಕ್ತಿಯನ್ನು ನಿಮ್ಮ ಅಮೂಲ್ಯವಾದ ಮತವನ್ನು ಅವರಿಗೆ ನೀಡುವುದರ ಮೂಲಕ ಅವರನ್ನು ಆಯ್ಕೆ ಮಾಡಿ. ವೋಟು ನಿಮ್ಮ ಮನೆಯ ಮಗಳಿದ್ದಂತೆ ಅದನ್ನು ನೋಟಿಗಾಗಿ ಮಾ-ರಿಕೊಳ್ಳಬೇಡಿ" ಎಂದು. ಆದರೆ ನೋಟಿಲ್ಲ ಅಂದ್ರೆ ನಮ್ಮ ವೋಟಿಲ್ಲ ಎನ್ನುವಂತ ಮನೋಭಾವ ತುಂಬಾ ಜನರಲ್ಲಿ ಸಾಮಾನ್ಯವಾಗಿದೆ. ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಚುನಾವಣೆಯಲ್ಲಿ ಗೆಲ್ಲುವಂತಹ ಜನಪ್ರತಿನಿಧಿಗಳು ತಾವು ಚುನಾವಣೆಗಾಗಿ ಖರ್ಚು ಮಾಡಿದಂತ ಹಣವನ್ನು ಮರು ಜಮಾ ಮಾಡಲು ಅನೇಕ ಅಡ್ಡ ದಾರಿಗಳನ್ನು ಹಿಡಿದು ಜನಸಾಮಾನ್ಯರಿಗೆ ತಲುಪಬೇಕಾದ ಸೌಲಭ್ಯಗಳಿಗೆ ಕತ್ತರಿ ಹಾಕುತ್ತಾರೆ. ಈ ನಡುವೆ ಪ್ರತಿ ಇಲಾಖೆಯಿಂದ ಮಾಮೂಲಿ ವಸೂಲಿ ಮಾಡುವುದು ಸರ್ವೆ ಸಾಮಾನ್ಯವಾಗಿದೆ.

ಶಾಸಕಾಂಗ ರೂಪಿಸಿದ ಕಾನೂನುಗಳನ್ನು ಶಾಸನ ಸಭೆಯಲ್ಲಿ ಅಂಗೀಕಾರವಾದ ನಂತರ ಅವುಗಳನ್ನು ಕಾರ್ಯರೂಪಕ್ಕೆ ತರುವಂಥ ಕೆಲಸ ಕಾರ್ಯಾಂಗದ ಮುಖ್ಯ ಕರ್ತ್ಯವ್ಯವಾಗಿದೆ. ಆದರೆ ಈ ಕಾರ್ಯಂಗವೂ ಶಾಸಕಾಂಗದ ಕೈಗೊಂಬೆಯಾಗಿದೆ. ಏನೇ ಕಾರ್ಯಗಳನ್ನು ಮಾಡಿದರೂ ಶಾಸಕಾಂಗದ ಹಸ್ತಕ್ಷೇಪ ಇದ್ದೆ ಇರುತ್ತದೆ. ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾವಣೆಯಾದರೂ ಲಕ್ಷಾಂತರ ರೂಪಾಯಿಗಳನ್ನು ರಾಜಕಾರಣಿಗಳಿಗೆ ಸುರಿಯಬೇಕಾಗುತ್ತದೆ ಅಧಿಕಾ-ರಿಗಳು. ರಾಜಕಾರಣಿಗಳಿಗೆ ನೀಡಿದಂಥ ದುಡ್ಡನ್ನು ಮರು ಜಮಾ ಮಾಡಲು ಅವರೂ ಕೂಡ ಅನ್ಯ ಮಾರ್ಗವನ್ನು ಹುಡುಕಿಕೊಂಡು ಕಮಿಷನ್ ದಂಧೆ ಶುರು ಮಾಡುತ್ತಾರೆ. ಆ ದಂಧೆ ಪ್ರತಿ ಇಲಾಖೆಯಲ್ಲಿ ತಾಂಡವವಾಡುತ್ತಿದೆ. ಕಮಿಷನ್ ಕೊಡದಿದ್ದರೆ ಜನಸಾಮಾನ್ಯರ ಕಾರ್ಯಗಳಿಗೆ ತೊಂದರೆ ಉಂಟಾಗುತ್ತದೆ. ಕಮಿಷನ್ ಕೊಟ್ಟರೆ ಕೆಲಸಗಳು ಸರಳ ಎನ್ನುವಂತಾಗಿದೆ. ಕೊಟ್ಟಿಲ್ಲ ಅಂದ್ರೆ ಸಾಕು ಅನೇಕ ಕುಂಟು ನೆಪ ಹೇಳಿ ಜನಸಾಮಾನ್ಯರನ್ನು ಇಲಾಖೆಗೆ ಅಲೆದಾಡುವಂತೆ ಮಾಡುತ್ತಾರೆನ್ನುವುದು ಸಾರ್ವಜನಿಕರ ಬಹಿರಂಗ ಆರೋಪವಾಗಿರುವುದಂತೂ ಸತ್ಯ.

ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗ ರೂಪಿಸಿದಂತ ಕಾನೂನುಗಳನ್ನು ನಿರ್ವಹಿಸುವಂತ ಕಾರ್ಯ ನ್ಯಾಯಾಂಗದ್ದಾಗಿದೆ. ನಮ್ಮ ದೇಶದಲ್ಲಿ ನ್ಯಾಯಾಂಗಕ್ಕೆ ನಾವು ವಿಶೇಷವಾದ ಸ್ಥಾನಮಾನವನ್ನು ನೀಡಿದ್ದೇವೆ. ಆದರೆ ಪ್ರಸ್ತುತ ದಿನಮಾನಗಳಲ್ಲಿ ಸಾಕ್ಷ್ಯಾಧಾರಗಳ ಕೊರತೆಯಿಂದ ಬಲಾಢ್ಯರ ಹಣಬಲ, ತೋಳ್ಬಲ ಹಾಗೂ ರಾಜಕೀಯ



ಪ್ರಭಾವದಿಂದ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆಯಾಗದಂಥ-ಹ ಅದೆಷ್ಟೋ ಉದಾಹರಣೆಗಳಿವೆ. ಪೊಲೀಸ್ ಇಲಾಖೆಯ ಅನೇಕ ತಪ್ಪುಗಳಿಂದ, ಹಲ್ಲೆ ಮಾಡಿಸಿಕೊಂಡವರ ಮೇಲೆ ಪ್ರತಿ ದೂರು ದಾಖಲಿಸುವುದು, ಕೊಲೆ ಮಾಡಿದವರಿಗೆ ಜಾಮೀನು ನೀಡುವುದು, ಎಷ್ಟೋ ಜನ ಮಾಡದ ತಪ್ಪಿಗೆ ಶಿಕ್ಷೆಯನ್ನು ಅನುಭವಿಸಿ ಬಂದಂತಹ ಉದಾಹರಣೆಗಳು ಕಡಿಮೆಯೇನಿಲ್ಲ. ರಾಘವ ಶ್ರೀಗಳ ಪ್ರಕರಣದಲ್ಲಿ 16 ನ್ಯಾಯಮೂರ್ತಿಗಳು ಹಿಂದೆ ಸರಿದ ಘಟನೆ ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಬಲಿಷ್ಠ ರಾಜಕಾರಣಿಗಳ ಕೇಸನ್ನು ಇತ್ಯರ್ಥ ಮಾಡಲು ನ್ಯಾಯಮೂರ್ತಿಗಳು ದುಡ್ಡಿನ ಆಸೆಗೆ ಬಲಿಯಾಗಿ ಸಿಕ್ಕಿಬಿದ್ದಿ ಉದಾಹರಣೆಗಳು ನಮ್ಮಲ್ಲಿವೆ. ಮದ್ರಾಸ್ ಹೈಕೋರ್ಟಿನ ನ್ಯಾಯಮೂರ್ತಿಯೊಬ್ಬರು ಜೈಲಿಗೆ ಹೋದಂತ ಘಟನೆಗಳನ್ನು ನಾವೆಲ್ಲ ನೋಡಿದ್ದೇವೆ.

ಈ ದೇಶದ ಸಾಮಾನ್ಯ ಪ್ರಜೆಯೂ ಕೂಡ ಚುನಾಯಿತನಾಗಿ ದೇಶದ ಚುಕ್ಕಾಣಿ ಹಿಡಿಯಬಹುದು ಅಂತ ಕಾನೂನಿನಲ್ಲಿ ಉಲ್ಲೇಖವಿದೆ. ಆದರೆ ಪ್ರಸ್ತುತ ದಿನಮಾನಗಳಲ್ಲಿ ಪ್ರತಿ ಚುನಾವಣೆಗಳನ್ನು ನೋಡಿ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ವಿಧಾನಸಭೆ, ವಿಧಾನಪ-ರಿಷತ್, ಲೋಕಸಭೆ ಅನೇಕ ಚುನಾವಣೆಗಳು ಹೇಗೆ ನಡೆಯುತ್ತೇವೆ ಅಂತ ನಾವೆಲ್ಲ ಆತ್ಮಸಾಕ್ಷಿಗೆ ಪ್ರಶ್ನೆ ಮಾಡಿಕೊಳ್ಳಬೇಕಾಗಿದೆ ಬಂಧುಗಳೇ. ದುಡ್ಡು ಕೊಡದಿದ್ದರೆ ನಾವು ವೋಟು ಹಾಕಲ್ಲ, ಅವರು ದುಡ್ಡು ಕೊಡೋದು ಬಿಡಲ್ಲ, ಭ್ರಷ್ಟಾಚಾರ ತಾಂಡವವಾಡುತ್ತಿದೆ ದೇಶದಲ್ಲಿ ಪ್ರತಿ ಇಲಾಖೆಯಲ್ಲೂ ಭ್ರಷ್ಟಾಚಾರ ಕಾನೂನುಬಾಹಿರ ಅಂತ ಗೊತ್ತಿದ್ದರೂ ಅದು ಸರಳವಾಗಿ ಸಾಗುತ್ತಲೇ ಇದೆ. ಅದನ್ನು ತಡೆಗಟ್ಟಲು ಲೋಕಾಯುಕ್ತ, ಎಸಿಬಿಗಳು ಅನೇಕ ಇದ್ದರೂ ಪ್ರಯೋಜನವಿಲ್ಲದಂತಾಗಿದೆ. ದೇಶದಲ್ಲಿ ಕಾನೂನು ಅಂದ್ರೆ ಎಲ್ಲರಿಗೂ ಸಮಾನ. ಶ್ರೀಮಂತರೇ ತಪ್ಪು ಮಾಡಲಿ ಅಥವಾ ಬಡವರೆ ತಪ್ಪು ಮಾಡಲಿ, ತಪ್ಪಿತಸ್ಥರಿಗೆ ಶಿಕ್ಷೆ ನೀಡಲೇಬೇಕು ಅನ್ನುವುದು ಸಂವಿಧಾನದ ನಿಯಮ. ಆದರೆ, ಕಾನೂನು ಉಳ್ಳವರ ಮತ್ತು ಬಲಿಷ್ಠರ ಪಾಲಾಗುತ್ತಿದೆ. ರಾಜ-ಕೀಯದಲ್ಲಿ ಬಲಿಷ್ಠವಾದವರು, ಸ್ಥಿತಿವಂತರು ಏನೇ ತಪ್ಪು ಮಾಡಲಿ ಅದನ್ನು ಮುಚ್ಚಿ ಹಾಕಲು ಇಡೀ ಸರ್ಕಾರವೇ ಅವರ ಅಡಿಯಾಳಾಗಿ ಕೆಲಸ ಮಾಡುತ್ತದೆ, ಅದು ಕೊಲೆ, ಅತ್ಯಾಚಾರ, ಹಲ್ಲೆ, ಇತ್ಯಾದಿ ಏನೇ ಆಗಿರಲಿ. ಸರ್ಕಾರ ಅವರ ಪರವಾಗಿ ನಿಲ್ಲುತ್ತದೆ. ಇದೇ ತಪ್ಪು ಬಡವರು, ನಿರ್ಗತಿಕರು ಮಾಡಿದರೆ ಅದೆಷ್ಟು ಬೇಗ ನೀವು ಅವರನ್ನು ಬಂಧಿಸಿ ಶಿಕ್ಷಿಸುವಲ್ಲಿ ಯಶಸ್ವಿಯಾಗುತ್ತೀರಿ ? ಯಾಕೆ ಶ್ರೀಮಂತ-ರಿಗೊಂದು ಕಾನೂನು ಬಡವರಿಗೊಂದು ಕಾನೂನು ? ಈ ರೀತಿ ಕಾನೂನು ದುರ್ಬಳಕೆಯಾದರೆ ಸಂವಿಧಾನಕ್ಕೆ ಮಾಡಿದ ಅಪಮಾನವಲ್ಲವೇ ??

-ಹೆಚ್ ಕೆ ದಿದ್ದಿಗಿ

ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ದೂರದೃಷ್ಟಿಯ ಮಹಾನಾಯಕ ಅಟಲ್ ಬಿಹಾರಿ ವಾಜಪೇಯಿ

ದೇಶ ಕಂಡ ಹಿರಿಯ ರಾಜಕೀಯ ಮುತ್ಸದ್ದಿ, ಸುಮಾರು ನಾಲ್ಕು ದಶಕದ ಕಾಲ ರಾಜಕಾರಣದಲ್ಲಿ ಅಜಾತ ಶತ್ರುವೆಂದೇ ಖ್ಯಾತಿ ಪಡೆದ

ಅಭಿವೃದ್ಧಿಯ ಹರಿಕಾರ, ವಿಶ್ವ ಕಂಡ ಧೀಮಂತ ನಾಯಕ ಎಂದೇ ಪ್ರಸಿದ್ಧರಾಗಿದ್ದವರು ದಿವಂಗತ ಅಟಲ್ ಬಿಹಾರಿ ವಾಜಪೇಯಿ ಜಿ ಯವರು. ಅಪ್ರತಿಮ ರಾಜಕೀಯ ಸಂತರಾಗಿ, ಸ್ನೇಹ ಮಯ ಸರಳ, ಸೌಜನ್ಯಾ ಮೂರ್ತಿಯಾಗಿ ಈ ಪುಣ್ಯ ಭೂಮಿಯಲ್ಲಿ ಕಾರ್ಯ ನಿರ್ವಹಣೆ ಮಾಡಿ ಎಲ್ಲರಿಂದಲೂ ಸರಿ ಸೈ ಅನಿಸಿಕೊಂಡ ಹೆಗ್ಗಳಿಕೆ ಇವರದು.ಅಟಲ್ ಜೀಯವರ ಆದರ್ಶ ನಿಸ್ವಾರ್ಥದ  ನಿಲುವು ಹಾಗೂ ಪ್ರಾಮಾಣಿಕತೆಯನ್ನು ಯಾರು ಪ್ರಶ್ನಿಸುವಂತಿಲ್ಲ.

ಅವರ ಜೀವನದುದ್ದಕ್ಕೂ ಕರ್ತವ್ಯನಿಷ್ಠೆ, ನ್ಯಾಯಬದ್ಧ ತೀರ್ಮಾನಗಳು, ಅಭಿವೃದ್ಧಿಯ ವಿಚಾರಗಳು ಸೇರಿದಂತೆ ಇನ್ನಿತರ ಸಮಾಜಮುಖಿ ಸೇವೆಗಳಲ್ಲಿ ಯಾವುದೇ ರೀತಿಯ ರಾಜಿ ಮಾಡಿಕೊಳ್ಳದೇ ಅಂದರೆ ಸ್ವಾರ್ಥ ರಾಜಕೀಯ ಮಾಡದೆ ದೇಶದ ಉನ್ನತಿಗಾಗಿ ಶ್ರಮಿಸಿದಾರೆ. ನುಡಿದಂತೆ ನಡೆಯುವ ಮೂಲಕ ಜನಸಾಮಾನ್ಯರಿಗೆ ನೀಡಿರುವ ಆಶೋತ್ತರಗಳನ್ನು ಈಡೇರಿಸಲು ಪ್ರಮಾಣಿಕವಾಗಿ  ಪ್ರಯತ್ನ ಮಾಡಿ ನಿಸ್ವಾರ್ಥತೆಯನ್ನು ದೇಶದ ಉದ್ದಗಲಕ್ಕೂ ವಿಸ್ತರಿಸಿ, ಕಾಯ ವಾಚ ಮನಸ್ ಸಾಕ್ಷಿಯಾಗಿ ಸೇವೆ ಸಲ್ಲಿಸುವ ಮೂಲಕ ಸೇವೆಯೇ ಶ್ರೇಷ್ಠ ಜೀವನವೆಂದು ತಿಳಿದ ಬದುಕಿದ ಸಂತ ಎಂದು ಹೆಮ್ಮೆಯಿಂದ ಹೇಳಲು ಬಯಸುತ್ತೇವೆ. ಸದಾ ದೇಶದ ಉನ್ನತಿಗಾಗಿ ಚಿಂತಿಸುವ, ಗಡಿ ಭದ್ರತೆಗಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳುವ ಮೂಲಕ ವಿರೋಧಿ ದೇಶಗಳು ನಡುಗುವಂತೆ ಮಾಡಿದ ಕೆಚ್ಚೆದೆಯ ಮಹಾನ್ ನಾಯಕ, ದೇಶದ ಉದ್ದಗಲಕ್ಕೂ ಸಂಚರಿಸಿ ಸೌಹಾರ್ದತೆಯ ವಾತಾವರಣವನ್ನು ನಿರ್ಮಾಣ ಮಾಡಿ ಜನರ ನೋವುಗಳಿಗೆ ಮಿಡಿದಿದ್ದಾರೆ.ಹೀಗೆ ಇವರ ಕಾರ್ಯ ಶೈಲಿ ಸಹ ಕೊನೆಯವರೆಗೂ ಅವರು ಅಂದುಕೊಂಡಂತೆ ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವ ಮೂಲಕ ವಿಶ್ವಾಸಕ್ಕೆ ಚ್ಯುತಿ ಬರದಂತೆ ನಡೆದುಕೊಂಡಿರುತ್ತಾರೆ.

ಅವರ ತ್ಯಾಗ, ಕೆಚ್ಚೆದೆಯ ಹೋರಾಟ, ದೇಶ ಪ್ರೇಮ ಮತ್ತು ನಿಷ್ಕಳಂಕ ವ್ಯಕ್ತಿತ್ವ ನಮಗೆಲ್ಲರಿಗೂ ಸ್ಫೂರ್ತಿ ಎಂದರೆ ತಪ್ಪಾಗಲಾರದು.

ವಾಜಪೇಯಿಜಿ ಹುಟ್ಟಿದ್ದು ಮಧ್ಯ ಪ್ರದೇಶ ರಾಜ್ಯದ ಗ್ವಾಲಿಯರನ ಶಿಂಥೆ ದಂಡು ಪ್ರದೇಶದ ಕೃಷ್ಣ ಬಿಹಾರಿ ವಾಜಪೇಯಿ ಮತ್ತು ಕೃಷ್ಣಾದೇವಿ ದಂಪತಿಗಳ ಮಗನಾಗಿ 1924 ಡಿಸೆಂಬರ್ 25 ರಂದು ಜನಿಸಿದರು.

ಗ್ವಾಲಿಯರನ ಗೋರಖಿ ವಿದ್ಯಾಲಯದಲ್ಲಿ ಅಟಲ್ ಜಿ ಯವರು ಮಿಡಲ್ ಪರೀಕ್ಷೆಯನ್ನು ಪಾಸ ಮಾಡುವ ಮೂಲಕ ಶಿಕ್ಷಣ ಪಡೆದು.ಗ್ವಾಲಿಯರ್ ದ ವಿಕ್ಟೋರಿಯಾ ಕಾಲೇಜಿನಲ್ಲಿ ಬಿ.ಎ ತರಗತಿಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸು ಮಾಡಿದರು. ಅಟಲ್ ರವರು ಮುಂದೆ ಕಾನಾಪುರದ ಡಿ.ಎ.ಬಿ. ಕಾಲೇಜಿನಿಂದ ರಾಜ್ಯಶಾಸ್ತ್ರದಲ್ಲಿ ಎಂ.ಎ ಸ್ನಾತಕೋತ್ತರ ಪದವಿ ಪಡೆದರು. ಮುಂದೆ ಎಂ.ಎ ಪರೀಕ್ಷೆಯಲ್ಲಿ ಸಹ ತೇರ್ಗಡೆಯಾದರು. ಅದೇ ರೀತಿ ನ್ಯಾಯಶಾಸ್ತ್ರದಲ್ಲಿ(ಐ.ಐ.ಃ) ಪದವಿ ಪಡೆದುಕೊಂಡಿದ್ದರು. ಇಂತಹ ಸಮಯದಲ್ಲಿ ಅಂದರೆ ಅವರ ಶಾಲಾ ದಿನಗಳಲ್ಲೇ ಅಟಲ್ ಜಿ ಉತ್ತಮ ಭಾಷಣಕಾರರಾಗಿದ್ದರು. ಶಾಲೆಯಲ್ಲಿ ನಡೆಯುವ ಚರ್ಚಾ ಸ್ಪರ್ಧೆ ಭಾಗವಹಿಸಿ ಪ್ರಶಸ್ತಿ ಗಳಿಸುತ್ತಿದ್ದರು. ಯಾವುದೇ ಪರೀಕ್ಷೆಯೇ ಆಗಲಿ ಅಟಲ್ ಜಿ ಕ್ಲಾಸಿಗೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಿದರು ಎಂಬುದು ಅವರ ಜೀವನದ ಬಗೆ ಕಳೆದುಕೊಂಡಾಗ ಗೊತ್ತಾಗುತ್ತದೆ.

ಇನ್ನು ಅಟಲ್ ಜಿ ಗೆ ಶಾಲಾ ಪುಸ್ತಕಗಳಿಗಿಂತ ಆಧ್ಯಾತ್ಮಿಕ. ಪೌರಾಣಿಕ, ದೇಶ ಭಕ್ತಿ ಪುಸ್ತಕಗಳ ಓದುವುದು ಅವರಿಗೆ ಹೆಚ್ಚು ಆಸಕ್ತಿದಾಯಕವಾಗಿತ್ತು. ಕಥೆ, ಕಾದಂಬರಿ ಹಾಗೂ ಸಾಹಿತ್ಯ ಅವರಿಗೆ ಅಚ್ಚು ಮೆಚ್ಚು. ಹಾಗಾಗಿ ಸಾಹಿತ್ಯ ವಲಯದ ವಾತಾವರಣದಿಂದ ಅಟಲ್ ಜಿಯವರು ಬೆಳೆದು ಬಂದರು ಜೊತೆಗೆ ಸಾಹಿತ್ಯ ಪ್ರೇಮ ಬೆಳೆಸಿಕೊಂಡು ಬಂದಿದ್ದು ಕಾಣುತ್ತಿವೆ. ಇಂಥ ವೈಚಾರಿಕ ವಿಚಾರಗಳಿಂದ ಬೆಳೆದು ಬಂದ ಅಟಲ್ ಜಿ ಯವರು ದೇಶ  ಪ್ರೇಮದ ಮತ್ತು ಸಾಹಿತ್ಯ ಸೇವೆಯ ಕುರಿತು ಅಪಾರ ಅಭಿಮಾನ ಹೊಂದಿದರು. ಇದೆ ನಿಟ್ಟಿನಲ್ಲಿ ಅವರು ಕೊನೆಯವರೆಗೂ ಹೆಜ್ಜೆ ಹಾಕಿದರು ಎಂಬುದು ಅವರ ಸಾಹಿತ್ಯ ರಚನೆಯಿಂದ ನಮಗೆಲ್ಲರಿಗೂ ತಿಳಿದುಬರುತ್ತದೆ. ಇನ್ನು ಪತ್ರಿಕಾ ರಂಗದಲ್ಲಿ ಅಟಲ್ ಜಿಯವರ ಅಧ್ಭುತ್ ಬರಹದ ಸಾಧನೆ ದೊಡ್ಡದು. ಅಟಲ್ ಜಿ ಯವರು ಪತ್ರಿಕಾ ರಂಗದಲ್ಲೂ ಕಾಲಿಟ್ಟು ರಾಷ್ಟ್ರಧರ್ಮ, ಪಾಂಚಜನ್ಯ, ಸ್ವದೇಶ, ವೀರ ಅರ್ಜುನ್ ಪತ್ರಿಕೆಗಳಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿದರು.  ಅವರ ಬರಹ ಬಹಳ ಹರಿತವಾಗಿತ್ತು. ಓದುಗರ ಮೇಲೆ ಅದು ಅಪಾರವಾದ ಪರಿಣಾಮ ಬೀರುತ್ತು ಎಂದು ತಿಳಿದುಬರುತ್ತದೆ.

1951 ರಲ್ಲಿ ಭಾರತೀಯ ಜನ ಸಂಘ ಉದಯವಾದ ನಂತರ ಇವರ ರಾಜಕೀಯ ಜೀವನ ಆರಂಭವಾಯಿತು. ಈ ಸಂಘದ ಸಂಸ್ಥಾಪಕ ಸದಸ್ಯರಲ್ಲೊಬ್ಬರು ಅಟಲ್ ಜಿ ಎಂದರೆ ತಪ್ಪಾಗಲಾರದು. ಜನ ಸಂಘ ಪಂಡಿತ್ ದೀನದಯಾಳ ಉಪಾಧ್ಯಾಯರ ಮಾರ್ಗ ದರ್ಶನದಲ್ಲಿ ಕಾಂಗ್ರೆಸ್ ಗೆ ಪ್ರಬಲ ವಿರೋಧ ಪಕ್ಷವಾಗಿ ಬೆಳೆದಾಗ ಅಂದರೆ 1951 ರಲ್ಲಿ ಭಾರತದಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆದಾಗ ಅಟಲ್ ಜಿ ದೇಶದ ನಾನಾ ಭಾಗಗಳಲ್ಲಿ ಸಂಚರಿಸಿ ಚುನಾವಣಾ ಪ್ರಚಾರ ಮಾಡಿದರು. ಬಲರಾಮ್ ಪುರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ವಿಜಯ ಸಾಧಿಸಿದರು. ಮುಂದೆ 1962 ರಲ್ಲಿ ಅಟಲ್ ಜಿ ಸೋತರು. ಆದರೆ ಅವರು ಕುಗ್ಗದೆ 1967 ಮತ್ತು 1971 ರಲ್ಲಿ ಮತ್ತೆ ಪ್ರಚಂಡ ವಿಜಯ ಸಾಧಿಸಿದರು ಎನ್ನುವುದು ನಾವ್ಯಾರು ಮರೆಯಬಾರದು. ಇದಾದ ನಂತರ 1975 ರಲ್ಲಿ ಇಂದಿರಾ ಗಾಂಧಿ ಸರ್ಕಾರ ತುರ್ತು ಪರಿಸ್ಥಿತಿ ಘೋಷಿಸಿತು. ಆಗ ಅಟಲ್ ಜಿಯವರು, ಇಂದಿರಾ ಗಾಂಧಿ ಸರ್ಕಾರದ ವಿರುದ್ದ ಹೋರಾಡಿ ಜೈಲು ಸೇರಿದರು. ಇಂದಿರಾ ಆಡಳಿತ ಕೊನೆಗೊಳ್ಳುವ ತನಕ ಜೈಲಿನಲ್ಲಿದ್ದರು ಬೀಧುಗಳೆ.

1977 ರ ಚುನಾವಣೆ ಸಂಧರ್ಭದಲ್ಲಿ ಅಟಲ್ ಜಿ ತಮ್ಮ ಸಂಗಡಿಗರೊಂದಿಗೆ ಜನತಾ ಪಕ್ಷ ಸೇರಿದರು. ಜನ ಸಂಘವನ್ನು ಜನತಾ ಪಕ್ಷದಲ್ಲಿ ವಿಲೀನಗೊಳಿಸಿದರು. ಚುನಾವಣೆಯಲ್ಲಿ ಜನತಾ ಪಕ್ಷದ ಅಭ್ಯರ್ಥಿ ಯಾಗಿ ಸ್ಪರ್ಧಿಸಿ ಕಾಂಗ್ರೇಸ್ ಅಭ್ಯರ್ಥಿಯನ್ನು ಸೋಲಿಸಿದರು.ಇದಾದ ನಂತರ

1977 ರಲ್ಲಿ ಇಂದಿರಾ ಸರ್ಕಾರ ಮಣ್ಣು ಮುಕ್ಕಿತು. ಮೊರಾರ್ಜಿ ದೇಸಾಯಿ ನೇತೃತ್ವದ ಸರ್ಕಾರ ಸ್ಥಾಪನೆಯಾಯಿತು. ಅದರಲ್ಲಿ ಅಟಲ್ ಜಿ ವಿದೇಶಾಂಗ ಸಚಿವರಾದರು.

ಆ ವೇಳೆಯಲ್ಲಿ ಪಾಕಿಸ್ತಾನ. ಚೀನಾ, ರಷಿಯಾ ದೇಶಗಳೊಂದಿಗೆ ಒಳ್ಳೆಯ ಸಂಬಂಧ ಬೆಳೆಸಿದ ಕೀರ್ತಿ ಅಟಲ್ ರಿಗೆ ಸಲ್ಲುತ್ತದೆ. ವಿದೇಶಾಂಗ ಮಂತ್ರಿಯಾಗಿ ವಾಶಿಂಗ್ಟನ್ ನಲ್ಲಿ ನಡೆದ ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ಹಿಂದಿಯಲ್ಲಿ ಭಾಷಣ ಮಾಡಿ ಕೀರ್ತಿ ಇವರಿಗೆ ಸಲ್ಲುತ್ತದೆ.

ಮುಂದೆ ಮೊರಾರ್ಜಿ ದೇಸಾಯಿಯವರ ಸರ್ಕಾರ ಕೇವಲ ಎರಡು ವರ್ಷ ಆಡಳಿತ ನಡೆಸಿದ ನಂತರ ಸರ್ಕಾರ ಬಿದ್ದುಹೋಯಿತು. 1980ರಲ್ಲಿ ಚುನಾವಣೆ ನಡೆಯಿತು. ಆಗ ಜನತಾ ಪಕ್ಷ ತೊರೆದ ಅಟಲ್ ಜಿ ಭಾರತೀಯ ಜನತಾ ಪಕ್ಷ(ಬಿ. ಜೆ. ಪಿ) ಸ್ಥಾಪಿಸಿದರು. ಬಿಜೆಪಿಯಿಂದ ಸ್ಪರ್ಧಿಸಿ ಅಟಲ್ ಜಿ ಗೆದ್ದರು. ಪಕ್ಷವನ್ನು ಬೆಳೆಸಲು ದೇಶದ ಉದ್ದಗಲಕ್ಕೂ ಸಂಚರಿಸಿ ಪಕ್ಷವನ್ನು ಸಂಘಟಿಸಿ, ಬಹಳ ಶ್ರಮ ಪಟ್ಟರು.  ಹೀಗೆ ಬಿಜೆಪಿಯನ್ನು ಪ್ರಬಲ ರಾಜಕೀಯ ಪಕ್ಷವಾಗಿ ರೂಪಿಸಿದರು. ಆದರೆ 1984 ರಲ್ಲಿ ನಡೆದ ಚುನಾವಣೆಯಲ್ಲಿ ಸೋತರು. ಸೋತರು ಎದೆಗುಂದದೆ ಪಕ್ಷ ಬಲವರ್ಧನೆ ಮಾಡಿ ಮುಂದೆ ನಡೆದ ಲಕ್ನೋ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ 1991, 1996, 1998ರಲ್ಲಿ  ಸತತವಾಗಿ ಅದೇ ಕ್ಷೇತ್ರದಿಂದ ಆಯ್ಕೆಯಾಗಿದ್ದು ಐತಿಹಾಸದ ಪುಟದಲ್ಲಿ ದಾಖಲಾಗಿದೆ. ಅಟಲ್ ಜಿ ಯವರು ಸತತವಾಗಿ ಗೆಲುವಿನ ದಾರಿಯಲ್ಲಿ ಸಾಗುತ್ತಾ,

ದೇಶ ಸೇವೆಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ತರುವಾಯ

1996 ರಲ್ಲಿ ದೇಶದ ಪ್ರಧಾನಮಂತ್ರಿಯಾದರು ಆದರೆ 13 ದಿನದಲ್ಲೇ ಬಹುಮತವಿಲ್ಲದ ಕಾರಣ ಸರ್ಕಾರ ಬಿದ್ದುಹೋಯಿತು. ನಂತರ ನಡೆದ ಚುನಾವಣೆಯಲ್ಲಿ,  ಮತ್ತೆ ಜಯಗಳಿಸುವ ಮೂಲಕ 1998 ರಲ್ಲಿ 2ನೇ ಬಾರಿಗೆ ಮತ್ತೆ ದೇಶದ ಚುಕ್ಕಾಣಿಯನ್ನು ಹಿಡಿದರು. ಆದರೆ ಆ ಸರ್ಕಾರ ಸಹ 13 ತಿಂಗಳಿಗೆ ಅಂತ್ಯವಾಯಿತು. ಮತ್ತೆ ಎದೆಗುಂದದೆ ಧೈರ್ಯದಿಂದ ದೇಶದ ಜನಸಾಮಾನ್ಯರ ಬಳಿಗೆ ತೆರಳಿ ಅವರು ಕೈಗೊಂಡ ಅವಧಿಯಲ್ಲಿ ಅಭಿವೃದ್ಧಿಯ ವಿಚಾರಗಳನ್ನು ಜನರಿಗೆ ತಿಳಿಸಿದರು. ತಿಳಿಸಿದ ಪ್ರಯುಕ್ತ ಮತ್ತೊಮ್ಮೆ

ಜನಸಾಮಾನ್ಯರ ವಿಶ್ವಾಸ ಗೆದ್ದು 1999ರಲ್ಲಿ 3ನೇ ಬಾರಿಗೆ ಅಟಲ್ ಜಿ ಭಾರತದ ಪ್ರಧಾನಿಯಾದರು. ಮೊಟ್ಟ ಮೊದಲ ಬಾರಿಗೆ ಚಿಕ್ಕ ಚಿಕ್ಕ ಪಕ್ಷಗಳ ಬೆಂಬಲ ಪಡೆದುಕೊಂಡು ಸರ್ಕಾರ ನಡೆಸಿದರು.

ಇದೆ ಸಂದರ್ಭದಲ್ಲಿ ದೇಶದ ಅಭಿವೃದ್ಧಿಗಾಗಿ ಹತ್ತು ಹಲವು ಯೋಜನೆಗಳು ರೂಪಿಸಿದರು.ಇವರ ಅಧಿಕಾರವಾಧಿಯಲ್ಲಿ ಭಾರತ ಅಭಿರುದ್ದಿ ಪಥದತ್ತ ಸಾಗಿತು. ಮಕ್ಕಳ ಶಿಕ್ಷಣ ಉತ್ತಮಗೊಳಿಸಲು ಸರ್ವ ಶಿಕ್ಷಣ ಅಭಿಯಾನ ಯೋಜನೆ, ಹಿಂದೂ ಮುಸ್ಲಿಂ ಸೌಹಾರ್ದತೆಗಾಗಿ ಲಾಹೋರ್ ಬಸ್ ಸಂಚಾರ ವ್ಯವಸ್ಥೆ, ದೇಶದ ಮಹಾ ನಗರಗಳನ್ನು ಜೋಡಿಸುವ ಸಲುವಾಗಿ ಕೈಗೊಂಡ ರಾಷ್ಟ್ರೀಯ ಹೆದ್ದಾರಿ ಯೋಜನೆ. ಪ್ರತಿ ಹಳ್ಳಿಗೂ ರಸ್ತೆ ನಿರ್ಮಿಸಲು ತಂದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗಳು ಹೀಗೆ ಹತ್ತು ಹಲವು ಹೊಸ ಹೊಸ ಯೋಜನೆಗಳನ್ನು ತರುವ ಮೂಲಕ ದೇಶವು ಅಭಿವೃದ್ಧಿ ದಿಕ್ಕಿನಲ್ಲಿ ಸಾಗುವಂತೆ ಮಾಡಿದರು. ಮಾಡುವ ಮೂಲಕ ಅಣ್ವಸ್ತ್ರ ಪರೀಕ್ಷೆ ನಡೆಸಿ ವಿಶ್ವದ ಗಮನ ಸೆಳೆದರು.ಪಾಕಿಸ್ತಾನ ವಿರುದ್ದ ನಡೆದ ಕಾರ್ಗಿಲ್ ಯುದ್ದದಲ್ಲಿ ಮಾಡಿ, ವಿಜಯ ಪಾತಕೆ ಹಾರಿಸಿದರು.ಭಾರತದ ಅರ್ಥಿಕ, ಸಾಮಾಜಿಕ, ಅಂತರಿಕ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಕೀರ್ತಿ ಪಾತಕೆಯನ್ನು ಬಾನೇತರಕ್ಕೇ ಮುಟ್ಟಿಸಿದರು.

ಸ್ವಾರ್ಥ ರಾಜಕೀಯ ಮಾಡದೇ, ನಿಸ್ವಾರ್ಥಯಾಗಿ

ದೇಶದ ಶ್ರೇಯಸ್ಸಿಗಾಗಿ  ಹಗಲಿರುಳು ದುಡಿದು, ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡಿ ಜನಸಾಮಾನ್ಯರಿಂದ ಬೇಷ್ ಎನಿಸಿಕೊಂಡಿದ್ದಾರೆ.

ಅಪರೂಪದ ಜನನಾಯಕ :

ದೇಶ ಕಂಡ ಅಪರೂಪದ ನಾಯಕರಾಗಿ, ಉತ್ತಮ ಭಾಷಣಕಾರರಾಗಿ, ತಮ್ಮ ಪ್ರಖರ ಮಾತಿನಿಂದ ಜನರನ್ನು ಸೆಳೆಯುವಂತವರಾಗಿದ್ದರು. ಅವರ ಭಾಷಣ ಕೇಳಲು ಸಹಸ್ರಾರು ಜನ ಸೇರುತ್ತಿದ್ದರು. ಸಂಸತ್ತಿನಲ್ಲಿ ಯಾವುದೇ ವಿಷಯ ಮಾತನಾಡುವಾಗ ಅಟಲ್ ಜಿ ತಮ್ಮ ವಾದವನ್ನು ನಿಚ್ಚಿತ ರೂಪದಲ್ಲಿ ಮಂಡಿಸುತ್ತಿದ್ದರು. ಸರಳವಾಗಿ ಎಲ್ಲರಿಗೂ ಅರ್ಥವಾಗುವ ಹಾಗೇ ಮಾತನಾಡುತ್ತಿದ್ದರು. ಉದ್ರಿಕ್ತ ಅಥವಾ ಉದ್ರೇಕವಾದ ಭಾವನೆ ಅವರ ನಡತೆ ಮತ್ತು ನಡುವಳಿಯಲ್ಲಿ ಎಂದು ಕಂಡು ಬಂದಿಲ್ಲ. ಅವರ ಮಾತುಗಳಲ್ಲಿ ಯಾವಾಗಲೂ ಪ್ರಮಾಣಿಕತೆಯೂ ಎದ್ದು ಕಾಣುತ್ತಿತ್ತು.


ಅವರು ಆಡಿದ ಮಾತು ಮಾತಲ್ಲ ಅದು ಮುತ್ತು. ಆ ಸರಳ ಮಾತುಗಾರಿಕೆ ಶುದ್ದ ಸ್ವಚ್ಚ ಮಧುರ ಹಾಗೂ ಕಾವ್ಯಮಯವಾಗಿತ್ತು.ಯಾರೊಂದಿಗೂ ದ್ವೇಷ ಕಟ್ಟಿಕೊಳ್ಳದೇ, ಎಲ್ಲರೊಂದಿಗೆ ಸ್ನೇಹಮಯ ಜೀವನ ಸಾಗಿಸಿದರು. ಎಲ್ಲ ರಾಜಕೀಯ ಮುಖಂಡರ ಅಚ್ಚುಮೆಚ್ಚಿನ ನಾಯಕರಾಗಿದ್ದರು.ಇವರು ರಾಜಕಾರಣದೊಂದಿಗೆ ಅನೇಕ ಸಾಮಾಜಿಕ, ಸಾಂಸ್ಕಾಂತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದುಂಟು. 1961 ರಿಂದ ಬಹುಕಾಲ ರಾಷ್ಟ್ರೀಯ ಭಾವೈಕ್ಯತಾ ಮಂಡಳಿಯ ಸದಸ್ಯರು. ಆಲ್ ಇಂಡಿಯ ಸ್ಟೇಷನ್ ಮಾಸ್ಟರ್ಸ್ ಹಾಗೂ ಅಸಿಸ್ಟೆಂಟ್ಸ್ ಸ್ಟೇಷನ್ ಮಾಸ್ಟರ್ಸ್ ಅಸೋಸಿಯೇಷನ್‌ನ ಅಧ್ಯಕ್ಷರಾಗಿದ್ದರು. ಪಂಡಿತ್ ದಿನದಯಾಳು ಉಪಾಧ್ಯಾಯ ಸ್ಮಾರಕ ಸಮಿತಿ, ದೀನದಯಾಳು ಧಾಮ, ಜನ್ಮಭೂಮಿ ಸ್ಮಾರಕ ಸಮಿತಿಗಳ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇದಲ್ಲದೆ ರಾಜ್ಯಸಭೆ, ಲೋಕಸಭೆಗಳ ಅನೇಕ ಸಮಿತಿಗಳಲ್ಲಿ ಕೆಲಸ ಮಾಡಿದ್ದಾರೆ.  ರಾಷ್ಟ್ರೀಯ ಪ್ರಜಾಸತ್ತಾತ್ಮಕ ಎಂಬ ಒಕ್ಕೂಟವನ್ನು ರಚಿಸಿ ಮೂರು ಬಾರಿ ಪ್ರಧಾನಮಂತ್ರಿಗಳಾಗಿ ಸರ್ಕಾರ ನಡೆಸಿ, ಅನಿವಾರ್ಯವಾದ ಒಕ್ಕೂಟ ಸರ್ಕಾರ ವ್ಯವಸ್ಥೆಗೆ ರಾಷ್ಟ್ರಮಟ್ಟದಲ್ಲಿ ಉತ್ತಮ ಸೇವೆಯನ್ನು ನೀಡಿದರು. ರಾಜಕೀಯ ಸ್ಥಿರತೆಯ ಪ್ರಯತ್ನ, ಆರ್ಥಿಕ ಬೆಳವಣಿಗೆಯಲ್ಲಿ ಪ್ರಗತಿ, ಉತ್ತಮ ಹೆದ್ದಾರಿಗಳ ನಿರ್ಮಾಣ, ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಉತ್ತಮ ವಿದೇಶಾಂಗ ಸಂಬಂಧಗಳು ಇವರ ಸರ್ಕಾರದ ಪ್ರಮುಖ ಸಾಧನೆಗಳೆನ್ನಬಹುದು. ಅದಕ್ಕಾಗಿಯೇ

ಭಾರತದ ಶ್ರೇಷ್ಠ ರಾಜಕೀಯ ಗಣ್ಯ ವ್ಯಕ್ತಿಗಳಲ್ಲಿ  ಅಟಲ್ಪ ಜಿ ಅಪರೂಪದ ಜನಸಾಮಾನ್ಯರ ಅಚ್ಚುಮೆಚ್ಚಿನ ನಾಯಕರೆಂದು ಜನರು ಪ್ರೀತಿಯಿಂದ ಕರೆಯುತ್ತಾರೆ.

ದೇಶದ ಪ್ರಜೆಗಳ ನಿಸ್ವಾರ್ಥ ಸೇವಕ : ಭಾರತದ ಮಾಜಿ ಪ್ರಧಾನಮಂತ್ರಿ, ರಾಜಕಾರಣಿ, ಶ್ರೇಷ್ಠ ಸಂಸದೀಯ ಪಟು, ವಾಗ್ಮಿ, ಕವಿ, ನೇತಾರ ಹಾಗೂ ಜನನಾಯಕ. ವಿದೇಶಾಂಗ ಸಚಿವರಾಗಿ, ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿದ್ದ ಇವರು ತಮ್ಮ ಸಭ್ಯತೆ, ಹಾಸ್ಯಪ್ರಜ್ಞೆ, ಉದಾರ ವ್ಯಕ್ತಿತ್ವ ಮತ್ತು ನಡವಳಿಕೆಗಳಿಂದ ಅತ್ಯಂತ ಜನಪ್ರಿಯ ನಾಯಕರಾಗಿದ್ದವರು. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕೂಟದ ಅಧ್ಯಕ್ಷರಾಗಿ ಮೂರು ಬಾರಿ ಭಾರತದ ಪ್ರಧಾನಮಂತ್ರಿಯಾಗಿ

ದೇಶವನ್ನು ಮುನ್ನಡೆಸಿದ ಕೀರ್ತಿ ಇವರದು. ಇನ್ನು

ಇವರು ಪ್ರಧಾನಿಯಾಗಿ ಭಾರತದ ಆರ್ಥಿಕಾಭಿವೃದ್ಧಿಯ ಬಗ್ಗೆ ಅಪಾರ ಕಾಳಜಿ ವಹಿಸಿದರು. ಇವರ ಕಾಲದಲ್ಲಿ ಜಾಗತಿಕವಾಗಿ ಆರ್ಥಿಕ ಹಿನ್ನಡೆ ಇದ್ದಿತಾದರೂ ಭಾರತ ಶೇ. 5.8 ಜಿ.ಡಿ.ಪಿ ಅಭಿವೃದ್ಧಿ ಸಾಧಿಸಿದ್ದು ಒಂದು ಐತಿಹಾಸಿಕ ಸಾಧನೆ. ಅಟಲ್ ಜಿಯವರು ಗ್ರಾಮೀಣ ಬಡಜನರ ಆರ್ಥಿಕ ಸಬಲೀಕರಣದ ಮಹದೋದ್ದೇಶ ಹೊಂದಿ, ಉತ್ತಮ ಗ್ರಾಮೀಣ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ, ಮಾನವ ಸಂಪನ್ಮೂಲಗಳ ಬೆಳವಣಿಗೆಗೆ ಅನೇಕ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಭಾರತ ಒಂದು ಪ್ರಬಲ ಸ್ವಾವಲಂಬೀ ರಾಷ್ಟ್ರವಾಗಬೇಕೆಂಬುದು ಇವರ ಹೆಬ್ಬಯಕೆ. 52ನೆಯ ಸ್ವಾತಂತ್ರ್ಯ ದಿನಾಚರಣೆಯನ್ನು ಕೆಂಪುಕೋಟೆಯಲ್ಲಿ ಆಚರಿಸಿದ ಸಂದರ್ಭದಲ್ಲಿ ಭಾಷಣ ಮಾಡುತ್ತಾ "ನನಗೊಂದು ಭವ್ಯ ಭಾರತದ ಕಲ್ಪನೆಯಿದೆ. ಆ ಭಾರತ ಹಸಿವೆಯಿಂದ, ಭಯದಿಂದ ಮುಕ್ತವಾಗಿರುತ್ತದೆ. ಆ ಭಾರತ ನಿರಕ್ಷರತೆ ಮತ್ತು ದಾರಿದ್ರ್ಯದಿಂದ ದೂರವಾಗಿರುತ್ತದೆ" ಎಂದು ಹೇಳಿದ್ದಾರೆ. ಅಲ್ಲದೆ ದೇಶದ ನಾಲ್ಕೂ ಮೂಲೆಗಳಿಗೂ ಸಂಪರ್ಕ ಕಲ್ಪಿಸುವ 15 ಸಾವಿರ ಕಿ.ಮೀ. ಉದ್ದದ "ಸುವರ್ಣ ಚತುಷ್ಪಥ" ಹೆದ್ದಾರಿಯನ್ನು ದಾಖಲೆಯ ಸಮಯದಲ್ಲಿ ಪೂರ್ಣಗೊಳಿಸಿದ ವಾಜಪೇಯಿಯವರ ಸಾಧನೆ ಅಸಾಮಾನ್ಯವಾದುದು. ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಯನ್ನು ಜಾರಿಗೆ ತರುವ ಮೂಲಕ ಹಳ್ಳಿಹಳ್ಳಿಗಳಿಗೂ ರಸ್ತೆಯನ್ನು ಒದಗಿಸಿದ್ದು, "ಸರ್ವ ಶಿಕ್ಷಾ ಅಭಿಯಾನ" ಮೂಲಕ ಎಲ್ಲರನ್ನೂ ಸಾಕ್ಷರರನ್ನಾಗಿ ಮಾಡಲು ಮುಂದಾಗಿದ್ದ ವಾಜಪೇಯಿಯವರು ನಿಜಕ್ಕೂ ಒಬ್ಬ ದೂರದೃಷ್ಟಿ ಹೊಂದಿದ್ದ ನಾಯಕ.ರಾಷ್ಟ್ರ ರಾಜಕೀಯ ರಂಗದಲ್ಲಿ ಅಜಾತಶತ್ರು, ಚಾಣಾಕ್ಷ ರಾಜಕಾರಣಿ ಎಂದೇ ಪ್ರಖ್ಯಾತರಾದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಭಾರತ ಕಂಡ ಅಪರೂಪದ ಮಹಾ ರಾಜಕೀಯ ನಾಯಕರಲ್ಲಿ ಒಬ್ಬರು. ತಮ್ಮ ಅಸಾಮಾನ್ಯ ವಾಕ್ ಚಾತುರ್ಯ ಮತ್ತು ವಾಕ್ಪಟುತ್ವ ಈ ಮುತ್ಸದ್ದಿ ತಮ್ಮ ಅಧಿಕಾರಾವಧಿಯಲ್ಲಿ ಕೈಗೊಂಡ ದಿಟ್ಟ ಮತ್ತು ದೂರದೃಷ್ಟಿಯ ಕ್ರಮಗಳಿಂದ ಎಲ್ಲರ ಪ್ರಶಂಸೆಗೆ ಪಾತ್ರರಾದರು. ಕಾಂಗ್ರೆಸ್ಸೇತರ ಪ್ರಧಾನಮಂತ್ರಿಯಾಗಿ ದೀರ್ಘಕಾಲ ಸೇವೆ ಸಲ್ಲಿಸಿದ ವಾಜಪೇಯಿ, ಬಿಜೆಪಿಯ ಸೌಮ್ಯವಾದಿ ಧುರೀಣರೆಂದು ಗುರುತಿಸಿಕೊಂಡಿದ್ದು ಮರೆಯಲಾಗದು.ಇನ್ನು ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ಸಮಾನತೆಯ ಹರಿಕಾರರಾದ ಶ್ರೀವಾಜಪೇಯಿ ಅವರು ದೂರದೃಷ್ಟಿಯ, ಭಾರತವನ್ನು ಪ್ರಗತಿ ಪಥದತ್ತ ಕೊಂಡ್ಯೊಯುವ ಗುರಿಯನ್ನು ಹೊಂದಿ, ಭಾರತವನ್ನು ವಿಶ್ವದ ಅತ್ಯಂತ ಬಲಿಷ್ಠ ಮತ್ತು ಸಮೃದ್ಧಿ ದೇಶವನ್ನಾಗಿಸಲು ಕಂಕಣಬದ್ಧರಾಗಿ ಹಗಲಿರುಳು ದುಡಿದಿದ್ದಾರೆ.ಇದಲ್ಲದೆ ಅಟಲ್ ರವರು ಲಾಲ್ ಬಹದ್ದೂರ್ ಶಾಸ್ತ್ರೀಯವರಂತೆ ಸ್ವಂತ ಮನೆ ಹೊಂದಿರಲಿಲ್ಲ. ಗ್ವಾಲಿಯರ್ನಲ್ಲಿ ಇದ್ದ ತಮ್ಮ ತಂದೆಯ ಮನೆಯನ್ನು ವಾಜಪೇಯಿಯವರು ಗ್ರಂಥಾಲಯವಾಗಿ ಪರಿವರ್ತಿಸಿದ್ದಾರೆ. ಈಗ ಅದು ಸಾರ್ವಜನಿಕ ಗ್ರಂಥಾಲಯ. ಇಂದಿನವರೆಗೂ ಅಟಲ್ ರವರಿಗೆ ಸ್ವಂತ ಮನೆಯಿಲ್ಲ. ರಾಜಕೀಯದಲ್ಲಿ ಯಾವುದಾದರೂ ಪದವಿ ಪಡೆದ ವರ್ಷಗಳಲ್ಲಿ ಮನೆ, ಕಾರು, ಹಣ ಮಾಡಿಕೊಳ್ಳುವ ಜನರಿದ್ದಾರೆ. ಆದರೆ ಕಳೆದ 45 ವರ್ಷಗಳಿಂದ ರಾಜಕಿಯದಲ್ಲಿದ್ದು ಇನ್ನು ಸ್ವಂತ ಮನೆ ಹೊಂದದಿರುವುದು ಅಚ್ಚರಿಯ ಸಂಗತಿ.



ಒಟ್ಟಿನಲ್ಲಿ ವಾಜಪೇಯಿಯವರ ರಾಜಕೀಯ ಚತುರತೆಯನ್ನು, ಇಚ್ಚಾ ಶಕ್ತಿಯನ್ನು, ಆಡಳಿತ ವೈಖರಿಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಕೆಲಸ ಜೊತೆಗೆ

ಪಸರಿಸಲು ಪೋಖ್ರಾನ್ ಸ್ಫೋಟವೂ ಮುಖ್ಯ ಪಾತ್ರ ವಹಿಸಿತು ಎಂಬುದು ಯಾರು ಅಲ್ಲಗಳೆಯುವಂತಿಲ್ಲ.ಆದ್ದರಿಂದ  ಇಂತಹ ಮಾಹಾನ ವ್ಯಕ್ತಿ ದೇಶದ ಜನತೆಗೆ ಮತ್ತು ರಾಜಕೀಯ ಮುಖಂಡರಿಗೆ ಮಾದರಿ ಎಂದೇ ಹೇಳಬಹುದಾಗಿದೆ. ಅದಕ್ಕಾಗಿ ಇವರನ್ನು 90ರ ದಶಕದ ಭಾರತದ ರಾಷ್ಟ್ರ ರಾಜಕೀಯದ ಅತ್ಯಂತ ಪ್ರಬಲ ವ್ಯಕ್ತಿಯೆಂದು ಪರಿಗಣಿಸಿ  ಭಾರತ ಸೇರಿದಂತೆ ವಿಶ್ವ ಸಮುದಾಯ ಕರೆಯುತ್ತದೆ.ಆರ್ಥಿಕ ಸಂಕಷ್ಟಗಳಲ್ಲಿಯೂ ಯಶಸ್ವಿಯಾಗಿ ದೇಶ ಮುನ್ನಡೆಸಿದ್ದನ್ನು ಅಂತರಾಷ್ಟ್ರೀಯ ನಾಯಕರು, ದೇಶದ ರಾಜಕೀಯ ಮುಖಂಡರು ಆತ್ಮಸಾಕ್ಷಿಯಾಗಿ ಒಪ್ಪಿಕೊಳ್ಳುತ್ತಾರೆ.ಆದಕಾರಣ ಇಂತಹ ನಿಸ್ವಾರ್ಥ ಸೇವೆಗಳ ಮಾದರಿ ಸೇವಕ ಇನ್ನೊಮ್ಮೆ ಈ ದೇಶದಲ್ಲಿ ಹುಟ್ಟಿ ಬರಲೆಂದು ಬಯಸುತ್ತೇವೆ.

ಅಟಲ್ ಜಿಯವರ ಪ್ರಮುಖ ಕೃತಿಗಳು :

ವಾಜಪೇಯಿಯವರು ರಾಜಕಾರಣಿಯಲ್ಲದೆ ಕವಿಯೂ ಆಗಿದ್ದರು.ಹಿಂದೆ ಭಾಷೆಯಲ್ಲಿ ಅನೇಕ ಕವಿತೆಗಳನ್ನು ರಚಿಸಿದ್ದಾರೆ. ಇವರ ಇಪ್ಪತ್ತೊಂದು ಕವಿತೆಗಳ ಸಂಕಲನ ಟ್ವೆಂಟಿ– ಒನ್ – ಪೊಯಮ್ಸ್ ಎಂಬ ಹೆಸರಿನಲ್ಲಿ ಆಂಗ್ಲಭಾಷೆಗೆ ಅನುವಾದಗೊಂಡಿದೆ.

ಮೇರಿ ಇಕ್ಯಾವನ್ ಕವಿತಾಯೇಂ, ಸಂಕಲ್ಪಕಾಲ, ಕೈದಿ ಕವಿರಾಜ್ ಕೇ ಕುಂಡಲಿಯಾ (ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸೆರೆಮನೆಯಲ್ಲಿ ಇದ್ದಾಗ ರಚಿಸಿದ ಕವನಗಳು), ಅಮರ್ ಆಗ್ ಹೈ (ಕವನ ಸಂಕಲನಗಳು) ಮೇರಿ ಸಂಸದೀಯ ಯಾತ್ರಾ (4 ಸಂಪುಟಗಳಲ್ಲಿ), ಶಕ್ತಿ ಸೇ ಶಾಂತಿ, ಲೋಕ ಸಭಾ ಮೆ ಅಟಲ್‌ಜೀ (ಭಾಷಣಗಳ ಸಂಪುಟ: ಮೃತ್ಯು ಯಾ ಹತ್ಯಾ, ಅಟಲ್ ಬಲಿದಾನ್), ಜನಸಂಘ ಔರ್ ಮುಸಲ್ಮಾನ್, ಸಂಸದ್ ಮೇ ತೀನ್ ದಶಕ್ (ಮೂರು ಸಂಪುಟಗಳಲ್ಲಿ), ಇವು ಹಿಂದಿಯಲ್ಲಿ ರಚಿತವಾದ ಪ್ರಮುಖ ಕೃತಿಗಳಾಗಿವೆ. ಫೋರ್ ಡಿಕೇಡ್ಸ್ ಇನ್ ಪಾರ್ಲಿಮೆಂಟ್ (ಭಾಷಣಗಳು, ಮೂರು ಸಂಪುಟ) ಹಾಗೂ ನ್ಯೂ ಡೈಮೆನ್‌ಷನ್ಸ್ ಆಫ್ ಇಂಡಿಯಾಸ್ ಫಾರಿನ್ ಪಾಲಿಸಿ–ಇವು ಇಂಗ್ಲಿಷಿನಲ್ಲಿ ಹೊರಬಂದಿರುವ ಪ್ರಸಿದ್ಧ ಗ್ರಂಥಗಳಾಗಿವೆ. ಹೀಗೆ ಹಲವು ಕೃತಿಗಳು ದೇಶಕ್ಕೆ ನೀಡಿದ್ದಾರೆ.

ಅಟಲ್ ಜಿಯವರಿಗೆ ಸಂಧ ಗೌರವ ಪ್ರಶಸ್ತಿಗಳು: ಭಾರತೀಯ ಸಾರ್ವಜನಿಕ ಜೀವನದಲ್ಲಿ ಅಜಾತಶತ್ರು ಎಂದೇ ಹೆಸರು ಮಾಡಿದ್ದ ಅಟಲ್ ಜಿಯವರನ್ನು ಹುಡುಕಿಕೊಂಡು ಹಲವು ಪ್ರಶಸ್ತಿಗಳು ಬಂದಿವೆ, ಅವುಗಳಲ್ಲಿ ಪ್ರಮುಖವಾದವು ಹೀಗಿವೆ,

1992–ಪದ್ಮ ವಿಭೊಷಣ,1994 –ಲೋಕಮಾನ್ಯ ತಿಲಕ್,1994 – ಪಂಡಿತ ಗೋವಿಂದ ವಲ್ಲಭ್ ಪಂತ, 1994 ರಲ್ಲಿ ಅಟಲ್ ಜಿಯವರಿಗೆ ಸರ್ವ ಶ್ರೇಷ್ಟ ಸಂಸದೀಯ ಪಟು ಪ್ರಶಸ್ತಿ ಹಾಗೂ 2015 ರಲ್ಲಿ ಭಾರತ ರತ್ನ ಪ್ರಶಸ್ತಿ ಸೇರಿದಂತೆ

ಹತ್ತು ಹಲವಾರು ಪ್ರಶಸ್ತಿಗಳು ಇವರ ನಿಸ್ವಾರ್ಥ ಸೇವೆಗಾಗಿ ಸಂಧಿವೆ.

ಗೌರವ ಸಮರ್ಪಣೆ :

ಭಾರತದ ಅಜಾತ ಶತ್ರು ಅಟಲ್ ಜಿಯರನ್ನು ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಅವರನ್ನು ಗೌರವದಿಂದ ನೆನೆಯಬೇಕು. ಅವರ ವಿಚಾರ ಧಾರೆಗಳು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು. ಭವ್ಯ ಭಾರತದ ಅಭಿವೃದ್ಧಿಗಾಗಿ ಕಂಕಣಬದ್ಧರಾಗೋಣ, ಬದ್ಧರಾಗುವ ಮೂಲಕ ಅಟಲ್ ಬಿಹಾರಿ ವಾಜಪೇಯಿ ಜಿ ಯವರು  (25 – 12 – 1924) ಜನಿಸಿದ ಈ ಶುಭದಿನ ಹಿನ್ನೆಲೆಯಲ್ಲಿ ಅಟಲ್ ಜಿ ಅವರಿಗೆ ಗೌರವ ಪೂರ್ವಕವಾದ ಭಕ್ತಿ ಸಮರ್ಪಣೆಯ ನಮನಗಳನ್ನು ಸಲ್ಲಿಸುತ್ತೇವೆ.

**ಲೇಖಕರು : ಸಂಗಮೇಶ ಎನ್ ಜವಾದಿ. ಸಾಹಿತಿ, ಪತ್ರಕರ್ತ, ಬೀದರ ಜಿಲ್ಲೆ.**

ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16

# ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಬೀಳದಿದ್ದರೆ ಹೋರಾಟ ಅನಿವಾರ್ಯ: ಶ್ರೀದೇವಿ ಆರ್ ನಾಯಕ



ದೇವದುರ್ಗ: ತಾಲೂಕಿನಾದ್ಯಂತ ಅಕ್ರಮ ಚಟುವಟಿಕೆಗಳಾದ ಇಸ್ಪೀಟು,ಕಳ್ಳಬಟ್ಟಿ ಸಾರಾಯಿ, ಮಟ್ಕಾ ಮುಂತಾದ ಅಕ್ರಮ ಚಟುವಟಿಕೆಗಳು ಎಗ್ಗಿಲ್ಲದೆ ನಡೆಯುತ್ತಿದ್ದು,ಆದರೆ ಪೊಲೀಸ್ ಇಲಾಖೆಯವರು ತಿಳಿದೂ ತಿಳಿಯದಂತಿರುವುದು ಯಾಕೆ?ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ ಎಂದು ಶ್ರೀದೇವಿ ಆರ್ ನಾಯಕ ಹೇಳಿದರು. ಅವರು ರಾಯಚೂರು ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿ ಈ ಮಾತನ್ನು ಹೇಳಿದರು.

'ಅಕ್ರಮ ಮರಳುಗಣಿಗಾರಿಕೆ ತಡೆಯಲು ಮನವಿ'.

ದೇವದುರ್ಗ ತಾಲೂಕಿನಾದ್ಯಂತ ಕರ್ನಾಟಕದಲ್ಲಿಯೇ ಅತ್ಯಂತ ಸಮೃದ್ಧವಾದ ಮರುಳು ಸಂಪತ್ತು ಹೊಂದಿದ್ದು ಅದನ್ನು ಹಗಲು–ರಾತ್ರಿ ಎನ್ನದೇ ಮರುಳು ಲೂಟಿ ಮಾಡಿ ಸರ್ಕಾರಕ್ಕೆ ನೂರಾರು ಕೋಟಿ ರೂಪಾಯಿಗಳ ನಷ್ಟ ಮಾಡಲಾಗುತ್ತಿದೆ.ಅಂತವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಪೊಲೀಸ್ ವ–ರಿಷ್ಠಾಧಿಕಾರಿಗಳಿಗೆ ಮನವಿ ಮೂಲಕ ತಿಳಿಸಿದರು. ತಾಲೂಕು ಮತ್ತು ಜಿಲ್ಲಾದ್ಯಂತ ಅಕ್ರಮ ಚಟುವಟಿ–ಕೆಗಳಿಗೆ ಕಡಿವಾಣ ಹಾಕಿ ಒಂದು ವಾರದ ಒಳಗೆ ಕ್ರಮ ಕೈಗೊಳ್ಳಬೇಕು ಎಂದು ಮನವಿ ಸಲ್ಲಿಸಿದರು. ಒಂದು ವೇಳೆ ಕ್ರಮ ಕೈಗೊಳ್ಳದಿದ್ದರೆ ಹೋರಾಟ ಅನಿವಾರ್ಯ ಎಂದು ಹೇಳಿದರು.

–ಬಸವರಾಜ

# ನಗರಗಳಂತೆ ಗ್ರಾಮಗಳು ಸುಧಾರಣೆಯತ್ತ ಕಾಲಿಡುತ್ತಿವೆ....

ಕುಂದಗೋಳ :ತಾಲೂಕಿನ ಹಿರೇಗುಂಜಳ ಗ್ರಾಮದಲ್ಲಿ ನೂತನವಾಗಿ ಹೊಸ ಕಸ ವಿಲೇವಾರಿ ವಾಹನವು ಗ್ರಾಮ ಪಂಚಾಯತಿ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಗ್ರಾಮವು ಯಾವ ನಗರಕ್ಕೂ ಕಡಿಮೆಯೇನಿಲ್ಲ ಅನ್ನುವ ರೀತಿಯಲ್ಲಿ ಊರೊಳಗಿನ ಕಸವನ್ನು ಊರಿಂದ ಆಚೆಗೆ ಹಾಕುವ ಸಾಹಸ ಕಾರ್ಯಕ್ಕೆ ಮುಂದಾಗಿದೆ. ಊರಿನ ಜನರು ಹೇಳುವ ಪ್ರಕಾರ ಊರು ಸ್ವಚ್ಛವಾಗಿದ್ದರೆ ಜನರು ಆರೋಗ್ಯವಂತರಾಗಿರುತ್ತಾರೆ, ಕರೋನ, ಮಲೇ–ರಿಯಾ, ಡೆಂಗ್ಯೂ ಮತ್ತು ಇನ್ನಾವುದೇ ಮಹಾಮಾರಿ ರೋಗದ ಬಾದೆ ಇಲ್ಲದೆ ನಾವು ಊರನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಬಹುದು. ಊರು ಸುಧಾರಣೆಯತ್ತ ಸಾಗಬೇಕಾದರೆ ಊರಿನ ಆಡಳಿತಗಾರರು ಶಿಕ್ಷಣ ಪಡೆದವರು ಆಗಿರಬೇಕು ಶಿಕ್ಷಿತ ಆಡಳಿತ ವರ್ಗ ಗ್ರಾಮವನ್ನು ಸುವ್ಯವಸ್ಥೆ ಇಂದ ನೋಡಿಕೊಳ್ಳುವವರು, ಅವರನ್ನು ಆಯ್ದು ತರುವದು ನಮ್ಮ ಜಾಣ್ಮೆ ಮತ್ತು ಹಕ್ಕುಕರ್ತವ್ಯ ಎಂದು ಹೇಳುತ್ತಾರೆ.

ಗ್ರಾಮಗಳು ನಗರಗಳ ಹಾಗೆ ಸುಧಾರಣೆ ಹೊಂದಬೇಕು ಗ್ರಾಮಗಳು ತಾಲೂಕಾ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ವಚ್ಚ ಸುಂದರ ಗ್ರಾಮಗಳಾಗಬೇಕು. ಹಾಗೆಯೇ ಮತ್ತೊಂದು ಗ್ರಾಮಕ್ಕೆ ಮಾದರಿಯಾಗಿ ತೋರಬೇಕು. ದೇಶದ ಪ್ರಧಾನಿಯವರ ಕನಸಿನಂತೆ ಊರಿನಲ್ಲಿ ಸ್ವಚ್ಚ ಭಾರತ್ ಮಿಷನ್ ಯೋಜನೆ ರೂಪಿಸಿಕೊಂಡು ಊರಿನ ಜನತೆಗೆ ಮೂಲದಲ್ಲೇ ಕಸವನ್ನು ಹಸಿಕಸ ಮತ್ತು ಒಣಕಸ ಎಂದು ಬೇರ್ಪಡಿಸಿ ಹಸಿ ಕಸವನ್ನು ಹಸಿರು ಡಬ್ಬಕ್ಕೆ ವಣ ಕಸವನ್ನು ಕೆಂಪು ಡಬ್ಬಕ್ಕೆ ಹಾಕಿ ಎಂದು ತಿಳಿಸಲಾಗಿದೆ, ಊರಿನ ಪ್ರತಿ ಮನೆಗೆ ಕಸವನ್ನು ಹಾಕಲು ಡಬ್ಬಿಗಳನ್ನು ನೀಡಲಾಗಿದೆ. ಅಷ್ಟೇ ಅಲ್ಲದೆ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ ಎಂದು ತಿಳಿಸಿದ್ದೇವೆ. ವಾರಕ್ಕೆ ಎರಡ–ರಿಂದ ಮೂರು ಬಾರಿ ಕಸ ವಿಲೇವಾರಿ ವಾಹನವು ಊರಿನ ಬೀದಿ ಬೀದಿ ಬರುತ್ತದೆ ಆಗ ಜನರು ತಮ್ಮ ತಮ್ಮ ಮನೆಯ ಕಸವನ್ನು ವಾಹನಕ್ಕೆ ತಂದು ಹಾಕಬೇಕು ಎಂದು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಡಿ. ಆರ್. ಅಣ್ಣಿಗೇರಿ ತಿಳಿಸಿದರು.

ಗ್ರಾಮ ಪಂಚಾಯತಿ ನಿಯಮದಂತೆ ಊರಿನ ಜನರು ತಿಳುವಳಿಕೆ ಇಂದ ಕಸದ ಗಾಡಿಗೆ ಕಸವನ್ನು ತಂದು ಹಾಕುತ್ತಿದ್ದಾರೆ. ಆ ಕಸವನ್ನು ಊರಿನ ಹೊರಗೆ ಕಟ್ಟಿಸಿರುವ ಕಸಮುಕ್ತಿ ಘಟಕಕ್ಕೆ ತೆಗೆತುಕೊಂಡು ಹೋಗಿ ಅಲ್ಲಿ ಕಸಕ್ಕೆ ಮುಕ್ತಿ ಕಾಣಿಸಲಾಗುತ್ತದೆ. ಒಟ್ಟಾರೆ ಗ್ರಾಮಗಳು ಸ್ವಚ್ಛತೆಯಡೆಗೆ ನಡೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

**––ಪ್ರವೀಣ್ ಎಸ್ ಕಾಲವಾಡಮಠ ಕುಂದಗೋಳ**

# ಸಗರ ನಾಡಿನವರು ಎಂದು ಹೇಳಿಕೊಳ್ಳಲು ಇವರಿಗೆ ಹೆಮ್ಮೆ..

ಸಗರ ನಾಡು, ಇದು ಏನೂ ಬೇರೆ ರಾಜ್ಯದ ಭಾಗವಲ್ಲ, ನಮ್ಮ ಕರ್ನಾಟಕದ ಒಂದು ಪ್ರದೇಶ, ಅದೂ ನಮ್ಮ ಹಳೆಯ ಕಲಬುರ್ಗಿ ಜಿಲ್ಲೆಯ ಒಂದು ಪ್ರದೇಶ.. ಈಗ ಇದು ಯಾದಗಿರಿ ಜಿಲ್ಲೆಗೆ ಸೇರಿದೆ..

ಹಾಗೆ ನೋಡಿದರೆ, ತಾಳಿಕೋಟಿಯ ಹತ್ತಿರದ ಕೃಷ್ಣಾ ನದಿ ದಡದಿಂದ, ಭೀಮಾ ನದಿಯ ದಡದ ನಡುವಿನ ಪ್ರದೇಶಕ್ಕೆ ಸಗರನಾಡು ಎಂದು ಕರೆಯುತ್ತಾರೆ..

ಈ ಜನರ ಆಡುವ ಭಾಷೆ ಕನ್ನಡ... ಆದರೂ ಸ್ವಲ್ಪ ಟೋನ್ ಬೇರೆ, ಇಲ್ಲಿಯ ಸಂಸ್ಕೃತಿ, ಇವರ ಜೀವನ ಶೈಲಿ, ಎಲ್ಲವೂ ನಮ್ಮ ಹಾಗೇನೇ, ಆದರೆ ನಾವು ಸಗರ ನಾಡಿನವರು ಎಂದು ಹೇಳಿ ಕೊಳ್ಳಲು ಇವರಿಗೆ ಹೆಮ್ಮೆ..

ಹೌದು.. ಇವರ ಸ್ವಾಭಿಮಾನವೂ ನಿಜವೇ..

ನಾನು ಕೆಲವು ವರ್ಷಗಳ ವರೆಗೆ ಈ ಸಗರ ನಾಡಿನಲ್ಲಿ ವೈದ್ಯಾಧಕಾರಿ ಯಾಗಿ ಸೇವೆ ಸಲ್ಲಿಸಿದ ಅನುಭವ ಇದೆ..(1985 ರಿಂದ 1988 ವರೆಗೆ ನಾನು ಕೆಂಭಾವಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅಡಿಯಲ್ಲಿ ಬರುವ ಒಂದು ಪ್ರಾಥಮಿಕ ಆರೋಗ್ಯ ಘಟಕ.. ನಗನೂರು ಎಂಬ ಊರಲ್ಲಿ ಸೇವೆ ಸಲ್ಲಿಸಿದ್ದೇನೆ).

ಈಗೀನ ಶಹಾಪುರ, ಸುರಪುರ ಮತ್ತು ಯಾದಗಿರಿ ತಾಲೂಕು ಇವೆಲ್ಲ ಬರುವವು ಸಗರನಾಡಿನಲ್ಲಿ..

ನಾನು ವಾಸಿಸಿದ್ದು ಸುರಪುರ ಊರಲ್ಲಿ.. ಹಾಗಾಗಿ ನನಗೆ ಹೆಚ್ಚಿನ ಮಾಹಿತಿ ಇರುವದು ಸುರಪುರ ಊರಿನ ಮತ್ತು ಅದರ ಸುತ್ತ ಮುತ್ತಲಿನ ಭಾಗದಬಗ್ಗೆ..

ಸುರಪುರ ಒಂದು ಸಣ್ಣ ಸ್ವಾತಂತ್ರ ರಾಜ್ಯವಾಗಿ–ತ್ತು.. "ಶ್ರೀ ರಾಜಾ ವಂಕಟಪ್ಪ ನಾಯಕ್" ಇವರ ಹೆಸರು ಯಾರು ಕೇಳಿಲ್ಲ..?

ಬ್ರಿಟಿಷರ ವಿರುದ್ಧ ಹೋರಾಡಿದ ಧೀಮಂತ ರಾಜ.. ಈಗಲೂ ಇವರ ವಂಶದವರು ಸುರಪುರ ಊರಲ್ಲಿ ಇದ್ದಾರೆ, ಒಂದು ಹಳೆಯ ಕಾಲದ ಅರಮನೆ ಕೂಡ ಇದೆ. ಈ ರಾಜ ಮನೆತನದ ಕುಲದೇವರು ತಿರುಪತಿಯ ವೆಂಕಟೇಶ್ವರ, ಈಗಲೂ ಇವರ ವಂಶದವರ ಹೆಸರಿನಲ್ಲಿ ತಿರುಪತಿ ತಿಮ್ಮಪ್ಪ ನಿಗೆ ದಿನಾಲೂ ಆರತಿ ಆಗುತ್ತದೆ..

ಈ ರಾಜರ ಉಪ ಪತ್ನಿಗೆ ಒಂದೊಂದು ಊರು ಬಳುವಳಿ ಯಾಗಿ ಕೊಟ್ಟ ಹಾಗೆ ಕಾಣುತ್ತದೆ..

ಸುರಪುರ ಊರು ಇಂದು ಎತ್ತರವಾದ ಪ್ರದೇಶದ ಮೇಲಿದೆ, ನೀವು ಸುರಪುರಿಗೆ ಹೋಗಬೇಕಾದರೆ ತಿರುಮಲ ಬೆಟ್ಟ ಏರಿದ ಹಾಗೆ ಏರಬೇಕು.. ಸುರಪುರ ಊರಿನ ಸುತ್ತಲೂ ಇರುವ ಗ್ರಾಮಗಳು...

ತಿಮ್ಮಾಪುರ.. 'ರಾಣಿ ತಿಮ್ಮಕ್ಕನ' ಹೆಸರಿನಲ್ಲಿ..

ರುಕ್ಮಾಪೂರ.. 'ರಾಣಿ ರುಕ್ಕಮ್ಮನ' ಹೆಸರಿನಲ್ಲಿ..

ವೆಂಕಟಾಪುರ.. 'ರಾಣಿ ವೆಂಕಮ್ಮನ' ಹೆಸರಿನಲ್ಲಿ..

ಹೀಗೆ ಅನೇಕ ಗ್ರಾಮಗಳು ಸುರಪುರ ಊರಿನ ಸುತ್ತಲೂ ಈಗಲೂ ಇವೆ..

ಸುರಪುರ ಸಂಸ್ಥಾನ ಮುಂದೆ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟು ಒಬ್ಬ ಆಂಗ್ಲ ಅಧಿಕಾರಿ ಶ್ರೀ ಟೈಲರ್ ಈ ಸಂಸ್ಥಾನದ ಆಡಳಿತ ಅಧಿಕಾರಿ ಆಗಿದ್ದನಂತೆ.. ಅವನ ಹೆಸರಿನಲ್ಲಿ ಊರ ಬೆಟ್ಟದ ತುದಿಯಲ್ಲಿ ಒಂದು ಭವ್ಯ ಬಂಗಲೆ ಇದೆ..( ಇದರ ಹೆಸರು... ಟೈಲರ್ಸ್ ಮಂಜಿಲ್..)

ಇದೊಂದು ವಿಶೇಷವಾಗಿ ಕಟ್ಟಿದ ಒಂದು ಗೆಸ್ಟ್ ಹೌಸ್..(ಇದರ ವಾಸ್ತು ಕಲೆ ಒಂದು ಅದ್ಭುತ.. ಬಿಜಾಪುರದ ಗೋಲಗುಮ್ಮಟ ತರಹ.. ಇದರ ಒಂದು ಬಾಗಿಲು ಮುಚ್ಚಿದರೆ ಉಳಿದ ಬಾಗಿಲು ಗಳು ಅಲುಗಾಡುವವು.. ಬಿಜಾಪುರದ ಗೋಳಗುಮ್ಮಟ "ವಿಷ್ಪರಿಂಗ್ ಗ್ಯಾಲರಿ" ತರಹ..)

ಟೈಲರ್ಸ್ ಮಂಜಿಲ್ ಇರುವದು ಊರಿನಿಂದ ಬಹು ದೂರ.. ಬೆಟ್ಟದ ಮೇಲೆ.. ಬಹುಷಃ ಕಳ್ಳರಿಂದ ಸಾವಧಾನ ಇರಲು ಈ ರೀತಿ ಇದನ್ನು ಕಟ್ಟಿರಬೇಕು..

ಈಗ ಈ ಭವ್ಯ ಕಟ್ಟಡ ಒಂದು ಸರಕಾರಿ ಅಥಿತಿ ಗೃಹ ಆಗಿದೆ..

ಇದರ ಮುಂದೆ ಸ್ವಲ್ಪ ಅಂತರದಲ್ಲಿ ಒಂದು ದೊಡ್ಡ ಬಂಡೆ ಇದೆ.. ಈ ಬಂಡೆಯ ಮೇಲೆ ಏರಿ ಕುಳಿತು ಕೊಳ್ಳಲು ಮೆಟ್ಟಲು ಗಳಿವೆ.. ಇದರ ಮೇಲೆ ಕುಳಿತು ಸುತ್ತ ನೋಡಿದರೆ ಸುರಪುರ ಊರಿನ ವಿಹಂಗಮ ನೋಟ ಕಣ್ಣಿಗೆ ಹಿತ.. ದೂರದ ಕೃಷ್ಣ ನದಿ ಕೂಡಾ ಕಾಣುತ್ತದೆ..(ಇಲ್ಲಿಂದ ಕೃಷ್ಣ ನದಿ ಸಮಾರು 7/8 ಕಿಮೀ ದೂರಿದೆ.. ದೂರದ ಶೆಳ್ಳಗಿ ಗ್ರಾಮದ ಹತ್ತಿರ ಹರಿಯುತ್ತದೆ).

ಸಾಯಂಕಾಲ ಅದೆಷ್ಟೋ ಸಲ ನಾನು ಈ ಟೈಲರ್ಸ್ ಮಂಜಿಲ್ ಮತ್ತು ಆ ಬೆಟ್ಟ ಹತ್ತಿ ಸುರಪುರ ಊರಿನ ವಿಹಂಗಮ ನೋಟವನ್ನು ನೋಡಿದ್ದೇನೆ..

"ವೇಣುಗೋಪಾಲ ದೇವಸ್ಥಾನ'..

ಇದೊಂದು ಅದ್ಭುತ ವಾಸ್ತು ಕಲೆಯ ಉದಾಹರಣೆ. ಊರಿನ ಮಧ್ಯ ಭಾಗದಲ್ಲಿ ಸ್ವಲ್ಪ ಎತ್ತರದಲ್ಲಿ ಕಟ್ಟಲ್ಪಟ್ಟ ಶ್ರೀ ವೇಣುಗೋಪಾಲ ದೇವಸ್ಥಾನ.. ಸುಂದರ ಮಂದಿರ..

ಇನ್ನೂ ಸುರಪುರದ ಬಾವಿಗಳು..

ಬಲು ಪ್ರಸಿದ್ಧ.. ಸುರಪುರ ಊರಿಗೆ ಈಗ ಕೃಷ್ಣೆಯ ನೀರು ಸರಬರಾಜು ಆಗುತ್ತಿದೆ.. ಹಿಂದಿನ ಕಾಲದಲ್ಲಿ ಈ ರೀತಿಯ ವ್ಯವಸ್ಥೆ ಇರಲಿಕ್ಕಿಲ್ಲ.. ಆಗ ಇಲ್ಲಿಯ ಜನರಿಗೆ ಬಾವಿಯ ನೀರೇ ಗತಿ ಕುಡಿಯಲು ಮತ್ತು ಬಳಿಸಲು.. ಹೀಗಾಗಿ ಈ ಊರಿನಲ್ಲಿ ಅನೇಕ ಬಾವಿಗಳು ಇವೆ. ಬಹುತೇಕ ಮನೆಯೆಲ್ಲೊಂದು ಸೇದಿ ಬಾವಿ ಇದೆ.. ಆದರೆ ಈ ಬಾವಿಗಳ ನೀರು ಕುಡಿಯಲು ಅಷ್ಟು ಸಿಹಿ ಅಲ್ಲ ಎಂದು ಸುರಪುರ ಊರಿನ ಜನ ಕುಡಿಯುವುದು ಒಂದು ಪ್ರಸಿದ್ಧ ಬಾವಿಯ ನೀರನ್ನೇ, ಅದೇ.. ಯಲ್ಲಪ್ಪ ನ ಬಾವಿ . ಈ ಬಾವಿ ಇರುವದು ಊರಿನಿಂದ ಬಹು ದೂರ.. ಆ ಟೈಲರ್ಸ್ ಮಂಜಿಲ್ ಹತ್ತಿರ.. ಅಂದರೆ ಮುಖ್ಯ ಊರಿನಿಂದ ಸಮಾರು 2/3ಕಿಮೀ ದೂರ.. ಆದರೂ ಸುರಪುರ ಊರಿನ ಜನರಿಗೆ ಯಲ್ಲಪ್ಪ ನ ಬಾವಿಯ ನೀರೇ ಬೇಕು ಕುಡಿಯಲು..

ಅಷ್ಟು ಪ್ರಾಮುಖ್ಯತೆ ಈ ಬಾವಿಗೆ..

ನಾನೂ ಕುಡಿದು ನೋಡಿದ್ದೇನೆ ಯೆಲ್ಲಪ್ಪನ ಬಾವಿ ನೀರನ್ನು.. ಬಹಳ ರುಚಿ.. ತಂಪಾದ ತೆಂಗಿನ ನೀರಿನ ತರಹ. ..ಅಷ್ಟೊಂದು ಸಿಹಿ ನೀರು.. ಆದರೆ.. ಆದರೆ..ಏನು...

ಇದೊಂದು ಇಳಿ ಬಾವಿ.. ನಾರು ಹುಣ್ಣಿನ ಬಾವಿ.. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಈ ಬಾವಿಯ ನೀರನ್ನು ಕುಡಿಯುವರ ಸಂಖ್ಯೆ ಕಡಿಮೆ ಆಗ್ತಾ ಇದೆ..

ಯಲ್ಲಪ್ಪನ ಬಾವಿ ನೀರು ಕುಡಿಯುವದು ಸುರಪುರ ಜನರ ಒಂದು ಪ್ರತಿಷ್ಠೆ...

ಎಲ್ಲಪ್ಪನ ಬಾವಿ ನೀರ...

ಆದ್ರ... ಆ ಬಾವಿ ಬಲು ದೂರ .

ರುಚಿ... ತೆಂಗಿನ ನೀರಿನ ಹಾಗ..

ಆದ್ರ... ಕುಡಿದ ವರಿಗೆಲ್ಲ ನಾರ...

ಗೀಯ.. ಗೀಯ ..

ಗೀ.. ಗಿ.. ಗಿ.....

ಹೀಂಗ ಈ ಬಾವಿ ಬಗ್ಗೆ ಜನ ಹಾಡು ಕಟ್ಟಿ ಹಾಡ್ತಾರ...

ಇದಲ್ಲದೆ ಇನ್ನೂ ಅನೇಕ ಇಲಿ ಬಾವಿ ಇವೆ ಸುರಪುರ ಊರಲ್ಲಿ.. ಬಡಿಗೇರ ಬಾವಿ, ದೇವರ ಬಾವಿ, ನಾಕಿ ಬಾವಿ.. ಇತ್ಯಾದಿ..

ಈಗ ಇವೆಲ್ಲ ಬಾವಿಗಳ ನೀರು ಯಾರೂ ಕುಡಿಯುವುದಿಲ್ಲ, ಸಮೀಪ ಹರಿಯುವ ಕೃಷ್ಣಾ ನದಿಯ ನೀರು ಫಿಲ್ಟರ್ ಮಾಡಿ ಸರಬರಾಜು ಮಾಡ್ತಾರೆ.. (ಸಮೀಪದ ಶೆಳ್ಳಗಿ ಗ್ರಾಮದಿಂದ ಕೃಷ್ಣಾ ನದಿಯ ನೀರು ಲಿಫ್ಟ್ ಮಾಡಿ ಫಿಲ್ಟರ್ ಮಾಡಿ ಸರಬರಾಜು ಮಾಡ್ತಾರೆ..)

ಸುರಪುರ ಊರು ಸಾಂಸ್ಕೃತಿಕ ವಾಗಿಯೂ... ಮುಂದು ವರಿದ ಊರು..

ಇಲ್ಲಿಯ ಸುರಪುರ ಪಂಚಾಂಗ ಬಲು ಪ್ರಸಿದ್ಧ..

ಸುರಪುರ ಊರಿನ ಹತ್ತಿರವೇ ಕಣ್ವ ಮಠ ಇದೆ.

ಸುಮಾರು 15/20 ಕಿಮೀ ಅಂತರದಲ್ಲಿ ಪ್ರಸಿದ್ಧವಾದ ಮೌನೇಶ್ವರ ದೇವಸ್ಥಾನ ಇದೆ..(ಹಿಂದು ಮುಸ್ಲಿಂ ಭಾವೈಕ್ಯತೆಯ ಒಂದು ಭವ್ಯ ಮಂದಿರ.. ಹತ್ತಿರವೇ ಕೃಷ್ಣಾ ನದಿ ಹರಿಯುತ್ತಾಳೆ ಸದ್ದು ಮಾಡದೆ..)

ದೇವರ ದಾಸಿಮಯ್ಯನ ಹೆಸರು ಕೇಳದವರು ಕಡಿಮೆ.. ಸುರಪುರ ಊರಿನಿಂದ 30 ಕಿಮೀ ದೂರದಲ್ಲಿ ಮುದನೂರು ಎಂಬ ಊರನಲ್ಲಿ ಹಿಂದೆ ದೇವರ ದಾಸಿಮಯ್ಯ ಎಂಬ ಮಹಾನ ಕನ್ನಡದ ಕವಿ ಆಗಿ ಹೋದ..

ಅವನ ಕವಿತೆ ಒಂದು ನನಗೆ 9ನೆಯ ಇಯತ್ತೆ ಯಲ್ಲಿ ಕನ್ನಡ ಪಠ್ಯ ಪುಸ್ತಗಳಲ್ಲಿ ಇತ್ತು..

ಅದು ..

ಹರಿದ ಗೋಣಿಯಲ್ಲೊಬ್ಬ..

ಕಳವೇಯ ತುಂಬಿದ..

ಇರುಳೆಲ್ಲ ನಡೆದನು..

ಸುಂಕ್ಕ ಕ್ಕಂಜಿ..

ಕಳವೆಯಲ್ಲ ಹೋಗಿ.. ಬರೀ ಗೋಣಿ ಉಳಿದಿತ್ತು..

ಅಳಿ ಮನದವನ ಭಕ್ತಿ, ಇಂತಾಯಿತ್ತು ಕಾಣಾ ರಾಮನಾಥ...

ಸುರಪುರ ಊರು ಕಲ್ಲು ಬಂಡೆಗಳ ನಡುವೆ.. ಹೀಗಾಗಿ ಇಲ್ಲಿಯ ಹವಾಗುಣ ತುಸು ಊಷ್ಣ ಮಯ.. ಬಿಸಿಲು ಜಾಸ್ತಿ.. ಗುಡ್ಡ ಬೆಟ್ಟಗಳ ನಡುವೆ ಬೆಳೆಯುವ ಸೀತಾ ಫಲ ಹಣ್ಣು ಹೇರಳ ಇಲ್ಲಿ.. ಅಷ್ಟೇ ರುಚಿಕರವೂ.. ಇಲ್ಲಿಯ ವ್ಯಾಪಾರ ಬಹುತೇಕ ಮಾರ್ವಾಡಿ ಜನರ ಕೈಯಲ್ಲಿ.. ದೂರದ ರಾಜಸ್ಥಾನ ರಾಜ್ಯ ದ ಮಾರವಾಡ ಪ್ರದೇಶದಿಂದ ಬಂದ ಈ ಜನರು ಈಗ ಪಕ್ಕಾ ಇಲ್ಲಿಯವರೇ ಆಗಿ ಹೋಗಿದ್ದಾರೆ..

ಹೆಸರಾಂತ ವೈದ್ಯ ರಾಗಿದ್ದಾರೆ..(ನನ್ನ ಮಿತ್ರ. ..ಆಡಿ. ಎಲ್.ಎಸ್.ರಾಠಿ..)

ಆಡಿ. ಇಂದರ್ ಚಂದರ್ ಜೈನ್..

ರಾಜಾ ವೆಂಕಟಪ್ಪ ನಾಯಕನ ಮನೆತನ ದವರು ಸಕ್ರೀಯ ರಾಜಕಾರಣದಲ್ಲಿ ಇದ್ದಾರೆ..

ಹೀಗೆ ನನಗೆ ತಿಳಿದಷ್ಟು ..ನಾನು ಈ ಸಗರನಾಡಿನ ಒಂದು ರಾಜರ ಸಂಸ್ಥಾನ ಸುರಪುರ ಊರಿನ ಬಗ್ಗೆ ಬರೆದಿದ್ದೇನೆ.

**–ಡಾ.ಉದಯ ಪಾಟೀಲ, ನೇತ್ರ ತಜ್ಞರು . ಕಲಬುರ್ಗಿ.**

ಕರುನಾಡ ಕಂದ
ಸಂಪುಟ–1 । ಸಂಚಿಕೆ–5
ದಿನಾಂಕ: 01–01–2022 । ಪುಟಗಳು: 16



ಬಸವರಾಜ ಬಳಿಗಾರ
ಸಂಪಾದಕರು, ಕರುನಾಡ ಕಂದ

## ಕರುನಾಡ ಕಂದ ಪತ್ರಿಕಾ ಬಳಗದ ವತಿಯಿಂದ
## ಹೊಸ ವರ್ಷದ ಹಾಗೂ ಸಂಕ್ರಾಂತಿ ಹಬ್ಬದ ಶುಭಾಷಯಗಳು

# 2022

### January

| Su | M | T | W | T | F | Sa |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |

### February

| Su | M | Tu | W | Th | F | Sa |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | | | | | |

### March

| Su | M | Tu | W | Th | F | Sa |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### April

| Su | M | T | W | T | F | Sa |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

### May

| Su | M | T | W | T | F | Sa |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

### June

| Su | M | T | W | T | F | Sa |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

### July

| Su | M | T | W | T | F | Sa |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |
| 31 | | | | | | |

### August

| Su | M | T | W | T | F | Sa |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

### September

| Su | M | T | W | T | F | Sa |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

### October

| Su | M | T | W | T | F | Sa |
|---|---|---|---|---|---|---|
| | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |
| 30 | 31 | | | | | |

### November

| Su | M | T | W | T | F | Sa |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### December

| Su | M | T | W | T | F | Sa |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

KARUNADA KANDA, Fortnightly, Published and Owned by Karibasappa Baligar, At & Post: Gunnal-583237, Tq: Yalaburga, Dist: Koppal. Printed at Manohar printery , Azad road CBT HUBLI, Dist. Dharwad -580 020 email-karunadakanda33@gmail.com, Ph:9986366909, 9742776385. KARKAN/2021/27600. Editor: Basavaraj Baligar.